ಸಂಪುಟ: 21, ಸಂಚಿಕೆ: 292, ಪುಟಗಳು: 8, ಮಂಗಳವಾರ, 30 ಜುಲೈ 2024 RNI NO. KARKAN/2002/08054
epaper: www.sanjemugilu.com

ಸುದ್ದಿಗಳ ಹೊನಲು

# ಸಂಜೆ ಮುಗಿಲು

ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ

ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ ₹3



ವೇಣು ಸಾರಥ್ಯದಲ್ಲಿ...



ದಶಪ್ರಮತಿ ಮುದ್ರಣಾಲಯ
dashapramathi mudranalaya
PRE-PRESS PRINTERS
Contact: +91 9483589085 | e-mail: dashapramathimudranalaya@gmail.com
We Undertake Printing of Newspapers | Tabloids | Magazines



**ಸುಭಾಷಿತ**

ಸಂಕಷ್ಟ ಇಲ್ಲದಿದ್ದರೆ ನಮ್ಮ ತಪ್ಪುಗಳಿಂದ ನಾವು ಪಾಠ ಕಲಿಯುವುದಿಲ್ಲ.
। ಏಂಜಲಿನಾ ಜೋಲಿ

**ಪಂಚಾಂಗ**

(ಮಂಗಳವಾರ 30, ಜುಲೈ-2024)
- ಶ್ರೀ ಕ್ರೋಧಿನಾಮ ಸಂವತ್ಸರ,
- ದಕ್ಷಿಣಾಯನ, ಗ್ರೀಷ್ಮ ಋತು
- ಆಷಾಡ ಮಾಸ, ಕೃಷ್ಣ ಪಕ್ಷ,
- ಮಂಗಳವಾರ, ದಶಮಿ ತಿಥಿ, ಕೃತಿಕ ನಕ್ಷತ್ರ
- ರಾಹುಕಾಲ : 3:40 ರಿಂದ 5:15
- ಗುಳಿಕಕಾಲ : 12:30 ರಿಂದ 2:05
- ಯಮಗಂಡಕಾಲ : 9:20 ರಿಂದ 10:55

## ಸಂಕ್ಷಿಪ್ತ ಸುದ್ದಿ

### ಮುಳುಗಿತು ತ್ರಿವೇಣಿ ಸಂಗಮ



**ಮಡಿಕೇರಿ:** ಕೊಡಗು ಜಿಲ್ಲೆಯಲ್ಲಿ ಮತ್ತೆ ಮಳೆಯ ಆರ್ಭಟ ಮುಂದುವರಿದಿದ್ದು, ಸೋಮವಾರ ಸಂಜೆ ಸುರಿದ ಭಾರೀ ಮಳೆಗೆ ತ್ರಿವೇಣಿ ಸಂಗಮ ಮುಳುಗಿದೆ. ಭಾಗಮಂಡಲ ವ್ಯಾಪ್ತಿಯಲ್ಲಿ ನಿನ್ನೆಯಿಂದ ಸುರಿದ ಭಾರಿ ಮಳೆಗೆ ತ್ರಿವೇಣಿ ಸಂಗಮ ಭರ್ತಿಯಾಗಿದ್ದು, ಭಾಗಮಂಡಲದ ಭಗಂಡೇಶ್ವರನ ಸನ್ನಿಧಿಯ ಮುಂಭಾಗದ ಮೆಟ್ಟಿಲುವರೆಗೆ ನೀರು ಆವರಿಸಿದೆ. ಭಾಗಮಂಡಲ ಸಂಪೂರ್ಣವಾಗಿ ಜಲಾವೃತವಾಗಿದೆ. ಕೆಳಭಾಗದ ನಾಪೋಕ್ಲು ರಸ್ತೆ ಮತ್ತು ಮಡಿಕೇರಿ ರಸ್ತೆ ಮುಳುಗಡೆಯಾಗಿದೆ. ಮಳೆ, ಗಾಳಿಯ ಆರ್ಭಟಕ್ಕೆ ಈ ಭಾಗದ ಜನರು ತೀವ್ರ ಆತಂಕಕ್ಕೆ ಒಳಗಾಗಿದ್ದಾರೆ.

### ಗಂಗಾ ಕಲ್ಯಾಣ ಯೋಜನೆಗೂ ಕನ್ನ ಹಾಕಿದ್ದಾರೆ ವಾಲ್ಮೀಕಿ ಹಗರಣದ ಆರೋಪಿಗಳು!



**ಬೆಂಗಳೂರು:** ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಹಗರಣ ಮಾಡಿದ ಆರೋಪಿಗಳು ಗಂಗಾ ಕಲ್ಯಾಣ ಯೋಜನೆಗೂ ಕನ್ನ ಹಾಕಿದ ವಿಚಾರ ಈಗ ತನಿಖೆಯಿಂದ ಬೆಳಕಿಗೆ ಬಂದಿದೆ. ಎಸ್‌ಸಿ ಮತ್ತು ಎಸ್‌ಟಿ ಸಮುದಾಯದ ಜಮೀನುಗಳಿಗೆ ಕೊಳವೆ ಬಾವಿ ತೆಗೆಯುವುದಕ್ಕೆ ಮೀಸಲಿಟ್ಟಿದ್ದ ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ. ಸರ್ಕಾರ ನಿರ್ದೇಶನ ಮತ್ತು ನಿಯಮದಂತೆ 43,333 ಕೋಟಿ ರೂ. ಹಣವನ್ನು ಗಂಗಾ ಕಲ್ಯಾಣ ಯೋಜನೆಗಾಗಿ ಮೀಸಲಾಗಿಡಲಾಗಿತ್ತು. ಆದರೆ ವಾಲ್ಮೀಕಿ ನಿಗಮದ ಎಂಡಿ ಪದ್ಮನಾಭ್ ಅಣತಿಯ ಮೇರೆಗೆ ಖಜಾನೆ ಅಧಿಕಾರಿಗಳು 43 ಕೋಟಿ ರೂ. ಹಣವನ್ನು ಕೂಡ ಯೂನಿಯನ್ ಬ್ಯಾಂಕ್‌ಗೆ ವರ್ಗಾವಣೆ ಮಾಡಿದ್ದಾರೆ. ಈ ಹಣವನ್ನು ವರ್ಗಾವಣೆ ಮಾಡುವಾಗ ಕೆಲವು ದಾಖಲಾತಿಗಳನ್ನು ನಕಲು ಮಾಡಿರುವುದು ಮತ್ತು ಹಣಕಾಸು ಇಲಾಖೆಯ ಅಧಿಕಾರಿಗಳು ಕೂಡ ಈ ಅಕ್ರಮದಲ್ಲಿ ಭಾಗಿ ಆಗಿರುವುದು ಈಗ ತನಿಖೆಯಲ್ಲಿ ಬಹಿರಂಗವಾಗಿದೆ.

## ಕೆಲಸದ ಅವಧಿ ವಿಸ್ತರಣೆಗೆ ವಿರೋಧ

### ಶನಿವಾರ ಐಟಿ,ಬಿಟಿ ನೌಕರರಿಂದ ಬೃಹತ್ ಪ್ರತಿಭಟನೆ

**ಬೆಂಗಳೂರು:** ರಾಜ್ಯದ ಐಟಿ ಬಿಟಿ ನೌಕರರಿಗೆ ಸದ್ಯ ಬಹುತೇಕ ಕಂಪನಿಗಳಲ್ಲಿ ಪ್ರತಿದಿನ 9 ಗಂಟೆಗಳ ಕಾಲ ಕೆಲಸ ಮಾಡಬೇಕೆಂಬ ನಿಯಮ ಇದೆ. ಆದರೆ ಆ ಒಂಬತ್ತು ಗಂಟೆ ಸಮಯವನ್ನು 14 ಗಂಟೆಗೆ ವಿಸ್ತರಣೆ ಮಾಡುವಂತೆ ಐಟಿಬಿಟಿ ಕಂಪನಿಗಳು ಕಾರ್ಮಿಕ ಇಲಾಖೆಗೆ ಮನವಿ ಮಾಡಿವೆ. ಆ ಹಿನ್ನೆಲೆಯಲ್ಲಿ ಕಾರ್ಮಿಕರು, ಸಚಿವರು ಈಗಾಗಲೇ ಸಭೆ ಮಾಡಿ ಅಭಿಪ್ರಾಯ ಸಂಗ್ರಹಿಸಿದ್ದಾರೆ. ಈಗಾಗಲೇ ಐಟಿಬಿಟಿ ನೌಕರರು ಸಿಎಂ ಸಿದ್ದರಾಮಯ್ಯ ಮತ್ತು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರಿಗೆ ಸಾಮೂಹಿಕವಾಗಿ ಮೇಲ್ ಮಾಡಿ



ಎಕ್ಸ್ ಮತ್ತು ಫೇಸ್ ಬುಕ್ ನಲ್ಲಿ 'I oppose the Increase in Working Hours' ಅಂತ ಪೋಸ್ಟ್ ಮಾಡುವ ಮೂಲಕ ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದರು. ಮುಂದುವರಿದ ಭಾಗವಾಗಿ ಈ ಶನಿವಾರ ಮಧ್ಯಾಹ್ನ ಮೂರು ಗಂಟೆಗೆ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆಗೆ ಸಜ್ಜಾಗಿದ್ದಾರೆ.

ಶನಿವಾರ ಪ್ರತಿಭಟನೆ ಮಾಡುವ ವಿಚಾರವಾಗಿ ಕರ್ನಾಟಕ ಐಟಿ ಅಂಡ್ ಐಟಿಎಸ್ ಯೂನಿಯನ್ ಜನರಲ್ ಸೆಕ್ರೆಟರಿ ಸುಹಾಸ್ ಅಡಿಗ ಮಾಹಿತಿ ನೀಡಿದ್ದಾರೆ.

ಬೆಂಗಳೂರಿನ ಐಟಿಬಿಟಿ ಕಂಪನಿಗಳ ನೌಕರರನ್ನು ಸಂಪರ್ಕ ಮಾಡಿ ಶನಿವಾರದ ಪ್ರತಿಭಟನೆಗೆ ಸಾಥ್ ನೀಡಬೇಕು ಮತ್ತು ಪ್ರತಿಯೊಬ್ಬರೂ ಪ್ರತಿಭಟನೆಯಲ್ಲಿ ಭಾಗಿಯಾಗಬೇಕೆಂದು ಮನವಿ ಮಾಡಲಾಗುತ್ತಿದೆ. ಈ ಬಗ್ಗೆ ಬಿತ್ತಿಪತ್ರಗಳನ್ನು ನೀಡುವ ಮೂಲಕ ದೊಡ್ಡ ಮಟ್ಟದಲ್ಲಿ ಅಭಿಯಾನ ಆರಂಭಿಸಲಾಗಿದೆ.

ಪುಟ 2

## ದರೋಡೆ ಮಾಡಲು ಕರ್ನಾಟಕಕ್ಕೆ ಬರುತ್ತಿದ್ದ ರಾಜಸ್ಥಾನದ ಮೂವರು ಅರೆಸ್ಟ್

**ಕಾರವಾರ:** ದರೋಡೆ ಮಾಡಲು ಬಸ್‌ನಲ್ಲಿ ಕರ್ನಾಟಕಕ್ಕೆ ಬರುತ್ತಿದ್ದ ರಾಜಸ್ಥಾನದ ಮೂವರು ಯುವಕರನ್ನು ಪೊಲೀಸರು ಬಂಧಿಸಿರುವ ಘಟನೆ ಉತ್ತರಕನ್ನಡ ಜಿಲ್ಲೆಯ ಜೊಯಿಡಾ ತಾಲೂಕಿನ ರಾಮನಗರದಲ್ಲಿ ನಡೆದಿದೆ. ಇಬ್ಬರು ಆರೋಪಿಗಳು ರಾಮನಗರ ಪೊಲೀಸರ ವಶದಲ್ಲಿದ್ರೆ, ಇನ್ನೋರ್ವ ಗೋವಾ ಪೊಲೀಸರ ವಶದಲ್ಲಿದ್ದಾನೆ. ಹಾಗೂ ಮತ್ತೋರ್ವ ಆರೋಪಿ ಪರಾರಿಯಾಗಿದ್ದು ತಲೆ ಮರೆಸಿಕೊಂಡಿದ್ದಾನೆ.

ನಾಲ್ವರು ಆರೋಪಿಗಳು ದರೋಡೆ ಮಾಡುವ ಉದ್ದೇಶದಿಂದ ಗೋವಾದಿಂದ ಕರ್ನಾಟಕಕ್ಕೆ ಬಸ್‌ನಲ್ಲಿ ಬರುತ್ತಿದ್ದರು. ಈ ವೇಳೆ ಅನ್ಮೋಡ್ ಅಬಕಾರಿ ಚೆಕ್ ಪಾಯಿಂಟ್‌ನಲ್ಲಿ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾಗ



ಆರೋಪಿಗಳ ಕೃತ್ಯ ಬೆಳಕಿಗೆ ಬಂದಿದೆ. ಗೋವಾದಿಂದ ಕರ್ನಾಟಕಕ್ಕೆ ಬರುತ್ತಿದ್ದ ಸರ್ಕಾರಿ ಬಸ್‌ನಲ್ಲಿ ಪೊಲೀಸರು ಮದ್ಯದ ತಪಾಸಣೆ ನಡೆಸುತ್ತಿದ್ದರು.

ಪುಟ 2

# ಬಿಜೆಪಿ ಪಾದಯಾತ್ರೆಗೆ ಕೌಂಟರ್

## ರಾಜಕೀಯವಾಗಿಯೇ ತಿರುಗೇಟು ನೀಡಲು ಕಾಂಗ್ರೆಸ್ ಹೊಸ ತಂತ್ರ

**ಬೆಂಗಳೂರು:** ಎರಡು ವಾರಗಳ ಕಾಲ ನಡೆದ ಅಧಿವೇಶನ ಸಂದರ್ಭದಲ್ಲಿ ಕೂಡ ವಾಲ್ಮೀಕಿ ಪ್ರಕರಣ ಮತ್ತು ಮುಡಾ ಹಗರಣವೇ ದೊಡ್ಡ ಸದ್ದು ಮಾಡಿತ್ತು. ಇದೀಗ ಮತ್ತೊಂದು ಹೆಜ್ಜೆ ಮುಂದುವರೆದು ಬಿಜೆಪಿ ಶನಿವಾರದಿಂದ ಮೈಸೂರು ಚಲೋ ಪಾದಯಾತ್ರೆಗೆ ಮುಂದಾಗಿದ್ದು, ಕಾಂಗ್ರೆಸ್ ರಾಜಕೀಯವಾಗಿ ಉತ್ತರ ಕೊಡಬೇಕಾದ ಅನಿವಾರ್ಯತೆ ಎದುರಾಗಿದೆ. ಸಿಎಂ ಸಿದ್ದರಾಮಯ್ಯ ಮುಡಾ ವಿಚಾರ ಬಂದಾಗೆಲ್ಲ ದಾಖಲೆಗಳನ್ನು ಮುಂದಿಟ್ಟು, ತನ್ನಿಂದ ಯಾವುದೇ ತಪ್ಪಾಗಿಲ್ಲ ಎಂಬುದನ್ನು ಪದೇ ಪದೇ ಹೇಳುತ್ತಲೇ ಬಂದಿದ್ದಾರೆ. ಆದರೆ ದಾಖಲೆಗಳ ಹೊರತಾಗಿಯೂ ರಾಜಕೀಯ ಸ್ವರೂಪ ಪಡೆದುಕೊಂಡಿರುವ ಕಾರಣಕ್ಕೋಸ್ಕರ ರಾಜಕೀಯವಾಗಿಯೇ ಕೌಂಟರ್ ಕೊಡಲು ಕಾಂಗ್ರೆಸ್ ಕೂಡ ಸಿದ್ಧತೆ ಆರಂಭಿಸಿದೆ

ಬಿಜೆಪಿ ಮುಡಾ ಮತ್ತು ವಾಲ್ಮೀಕಿ ಪ್ರಕರಣವನ್ನ ಮುನ್ನೆಲೆಗೆ ತರುತ್ತಿದ್ದಂತೆ ಇದೀಗ ಕಾಂಗ್ರೆಸ್ ಕೂಡ ಕೌಂಟರ್ ಕೊಡಲು ಸಿದ್ಧತೆ ಆರಂಭಿಸಿದೆ. ಹೀಗೆ ಬಿಟ್ಟರೆ ಪ್ರಕರಣ



ಎಲ್ಲಿಂದ ಎಲ್ಲಿಗೋ ಹೋಗಿ ಸರ್ಕಾರದ ಬುಡಕ್ಕೆ ಬಂದರೂ ಆಶ್ಚರ್ಯ ಇಲ್ಲ ಎನ್ನುವ ಕಾರಣಕ್ಕೋಸ್ಕರ ರಾಜಕೀಯವಾಗಿಯೇ ಕೌಂಟರ್ ಕೊಡಲು ಕಾಂಗ್ರೆಸ್ ನಿರ್ಧರಿಸಿದೆ. ಎರಡು ರೀತಿಯ ಹೋರಾಟವನ್ನು ಬಿಜೆಪಿ ವಿರುದ್ಧ ಜನ ಅಭಿಪ್ರಾಯ ರೂಪಿಸಲು ಕಾಂಗ್ರೆಸ್ ಪ್ಲಾನ್ ಮಾಡಿಕೊಂಡಿದೆ. ಪಕ್ಷದ ವತಿಯಿಂದ ಮುಡಾ ಪ್ರಕರಣಕ್ಕೆ ಸಂಬಂಧಿಸಿದ ಬೃಹತ್ ಸಮಾವೇಶವನ್ನು ಮೈಸೂರಿನಲ್ಲಿ ಆಯೋಜನೆ ಮಾಡುವ ಬಗ್ಗೆ ಚಿಂತನೆ ನಡೆದಿದೆ. ಇನ್ನೊಂದು ಕಡೆ ಅಹಿಂದ ಅಸ್ತ್ರವನ್ನ ಸಿಎಂ ಆಪ್ತರು ಬಳಸತೊಡಗಿದ್ದಾರೆ.

ಪುಟ 2

### ಸಿಎಂ ಇಳಿಸಲು ಡಿಕೆಶಿ ಮಾತಿನಂತೆ ಬಿವೈವಿ ಪಾದಯಾತ್ರೆ

## ಯತ್ನಾಳ್ ಹೊಸ ಬಾಂಬ್

**ಚಿಕ್ಕೋಡಿ:** ಸಿಎಂ ಸಿದ್ದರಾಮಯ್ಯ ವಿರುದ್ಧ ಮುಡಾ ಹಗರಣವನ್ನೇ ಅಸ್ತ್ರವಾಗಿಸಿಕೊಂಡಿರುವ ಬಿಜೆಪಿ ರಾಜ್ಯದ ಅಷ್ಟ ದಿಕ್ಕುಗಳಿಂದಲೂ ಸಪ್ತ ದಿನದ ಹೋರಾಟಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದೆ. ಇದರ ನಡುವೆ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಹಳ್ಯಾಳ ಗ್ರಾಮದಲ್ಲಿ ಶಾಸಕ ಬಸನಗೌಡಾ ಪಾಟೀಲ ಯತ್ನಾಳ್ ಮತ್ತೊಂದು ಬಾಂಬ್ ಸಿಡಿಸಿದ್ದಾರೆ. ಮುಡಾ ಹೋರಾಟವು ಸಿದ್ದರಾಮಯ್ಯ ಅವರನ್ನು ಇಳಿಸಿ, ಡಿಕೆ ಶಿವಕುಮಾರ್ ಅವರನ್ನು ಸಿಎಂ ಮಾಡಲು ಬಿ ವೈ ವಿಜಯೇಂದ್ರ ಮಾಡುತ್ತಿರುವ ಹೋರಾಟ ಎಂದು ಯತ್ನಾಳ್ ಆರೋಪ ಮಾಡಿದ್ದಾರೆ.

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ ರಾಜೀವ್ ಬಿಜೆಪಿಯಲ್ಲೇ ಇದ್ದಾಗ ಈ ಹಗರಣ ನಡೆದಿದೆ. ಈಗ ಅವರು ಕಾಂಗ್ರೆಸ್ ಸೇರಿದ್ದಾರೆ. ಕಾಂಗ್ರೆಸ್‌ಗೆ



ಯಾಕೆ ಸೇರಿದ್ದಾರೆ ಅಂದರೆ ಇದೆಲ್ಲ ಮುಚ್ಚಿ ಹಾಕಲು. ರಾಜೀವ ಯಾರ ನಿರ್ದೇಶನದ ಮೇಲೆ ಕಾಂಗ್ರೆಸ್ ಸೇರಿದ ಅನ್ನೋದು ಎಲ್ಲರಿಗೂ ಗೊತ್ತಿದೆ ಎಂದು ಇತ್ತೀಚೆಗೆ ಬಸನಗೌಡಾ ಪಾಟೀಲ ಯತ್ನಾಳ್ ಕಿಡಿಕಾರಿದ್ದರು ಇದರ ಬೆನ್ನಲ್ಲೇ ಈಗ ಮತ್ತೊಂದು ಬಾಂಬ್ ಸಿಡಿಸಿದ್ದಾರೆ.

ಪುಟ 2

## ಕೇರಳದಲ್ಲಿ ಭೂಕುಸಿತ

### ಸಿಎಂ ಪಿಣರಾಯಿ ಜತೆ ಮಾತನಾಡಿ ಅಗತ್ಯ ನೆರವಿನ ಭರವಸೆ ನೀಡಿದ ಪ್ರಧಾನಿ ಮೋದಿ

**ಕೇರಳ:** ಕೇರಳದಲ್ಲಿ ವಯನಾಡಿನಲ್ಲಿ ಗುಡ್ಡ ಕುಸಿದಿದ್ದು 7 ಮಂದಿ ಸಾವನ್ನಪ್ಪಿದ್ದಾರೆ, 100ಕ್ಕೂ ಹೆಚ್ಚು ಮಂದಿ ಸಿಲುಕಿರುವ ಕುರಿತು ಮಾಹಿತಿ ಲಭ್ಯವಾಗಿದೆ. ಈ ವಿಚಾರವಾಗಿ ಪ್ರಧಾನಿ ನರೇಂದ್ರ ಮೋದಿ ಮುಖ್ಯಮಂತ್ರಿ ಪಣರಾಯಿ ವಿಜಯ್ ಅವರ ಬಳಿ ಮಾತನಾಡಿದ್ದು, ಕೇಂದ್ರದಿಂದ ಸಾಧ್ಯವಾಗುವ ಎಲ್ಲಾ ನೆರವು ನೀಡುವುದಾಗಿ ಭರವಸೆ ನೀಡಿದ್ದಾರೆ.

ವಯನಾಡಿನ ಕೆಲವು ಭಾಗಗಳಲ್ಲಿ ಭೂಕುಸಿತದಿಂದ ಜನರು ಸಂಕಷ್ಟಕ್ಕೀಡಾಗಿದ್ದಾರೆ, ಪ್ರೀತಿಪಾತ್ರರನ್ನು ಕಳೆದುಕೊಂಡವರಿಗೆ ದುಃಖ ಭರಿಸುವ ಶಕ್ತಿಯನ್ನು ದೇವರು ನೀಡಲಿ



ಎಂದು ಪ್ರಾರ್ಥಿಸುತ್ತೇನೆ, ಗಾಯಗೊಂಡವರು ಬೇಗ ಗುಣಮುಖರಾಗಲಿ. ಭೂಕುಸಿತದ ಕುರಿತು ಪಿಣರಾಯಿ ವಿಜಯ್ ಅವರೊಂದಿಗೆ ಮಾತನಾಡಿದ್ದೇನೆ ಎಲ್ಲಾ ನೆರವನ್ನು ನೀಡಲು ಕೇಂದ್ರ ಸಿದ್ಧವಿದೆ

ಪುಟ 2

### ಇವಿಎಂ-ವಿವಿಪ್ಯಾಟ್ ಮತಗಳ ಹೋಲಿಕೆ ತೀರ್ಪಿನ ವಿರುದ್ಧದ ಮರುಪರಿಶೀಲನಾ ಅರ್ಜಿ

## ವಜಾಗೊಳಿಸಿದ ಸುಪ್ರೀಂಕೋರ್ಟ್

**ನವದೆಹಲಿ:** ವಿದ್ಯುನ್ಮಾನ ಮತ ಯಂತ್ರ ಹಾಗೂ ವಿವಿ ಪ್ಯಾಟ್ ತಾಳೆ ತೀರ್ಪಿನ ವಿರುದ್ಧದ ಮರುಪರಿಶೀಲನಾ ಅರ್ಜಿಯನ್ನು ಸುಪ್ರೀಂಕೋರ್ಟ್ ವಜಾಗೊಳಿಸಿದೆ. ವಿವಿ ಪ್ಯಾಟ್ ವ್ಯವಸ್ಥೆಯಲ್ಲಿ ಸೃಷ್ಟಿಯಾಗುವ ಪೇಪರ್ ಸ್ಲಿಪ್‌ಗಳ ಜತೆಗೆ ಇವಿಎಂನಲ್ಲಿ ಚಲಾವಣೆಗೊಂಡ ಪ್ರತಿಯೊಂದು ಮತವನ್ನೂ ತಾಳೆ ಹಾಕಿ ಪರಿಶೀಲಿಸುವಂತೆ ಆದೇಶ ನೀಡಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅನೇಕ ಅರ್ಜಿಗಳು ಸಲ್ಲಿಕೆಯಾಗಿದ್ದವು.

ಏಪ್ರಿಲ್ 26ರಂದು ಸಂಜೀವ್ ಕುಮಾರ್ ಹಾಗೂ ದೀಪಾಂಕರ್ ದತ್ತ ಅವರು ನೀಡಿದ್ದ ಆದೇಶವನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಲಾಗಿತ್ತು. ಏಪ್ರಿಲ್ 26ರ ತೀರ್ಪಿನಲ್ಲಿ ಕೆಲವು ತಪ್ಪುಗಳಿದ್ದವು ಎಂದು ಆರೋಪಿಸಿ ಅರುಣ್ ಕುಮಾರ್ ಅಗರ್ವಾಲ್ ಸುಪ್ರೀಂಕೋರ್ಟ್



ಗೆ ಅರ್ಜಿ ಸಲ್ಲಿಸಿದ್ದರು.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಂಕರ್ ದತ್ತಾ ಅವರಿದ್ದ ಸುಪ್ರೀಂ ಕೋರ್ಟ್ ಪೀಠ ಏಪ್ರಿಲ್ 26 ರಂದು ಎಲ್ಲಾ ವಿವಿಪ್ಯಾಟ್ ಚೀಟಿಗಳನ್ನು ಇವಿಎಂಗಳ ಮೂಲಕ ಚಲಾವಣೆಯಾದ ಮತಗಳೊಂದಿಗೆ ತಾಳೆ ಮಾಡಿ ಇವಿಎಂ ಮತಗಳ ವಿಶ್ವಾಸಾರ್ಹತೆ ಹೆಚ್ಚಿಸಬೇಕು ಎಂದು ಕೋರಿದ್ದ ಮನವಿಯನ್ನು ವಜಾಗೊಳಿಸಿತ್ತು. ಇವಿಎಂಗಳ ಬದಲಿಗೆ ಮತಪತ್ರಗಳ ಮೂಲಕ ಚುನಾವಣೆ ನಡೆಸುವ ಹಳೆಯ ವಿಧಾನಕ್ಕೆ (ಪೇಪರ್ ಬ್ಯಾಲಟ್) ಹಿಂತಿರುಗಲು ಕೋರಿದ್ದ ಅರ್ಜಿದಾರರ ಮನವಿಯನ್ನೂ ಅದು ತಿರಸ್ಕರಿಸಿತ್ತು.

ವಿದ್ಯುನ್ಮಾನ ಮತಯಂತ್ರಗಳ (ಇವಿಎಂ) ಮೂಲಕ ಚಲಾವಣೆಯಾದ ಮತಗಳೊಂದಿಗೆ ಎಲ್ಲಾ ವೋಟರ್ ವೆರಿಫೈಬಲ್ ಪೇಪರ್ ಆಡಿಟ್ ಟ್ರಯಲ್ (ವಿವಿಪಿಎಟಿ) ಚೀಟಿಗಳನ್ನು ತಾಳೆ ಮಾಡಲು ನಿರ್ದೇಶನ ನೀಡುವಂತೆ ಕೋರಿದ್ದ ಅರ್ಜಿಯನ್ನು ಏಪ್ರಿಲ್ ನಲ್ಲಿ ಸುಪ್ರೀಂಕೋರ್ಟ್ ವಜಾಗೊಳಿಸಿತ್ತು.

ಪುಟ 2

### ದೇವಾಲಯಗಳ ಆನ್‌ಲೈನ್ ಸೇವೆಗೆ ಅರ್ಚಕರ ವಿರೋಧ

## ಧಾರ್ಮಿಕ ದತ್ತಿ ಇಲಾಖೆಗೆ ಪತ್ರ

**ಬೆಂಗಳೂರು:** ಜನ ಈಗ ಏನೇ ಬೇಕಾದರೂ ಆನ್‌ಲೈನ್‌ನಲ್ಲೇ ಆರ್ಡರ್ ಮಾಡ್ತಾರೆ. ಈ ಕಾಲಕ್ಕೆ ತಕ್ಕಂತೆ ರಾಜ್ಯ ಸರ್ಕಾರ, ತನ್ನ ವ್ಯಾಪ್ತಿಯಲ್ಲಿರೋ ಮುಜರಾಯಿ ದೇಗುಲಗಳಲ್ಲಿಯೂ ಆನ್ ಲೈನ್ ಸೇವೆ ನೀಡುತ್ತಿದೆ. ದೇವಾಲಯಗಳ ಈ ಆನ್‌ಲೈನ್ ಸೇವೆಗೆ



ಅರ್ಚಕರಿಂದ ವಿರೋಧ ವ್ಯಕ್ತವಾಗುತ್ತಿದೆ.

ಆನ್‌ಲೈನ್‌ನಲ್ಲಿ ಕೆಲ ಭಕ್ತರು ಸಂಜೆ ಅಥವಾ ರಾತ್ರಿ ಅಭಿಷೇಕ, ಪ್ರಸಾದ ಇತ್ಯಾದಿ ಸೇವೆಗಳನ್ನು ಬುಕ್ ಮಾಡ್ತಾರೆ. ಮರುದಿನ ಬೆಳಗ್ಗೆಯೇ ಬುಕ್ ಮಾಡಿದ ಭಕ್ತಾದಿಗಳ ಸೇವೆ ಮಾಡಲು ಕಷ್ಟವಾಗುತ್ತದೆ. ದೇವಾಲಯಗಳಲ್ಲಿ ಪುರೋಹಿತರಿಗೆ ಮೊಬೈಲ್ ಬಳಕೆ ನಿಷೇಧಿಸಲಾಗಿದೆ. ಇದರಿಂದ ಭಕ್ತಾದಿಗಳು ತಕ್ಷಣವೇ ಬುಕ್ಕಿಂಗ್ ಮಾಡಿದ ಮಾಹಿತಿ ದೊರಕುವುದಿಲ್ಲ. ಜೊತೆಗೆ ಪ್ರಸಾದ ಹೋಟೆಲ್ ರೀತಿ ತಕ್ಷಣವೇ ರೆಡಿ ಮಾಡಿಕೊಡಲು ಆಗುವುದಿಲ್ಲ ಎಂದು ಅರ್ಚಕರ ಒಕ್ಕೂಟ ಧಾರ್ಮಿಕ ದತ್ತಿ ಆಯುಕ್ತರಿಗೆ ಪತ್ರ ಬರೆದಿದೆ.



ಬಿ ದರ್ಜೆಯ ಬಹುತೇಕ ದೇವಾಲಯಗಳಲ್ಲಿ ಅಡುಗೆಯವರು ಹಾಗೂ ಉಗ್ರಾಣದ ವ್ಯವಸ್ಥೆ ಇಲ್ಲ. ಜೊತೆಗೆ ಆನ್‌ಲೈನ್‌ನಲ್ಲಿ ಬುಕ್ ಮಾಡಿದ ಪೂಜಾ ಸೇವೆಗೆ ನೀಡಿದ ಹಣ ಯಾವಾಗಲೋ ಅರ್ಚಕರ ಕೈ ಸೇರುತ್ತದೆ. ಪೂಜಾ ಹಾಗೂ ಪ್ರಸಾದ ಪದಾರ್ಥಗಳನ್ನು ತರಲು ತೊಂದರೆ ಆಗುತ್ತಿದೆ. ಹೀಗಾಗಿ ಈ ಆನ್‌ಲೈನ್ ಸೇವೆಯನ್ನು ಹಾಗೂ ಈ ಮೊಬೈಲ್ ಆಪನ್ನು ರದ್ದು ಮಾಡಬೇಕೆಂದು ಅರ್ಚಕರ ಒಕ್ಕೂಟ ಒತ್ತಾಯಿಸಿದೆ.

ಪುಟ 2

## ವಯನಾಡಿನಲ್ಲಿ ಜಲಸ್ಫೋಟ: 19 ಮಂದಿ ಸಾವು



**ತಿರುವನಂತಪುರಂ:** ಕೊಡಗಿನಲ್ಲಿ 2018ರಲ್ಲಿ ನಡೆದ ಜಲಸ್ಫೋಟದಂತೆ ಕೇರಳದಲ್ಲೂ ದುರಂತ ಸಂಭವಿಸಿದೆ. ಮಂಗಳವಾರ ಮುಂಜಾನೆ ವಯನಾಡ್ ಜಿಲ್ಲೆಯ ಮೆಪ್ಪಾಡಿಯಲ್ಲಿ ಗುಡ್ಡ ಕುಸಿದಿದೆ. ಈ ದುರಂತದಲ್ಲಿ 19 ಮಂದಿ ಸಾವನ್ನಪ್ಪಿ ನೂರಾರು ಮಂದಿ ಸಿಲುಕಿರುವ ಶಂಕೆ ವ್ಯಕ್ತವಾಗಿದೆ.

ನಸುಕಿನ ಜಾವ 2 ಗಂಟೆಗೆ ಮೊದಲ ಭೂಕುಸಿತ ಸಂಭವಿಸಿದರೆ ಮುಂಜಾನೆ 4:10ರ ವೇಳೆ ಎರಡನೇ ಬಾರಿ ಸಂಭವಿಸಿದೆ. ಜಲಸ್ಫೋಟದಿಂದಾಗಿ ಗುಡ್ಡದಿಂದ ನೀರು ರಭಸವಾಗಿ ಮನೆಗಳ ಮೇಲೆ ಹರಿದು ಹೋಗಿದ್ದರಿಂದ ಸಾವು ನೋವಿನ ಪ್ರಮಾಣ ಏರಿಕೆಯಾಗುವ ಸಾಧ್ಯತೆಯಿದೆ.

ಪುಟ 2

## ಚಾರ್ಮಾಡಿ ಘಾಟ್‌ನಲ್ಲಿ ರಸ್ತೆಗುರುಳಿದ ಮರ

**ಚಿಕ್ಕಮಗಳೂರು:** ಮಲೆನಾಡಲ್ಲಿ ಮತ್ತೆ ಮಳೆಯ ಅಬ್ಬರ ಹೆಚ್ಚಾಗಿದ್ದು, ಭಾರೀ ಗಾಳಿ ಮಳೆಯಿಂದ ಚಾರ್ಮಾಡಿ ಘಾಟಿಯ ರಾಷ್ಟ್ರೀಯ ಹೆದ್ದಾರಿ 173ರಲ್ಲಿ ಬೃಹತ್ ಮರವೊಂದು ರಸ್ತೆಗುರುಳಿದೆ. ಇದರಿಂದಾಗಿ ಚಿಕ್ಕಮಗಳೂರು-ಮಂಗಳೂರು ಮಾರ್ಗ ಸಂಪೂರ್ಣ ಬಂದ್ ಆಗಿದೆ.



ರಸ್ತೆ ಬಂದ್ ಆಗಿರುವ ಪರಿಣಾಮ ಕೊಟ್ಟಿಗೆಹಾರದಲ್ಲಿ ಭಾರೀ ಟ್ರಾಫಿಕ್ ಜಾಮ್ ಉಂಟಾಗಿದೆ. ವಾಹನಗಳನ್ನ ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟಿದ್ದಾರೆ. ಮರ ತೆರವು ಕಾರ್ಯಾಚರಣೆ ಆರಂಭಗೊಂಡಿದೆ.

ಪುಟ 2

## ಭೂ ಕಬಳಿಕೆಗೆ ಯತ್ನ ಆರೋಪ

**ಮೈಸೂರು:** ರಾಜ್ಯವನ್ನೇ ತಲ್ಲಣಗೊಳಿಸಿರುವ ಮೈಸೂರಿನ ಮುಡಾ ಹಗರಣದ ನಡುವೆಯೇ ಮತ್ತೊಂದು ಬಹುಕೋಟಿ ಭೂ ಹಗರಣದ ಆರೋಪ ಕೇಳಿ ಬಂದಿದೆ. ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಮೇಲುಕೋಟೆಯ ಚೆಲುವನಾರಾಯಣಸ್ವಾಮಿ ದೇವರಿಗೆ ಸೇರಿದ ಆಸ್ತಿ ಭೂಗಳ್ಳರ ಪಾಲಾಗುತ್ತಿದೆ ಎನ್ನಲಾಗಿದೆ. ನೂರಾರು ಕೋಟಿ ರೂಪಾಯಿ ಬೆಲೆ ಬಾಳುವ ಆಸ್ತಿ ಕಬಳಿಸಲು ಸಂಚು ಹಾಕಲಾಗಿದ್ದು ಮೈಸೂರು ಉಪ ವಿಭಾಗಾಧಿಕಾರಿ ರಕ್ಷಿತ್ ಅವರು ಕೋಟ್ಯಾಂತರ ರೂ ಮೌಲ್ಯದ ಆಸ್ತಿ ಭೂಗಳ್ಳರಿಗೆ ಅಕ್ರಮ ಪರಭಾರೆ ಮಾಡಿದ್ದಾರೆ ಎಂಬ ಗಂಭೀರ ಆರೋಪ ಎದುರಿಸುತ್ತಿದ್ದಾರೆ. ಈ ಬಗ್ಗೆ ಚೆಲುವನಾರಾಯಣ ಸ್ವಾಮಿಯ ಭಕ್ತರಾಗಿರುವ ರವಿಕುಮಾರ್ ಎಂಬುವವರು ಗಂಭೀರ ಆರೋಪ ಮಾಡಿದ್ದಾರೆ. ಮೈಸೂರಿನ ಕೆಸರೆ ಗ್ರಾಮ ವ್ಯಾಪ್ತಿಯಲ್ಲಿ 21.5 ಎಕರೆ ಭೂಮಿಯಲ್ಲಿ ಅಕ್ರಮ ನಡೆದಿದೆ ಎನ್ನಲಾಗಿದ್ದು, ಗ್ರಾಮದ ಸರ್ವೆ ನಂಬರ್ 396, 397, 398 ಹಾಗೂ 399ಕ್ಕೆ ಸೇರಿದ ಭೂಮಿಯನ್ನು ಮಂಡ್ಯ ಜಿಲ್ಲೆ ನಗುವಿನಹಳ್ಳಿ ಗ್ರಾಮದ ಗೋಸೇಗೌಡ ಕುಟುಂಬ ದೇಗುಲಕ್ಕೆ ದೇಣಿಗೆಯಾಗಿ ನೀಡಿತ್ತು. ಆದರೆ, ದೇವಾಲಯಕ್ಕೆ ಸೇರಿದ ಈ ಜಮೀನನ್ನು ಅನ್ಯರಿಗೆ ಪರಭಾರೆ ಮಾಡುವಲ್ಲಿ ಕಂದಾಯ ಅಧಿಕಾರಿಗಳು ಶಾಮೀಲಾಗಿದ್ದಾರೆ ಎಂದು ಆರೋಪಿಸಲಾಗಿದೆ. ತಮ್ಮ ಸ್ನೇಹಿತರಾದ ಕಂಟ್ರ್ಯಾಕ್ಟರ್ ಸತೀಶ್‌ಬಾಬು ರೆಡ್ಡಿಗೆ ಭೂಮಿ ಕೊಡಿಸಲು ಯತ್ನ ನಡೆದಿದೆ ಎಂದು ರವಿಕುಮಾರ್ ಆರೋಪ ಮಾಡಿದ್ದಾರಲ್ಲದೆ, ಜಮೀನನ್ನು ಮತ್ತೆ ದೇವಾಲಯದ ಹೆಸರಿಗೆ ವರ್ಗಾಯಿಸುವಂತೆ ದೂರುದಾರ ರವಿಕುಮಾರ್ ಆಗ್ರಹಿಸಿದ್ದಾರೆ. ಕೇಂದ್ರ, ಹಾಗೂ ರಾಜ್ಯ ಸರ್ಕಾರಗಳಿಗೆ ಪತ್ರ ಬರೆದಿರುವ ರವಿಕುಮಾರ್, ಮೇಲುಕೋಟೆ ದೇವಸ್ಥಾನದ ಆಸ್ತಿಯನ್ನು ಪುನರ್ ಸ್ಥಾಪಿಸಿಕೊಳ್ಳುವಂತೆ ಮನವಿ ಮಾಡಿದ್ದಾರೆ. ದೂರಿನ ಆಧಾರದ ಮೇಲೆ ಮಂಡ್ಯ ಜಿಲ್ಲಾಡಳಿತ ದಾಖಲೆ ಪರಿಶೀಲನೆ ನಡೆಸಿದೆ. ದೇವಾಲಯದ ಆಸ್ತಿಯನ್ನು ಖಾಸಗಿ ವ್ಯಕ್ತಿಗಳಿಗೆ ಖಾತೆ ಮಾಡಿಕೊಟ್ಟಿರುವುದು ಕಾನೂನು ಪ್ರಕಾರ ಸರಿಯಲ್ಲ. ಪ್ರಕರಣ ಎಸಿ ಕೋರ್ಟ್‌ನಲ್ಲಿ ಇರುವಾಗಲೇ ಖಾಸಗಿಯವರಿಗೆ ಮಾಡಿಕೊಡಲಾಗುತ್ತಿದೆ ಎಂದು ತಿಳಿದುಬಂದಿದೆ.

## ಜಾಗದ ವಿಚಾರಕ್ಕೆ ಹಲ್ಲೆ

**ಮೈಸೂರು:** ಮನೆ ಜಾಗದ ವಿಷಯಕ್ಕೆ ಸಂಬಂಧಿಸಿದಂತೆ ಸಾಲಿಗ್ರಾಮ ತಾಲೂಕು ಮಿರ್ಲೆ ಹೋಬಳಿ ಚಾಮನಹಳ್ಳಿ ಗ್ರಾಮದ ಮಾಜಿ ಚೇರ್ಮನ್ ಕಾಳೇಗೌಡರ ಪುತ್ರ ಪ್ರಕಾಶ್, ಆತನ ಪತ್ನಿ ಹಾಗೂ ಇನ್ನಿತರರು ತಮ್ಮ ತಾಯಿ ದೇವೀರಮ್ಮ ಅವರ ಮೇಲೆ ತೀವ್ರ ಹಲ್ಲೆ ಮಾಡಿದ್ದಾರೆಂದು ದೇವೀರಮ್ಮ ಅವರ ಪುತ್ರ ಪ್ರಕಾಶ್ ಆರೋಪಿಸಿದರು. ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಘಟನೆ ಇದೇ ತಿಂಗಳ 14ರಂದು ನಡೆದಿದೆ. ತಮ್ಮ ಬ್ಯಾರೆಲ್ ಮನೆಯಲ್ಲಿ ತಂಬಾಕು ಹದ ಮಾಡಲೆಂದು ಬಂದ ಅವರನ್ನು ಪ್ರಶ್ನಿಸಿದಾಗ ದೊಣ್ಣೆ ಮೊದಲಾದವುಗಳಿಂದ ದಾಳಿ ಮಾಡಿದ್ದಾರೆ. ಕುಟುಂಬದ ಸುನಂದ ಎಂಬುವವರ ತಲೆ ಬುರುಡೆ ಸಹಾ ಸೀಳಿದೆ. ತಮ್ಮ ತಾಯಿಯ ಹಲ್ಲುಗಳು ಮುರಿದಿವೆ. ಈ ಇಬ್ಬರೂ ಪ್ರಜ್ಞೆ ತಪ್ಪಿ ಬಿದ್ದಿದ್ದಾಗ ಗ್ರಾಮಸ್ಥರೇ ಸಾಲಿಗ್ರಾಮದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದರು. ವೈದ್ಯರ ಸಲಹೆ ಮೇರೆಗೆ ಮೈಸೂರು ಜಿಲ್ಲಾಸ್ಪತ್ರೆಗೂ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಈ ಸಂಬಂಧ ಸಾಲಿಗ್ರಾಮ ಠಾಣೆಗೆ ದೂರು ಸಹಾ ನೀಡಲಾಗಿದೆ. ಹೀಗಿದ್ದರೂ ಎಲ್ಲ ಆರೋಪಿಗಳು ರಾಜಾರೋಷವಾಗಿ ತಿರುಗಾಡಿಕೊಂಡಿದ್ದು, ಕೊಲೆ ಬೆದರಿಕೆ ಸಹಾ ಹಾಕುತ್ತಿದ್ದಾರೆ. ಹೀಗಾಗಿ ಸಂಬಂಧಪಟ್ಟ ಹಿರಿಯ ಪೊಲೀಸ್ ಅಧಿಕಾರಿಗಳು ಕ್ರಮ ಕೈಗೊಂಡು ತಮಗೆ ನ್ಯಾಯ ದೊರಕಿಸಿಕೊಡಬೇಕೆಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಕುಟುಂಬದ ದೇವೀರಮ್ಮ, ಅವರ ಸೊಸೆ ಸುನಂದ, ಚಿಕ್ಕೇಗೌಡ ಹಾಜರಿದ್ದರು.

## ಕವಿಯ ನೋಡಿ ಕವಿತೆ ಹೇಳಿ

**ಮೈಸೂರು:** ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾ ಘಟಕದ ವತಿಯಿಂದ ಜು.28ರಂದು ಸಂಜೆ ಐದಕ್ಕೆ ವಿದ್ಯಾರಣ್ಯಪುರಂ ಸ್ಟರ್ಲಿಂಗ್ ಥಿಯೇಟರ್ ಹತ್ತಿರದ ಎಂಬಿಸಿಟಿ ಸಭಾಂಗಣದಲ್ಲಿ ಕವಿಯ ನೋಡಿ ಕವಿತೆ ಹೇಳಿ ಎಂಬ ವಿಶಿಷ್ಟ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಘಟಕದ ಅಧ್ಯಕ್ಷ ನಾಗರಾಜ್ ವಿ.ಬೈರಿ ತಿಳಿಸಿದರು. ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಡಾ.ಎಚ್.ಎಸ್.ವೆಂಕಟೇಶಮೂರ್ತಿ, ಬಿ.ಆರ್.ಲಕ್ಷ್ಮಣ್‌ರಾವ್, ಜಯಪ್ಪ ಹೊನ್ನಾಳಿ ಅವರ ಸಮ್ಮುಖದಲ್ಲಿ ಕಾವ್ಯ ವಾಚನ ಮತ್ತು ಗೀತ ಗಾಯನ ನಡೆಯಲಿದೆ. ಪರಿಷತ್ ಅಧ್ಯಕ್ಷ ವೈ.ಕೆ.ಮುದ್ದುಕೃಷ್ಣ ಉದ್ಘಾಟಿಸಲಿದ್ದು, ತಾವು ಅಧ್ಯಕ್ಷತೆ ವಹಿಸಲಿದ್ದೇವೆ. ಡಾ.ಕಿಕ್ಕೇರಿ ಕೃಷ್ಣಮೂರ್ತಿ, ಡಾ.ಸುದರ್ಶನ ಮೊದಲಾದವರು ಅತಿಥಿಗಳಾಗಿರುವರೆಂದರು. ನಗರದಲ್ಲಿ ಸುಗಮ ಸಂಗೀತ ಪ್ರೀತಿಸುವ ಒಂದು ವರ್ಗವೇ ಇದೆ. ತಮ್ಮ ಘಟಕ ಇದುವರೆಗೆ ಹಮ್ಮಿಕೊಂಡಿದ್ದ ಈ ರೀತಿಯ ಕಾರ್ಯಕ್ರಮಗಳಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಸಭಾಂಗಣ ತುಂಬಿ ತುಳುಕುತ್ತಿದ್ದವು. ಈ ಬಾರಿಯ ಕಾರ್ಯಕ್ರಮಕ್ಕೆ ಎಲ್ಲರಿಗೂ ಉಚಿತ ಪ್ರವೇಶವಿದ್ದರೂ ಸಹಾ ಲೆಕ್ಕದ ಉದ್ದೇಶದಿಂದ ಸ್ಥಳದಲ್ಲೇ ಪಾಸ್ ವಿತರಿಸಲಾಗುವುದೆಂದರು. ಗೋಷ್ಠಿಯಲ್ಲಿ ಸಿರಿಬಾಲು, ಡೇವಿಡ್, ವೆಂಕಟೇಗೌಡ, ಡೇವಿಡ್ ಪ್ರತಿಭಾಂಜಲಿ ಹಾಜರಿದ್ದರು.

## ಬಾಡಿಗೆ ಕಟ್ಟಡ ಬೇಕಾಗಿದೆ

**ಮೈಸೂರು:** ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮೈಸೂರು ತಾಲ್ಲೂಕು ವ್ಯಾಪ್ತಿಗೆ 3 ಹೊಸ ವಿದ್ಯಾರ್ಥಿನಿಲಯಗಳು ಮಂಜೂರಾಗಿದ್ದು (ಸುಮಾರು 150-200 ವಿದ್ಯಾರ್ಥಿಗಳಿಗೆ) ಸದರಿ ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ಕಾರ್ಪೊರೇಷನ್ ಅಥವಾ ಮುಡಾದಿಂದ ಅನುಮೋದನೆಗೊಂಡಿರುವ 60★40, 60★50, 60★80 ಇತ್ಯಾದಿ ಅಳತೆಯ 3 ಅಥವಾ 4 ಅಂತಸ್ತಿನ ಕಟ್ಟಡ ಬಾಡಿಗೆಗೆ ಬೇಕಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಪಡುವಾರಹಳ್ಳಿಯ ಆದಿಪಂಪ ರಸ್ತೆಯಲ್ಲಿರುವ ಡಾ.ಬಾಬು ಜಗಜೀವನರಾಂ ಭವನ ಕಟ್ಟಡದಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯ ದೂ.ಸಂ:0821-2520910ನ್ನು ಹಾಗೂ ಕಚೇರಿ ಅಧೀಕ್ಷಕರು ಮತ್ತು ನಿಲಯ ಮೇಲ್ವಿಚಾರಕರು ದೂ.ಸಂ: 9480843177 ಮತ್ತು 9741459777ನ್ನು ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

# ಪುರಸ್ಕಾರದಿಂದ ಪ್ರತಿಭೆಗಳಿಗೆ ದೊರಕಲಿದೆ ಉತ್ತೇಜನ

**ನಂಜನಗೂಡು:** ದೇವನೂರು ಗ್ರಾಮದ ಸಮಾನ ಮನಸ್ಕರ ನೌಕರರು ಸ್ಥಾಪಿಸಿಕೊಂಡಿರುವ ಶ್ರೀ ಗುರುಮಲ್ಲೇಶ್ವರ ಸೇವಾ ಸಮಿತಿ ವತಿಯಿಂದ ಪ್ರತಿಭಾ ಪುರಸ್ಕಾರ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ನೂತನ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಮಹೇಶ್ ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಾ, ಶ್ರೀ ಗುರುಮಲ್ಲೇಶ್ವರ ಸೇವಾ ಸಮಿತಿಯವರು ಒಂದು ಉತ್ತಮವಾದ ಧ್ಯೇಯೋದ್ದೇಶವನ್ನು ರೂಪಿಸಿಕೊಂಡು ಪ್ರಾರಂಭಿಸಿರುವ ಈ ಸೇವಾ ಸಮಿತಿ ಯಶಸ್ವಿಯಾಗಿ ನಡೆಯುತ್ತಿರುವ ಬಗ್ಗೆ ಶ್ಲಾಘನೆ ವ್ಯಕ್ತಪಡಿಸಿದರು. ಸೌಲಭ್ಯ ವಂಚಿತರಿಗೆ ಹಲವಾರು ಅನುಕೂಲತೆಗಳನ್ನು ಮಾಡುವುದರ ಮೂಲಕ ಈ ಸೇವಾ ಸಮಿತಿಯವರ ಕಾರ್ಯವೈಖರಿ ಮೆಚ್ಚುವಂತಹದ್ದು ಎಂದರು. ಪ್ರತಿಭಾ ಪುರಸ್ಕಾರಗಳಿಂದ ಪ್ರತಿಭೆಗಳಿಗೆ ಉತ್ತೇಜನ ನೀಡುವಂತಹ ಕಾರ್ಯಕ್ರಮ ಇದಾಗಿದ್ದು ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಂಡು ಪ್ರತಿಭಾವಂತರಾಗಬೇಕು ಎಂದರು.

ಸಮಾರಂಭದಲ್ಲಿ ಪ್ರತಿಭಾವಂತರಿಗೆ ಪ್ರತಿಭಾ ಪುರಸ್ಕಾರ ನೀಡಿ ಮಾತನಾಡಿದ ಡಾ|. ಡಿ.ಎಸ್. ಗುರು ಬದಲಾವಣೆಗೆ ಹೊಂದಿಕೊಂಡು ಹೋದರಷ್ಟೆ ಜೀವನದಲ್ಲಿ ಯಶಸ್ಸು ಸಾಧ್ಯ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.



ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿದ್ದ ಶ್ರೀ ಗುರುಮಲ್ಲೇಶ್ವರ ಸೇವಾ ಸಮಿತಿ ಅಧ್ಯಕ್ಷರಾದ ಡಿ.ಎಸ್.ಸದಾಶಿವಮೂರ್ತಿ ರವರು ಮಾತನಾಡಿ, ಮುಂದಿನ ವರ್ಷ ಇದೇ ಸ್ಥಳದಲ್ಲಿ ಒಂದು ದೊಡ್ಡ ಐತಿಹಾಸಿಕ ಸಮಾರಂಭ ನಡೆಯಲಿದೆ ಎಂದು ಸುಳಿವು ನೀಡಿದರು. 1925 ರಲ್ಲಿ ದೇವನೂರಿನಲ್ಲಿ ಮೊಟ್ಟ ಮೊದಲ ಬಾರಿಗೆ ಕಿರಿಯ ಪ್ರಾಥಮಿಕ ಶಾಲೆ ಪ್ರಾರಂಭವಾಗಿ 100 ವರ್ಷ ತುಂಬಿರುವ ಹಿನ್ನಲೆಯಲ್ಲಿ ಶತಮಾನೋತ್ಸವ ಸಮಾರಂಭ, ಪ್ರೌಢಶಾಲೆಯ ಅಮೃತಮಹೋತ್ಸವ, ಪದವಿ ಪೂರ್ವ ಕಾಲೇಜಿನ ನಾಲ್ಕು ದಶಕಗಳ ತ್ರಿವೇಣಿ ಸಂಗಮದ ಐತಿಹಾಸಿಕ ಸಮಾರಂಭ ನಡೆಯಲಿದೆ. ಈ ಶಾಲೆಯಲ್ಲಿ ಓದಿರುವ ಜಿಲ್ಲೆಯ ಮಠಾಧೀಶರುಗಳು, ರಾಜ್ಯದ ಮುಖ್ಯಮಂತ್ರಿಗಳು, ಸಚಿವರು, ಶಾಸಕರುಗಳನ್ನು ಸಮಾರಂಭಕ್ಕೆ ಆಹ್ವಾನಿಸಿ ದೊಡ್ಡ ಪ್ರಮಾಣದಲ್ಲಿ ಸಮಾರಂಭ ಏರ್ಪಡಿಸಲಾಗುತ್ತದೆ. ಇದಕ್ಕೆಲ್ಲ ವಿದ್ಯಾರ್ಥಿಗಳ ಮತ್ತು ಗ್ರಾಮಸ್ಥರುಗಳ, ಮುಖಂಡರುಗಳ, ಸೇವಾ ಸಮಿತಿ ಹಾಗೂ ಸಂಘ-ಸಂಸ್ಥೆಗಳ ಸಹಕಾರ ಅತ್ಯಗತ್ಯ ಎಂದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ತಾಲ್ಲೂಕಿನ ನೂತನ ಅಧ್ಯಕ್ಷರಾದ ಎಸ್.ಎಂ.ಕೆಂಪಣ್ಣ ದೇವನೂರಿಗೂ ನಮ್ಮ ಕುಟುಂಬಕ್ಕೂ ಅವಿನಾಭಾವ ಸಂಬಂಧವಿದ್ದು, ಇತಿಹಾಸ ಪ್ರಸಿದ್ಧ ದೇವನೂರು ಅನ್ನದಾಸೋಹ ಮತ್ತು ಜ್ಞಾನ ದಾಸೋಹದಲ್ಲಿ ರಾಜ್ಯದಲ್ಲೇ ಉತ್ತಮ ಇತಿಹಾಸ ಹೊಂದಿರುವ ಕ್ಷೇತ್ರವಾಗಿದೆ ಎಂದ ಅವರು ಇಲ್ಲಿನ ಶ್ರೀ ಗುರುಮಲ್ಲೇಶ್ವರ ಸೇವಾ ಸಮಿತಿಯವರ ಕಾರ್ಯಸಾಧನೆ ಬಗ್ಗೆ ಶ್ಲಾಘನೆ ವ್ಯಕ್ತಪಡಿಸಿದರು.

ಪಿಹೆಚ್‌ಡಿ ಪದವಿ ಪುರಸ್ಕೃತರಾದ ದೇವನೂರಿನ ಡಾ. ಜ್ಯೋತಿ.ಡಿ.ಎನ್. ರವರು ಮಾತನಾಡಿ, ವಿದ್ಯಾರ್ಥಿಗಳು ಪರಿಶ್ರಮದಿಂದ ಮುಂದೆ ಬರಬೇಕು, ಅದೃಷ್ಟದಿಂದ ಅಲ್ಲ ಎಂದು ಸಲಹೆ ನೀಡಿದರು.

ಸಮಾರಂಭದಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ.ಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಧನ ಸಹಾಯ, ನಿವೃತ್ತ ನೌಕರರಿಗೆ ಮತ್ತು ಸಮಾಜಸೇವಕರಾದ ಮಂಜುಳಾರಾಜೇಶ್, ದೇವನೂರು ಶಿವಪ್ಪದೇವರು, ಚಂದ್ರಶೇಖರ್ ರವರುಗಳಿಗೆ ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಶ್ರೀ ಗುರುಮಲ್ಲೇಶ್ವರ ಮಠಾಧ್ಯಕ್ಷ ಮಹಂತಸ್ವಾಮಿಗಳು ಸಾನಿಧ್ಯ ವಹಿಸಿ ಸಭೆಗೆ ಆಶೀರ್ವಚನ ನೀಡಿದರು. ಸಮಾರಂಭದಲ್ಲಿ ದೇವನೂರು ಸ.ಪ.ಪೂ. ಕಾಲೇಜು ಪ್ರಾಚಾರ್ಯರಾದ ಎಸ್.ಬಾಲಸುಬ್ರಮಣ್ಯಂ, ಪ್ರೌಢಶಾಲಾ ಮುಖ್ಯ ಶಿಕ್ಷಕರಾದ ಪೂರ್ಣಿಮ ನಾಯಕ್, ಮುಖಂಡರುಗಳಾದ ದೇವನೂರು ಶಿವಪ್ಪದೇವರು, ಸೇವಾ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಡಾ. ಡಿ.ಎಸ್.ಗುರು, ಉಪಾಧ್ಯಕ್ಷರುಗಳಾದ ಮಹದೇವಸ್ವಾಮಿ, ಕೆ.ಎಸ್.ರವೀಶ್‌ಮೂರ್ತಿ ಖಜಾಂಚಿ ಕೆ.ಜಿ.ರಾಜಶೇಖರ ಮೂರ್ತಿ, ಕಾರ್ಯದರ್ಶಿ ಡಿ.ಜಿ.ಗುರುಸ್ವಾಮಿ, ಡಿ.ಪಿ.ಪ್ರಭುಸ್ವಾಮಿ ಹಾಗೂ ನಿರ್ದೇಶಕರುಗಳು, ಡಿ.ಸುಬ್ಬಣ್ಣ, ಡಿ.ಕೆ.ಸ್ವಾಮಿ, ಉಪನ್ಯಾಸಕರಾದ ಪೂರ್ಣಿಮ, ಶ್ರೀಜ, ರಘು, ಬಾಲಸುಬ್ರಮಣ್ಯ, ಹರ್ಷ, ವಿದ್ಯಾರ್ಥಿಗಳು, ಗ್ರಾಮದ ಮುಖಂಡರು ಭಾಗವಹಿಸಿದ್ದರು.

# ಸಾಹಿತ್ಯ ಸಮ್ಮೇಳನ ಪಾರದರ್ಶಕವಿರಲಿ

## ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್ ಚಲುವರಾಯಸ್ವಾಮಿ ಸೂಚನೆ

**ಮಂಡ್ಯ:** ಮಂಬರುವ ಡಿಸೆಂಬರ್‌ನಲ್ಲಿ ಮಂಡ್ಯದಲ್ಲಿ ನಡೆಯಲಿರುವ 87 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಾಹಿತ್ಯ, ಸಾಂಸ್ಕೃತಿಕ ಶ್ರೀಮತಿಕೆಯ ಜೊತೆಗೆ ಪಾರದರ್ಶಕವಾಗಿರಲಿ ಎಂದು ಕೃಷಿ ಸಚಿವರು ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್ ಚಲುವರಾಯಸ್ವಾಮಿ ತಿಳಿಸಿದ್ದಾರೆ.

ಮಂಡ್ಯದಲ್ಲಿ ಡಿಸೆಂಬರ್ ತಿಂಗಳಿನಲ್ಲಿ ನಡೆಯುವ 87 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಿದ್ದತೆ ಕುರಿತು ವಿಕಾಸ ಸೌಧದ ಸಭಾಂಗಣದಲ್ಲಿ ಗುರುವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶಿವರಾಜ ತಂಗಡಗಿ ಅವರ ಉಪಸ್ಥಿತಿಯಲ್ಲಿ ನಡೆದ ಮಹತ್ವದ ಸಭೆಯಲ್ಲಿ ಕೃಷಿ ಸಚಿವರು ಕಾರ್ಯಕ್ರಮದ ಸಂಘಟನೆ ಮತ್ತು ಅನು?ನಕ್ಕೆ ಸಂಬಂಧಿಸಿದಂತೆ ಹಲವು ಸಲಹೆ ಸೂಚನೆಗಳನ್ನು ನೀಡಿದರು.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅತ್ಯಂತ ದೊಡ್ಡ ಐತಿಹಾಸಿಕ ಹಿನ್ನಲೆ ಇದೆ. ಇದರ ಚರಿತ್ರೆ ಹಾಗೂ ಮಹತ್ವಕ್ಕೆ ಯಾವುದೇ ಕುಂದು ಉಂಟಾಗದಂತೆ ಸಂಭ್ರಮ, ಸಾಹಿತ್ಯಿಕ ಮೌಲ್ಯ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಕೊರತೆಯಾಗದಂತೆ ಸಂಘಟನೆಯನ್ನು ಮಾಡುವಂತೆ ಚಲುವರಾಯಸ್ವಾಮಿ ಸಲಹೆ ನೀಡಿದರು.

ಕಾರ್ಯಕ್ರಮದ ಸಂಘಟನೆಯಲ್ಲಿ ಮೂಲಭೂತ ಸೌಕರ್ಯ ಕಲ್ಪಿಸುವುದು ಹಾಗೂ ಆರ್ಥಿಕ ಹೊಣೆಗಾರಿಕೆ ಸಂಪೂರ್ಣ ಜಿಲ್ಲಾಡಳಿತಕ್ಕೆ ಸೇರಿದ್ದು, ಕನ್ನಡ ಸಾಹಿತ್ಯ ಪರಿಷತ್ತಿನ ಸಹಕಾರ ಮತ್ತು ಸಹಯೋಗದೊಂದಿಗೆ ಹಿಂದೆಂದಿಗಿಂತ ವಿಜೃಂಭಣೆಯಿಂದ ಆಯೋಜಿಸುವಂತೆ ತಿಳಿಸಿದರು.

ಈಗಾಗಲೇ 26 ಉಪಸಮಿತಿಗಳನ್ನು ರಚಿಸಲಾಗಿದೆ. ಎಲ್ಲಾ ಸಮಿತಿಗಳಿಗೂ ಸ್ಥಳೀಯ ಶಾಸಕರು ನೇತೃತ್ವ ವಹಿಸಿದ್ದು, ಜನಪ್ರತಿನಿಧಿಗಳು, ಸಂಘ-ಸಂಸ್ಥೆಗಳು, ಸಾರ್ವಜನಿಕರು ಕನ್ನಡದ ಅಭಿಮಾನಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯಕ್ರಮ ನಡೆಸಬೇಕಾಗಿದೆ ಎಂದರು.

ಮಂಡ್ಯ ಜಿಲ್ಲೆಯಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನಕ್ಕೆ 30 ಕೋಟಿ ರೂಗಳನ್ನು ಒದಗಿಸುವ ಭರವಸೆ ದೊರತಿದೆ ಅದರ ಮಿತಿಯೊಳಗೆ ಸಂಪೂರ್ಣ ಕಾರ್ಯಕ್ರಮಗಳು ನಡೆಯಬೇಕು



> “ ಕರ್ನಾಟಕ ರಾಜ್ಯ 50ನೇ ವರ್ಷದ ಸುವರ್ಣ ಸಂಭ್ರಮದ ಅಂಗವಾಗಿ ಬಿಡುಗಡೆ ಮಾಡಿರುವ ಲಾಂಛನ ಎಲ್ಲಾ ಕಾರ್ಯಕ್ರಮದಲ್ಲಿ ವಿಶೇಷವಾಗಿ ಬಿಂಬಿತವಾಗಬೇಕು. ಖರ್ಚು-ವೆಚ್ಚಗಳಿಗೆ ಹೊಣೆಗಾರಿಕೆ ಇರಬೇಕು ಹಾಗಾಗಿ ಎಲ್ಲರೂ ಒಂದಾಗಿ ಕಾರ್ಯಕ್ರಮವನ್ನು ಆಯೋಜಿಸೋಣ.
>
> **ಶಿವರಾಜ್ ತಂಗಡಗಿ** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು.

ಯಾವುದೇ ಕಾರಣಕ್ಕೂ ಹೆಚ್ಚುವರಿ ಅನುದಾನಕ್ಕೆ ಬೇಡಿಕೆ ಸಲ್ಲಿಸುವಂತಿಲ್ಲ ಎಂದು ಕೃಷಿ ಸಚಿವರು ಸ್ಪಷ್ಟಪಡಿಸಿದರು.

ಈಗಾಗಲೇ ಬಜೆಟ್ ನಲ್ಲಿ ಘೋಷಿಸಿರುವ ಅನುದಾನಲ್ಲೇ ವ್ಯವಸ್ಥಿತವಾಗಿ ಸಮ್ಮೇಳನ ನಡೆಸಬೇಕು, ಹೆಚ್ಚು ಆರ್ಥಿಕ ಹೊರೆ ಬೀಳದಂತೆ ನಿಗದಿತ ಅನುದಾನದಲ್ಲೆ ಸಮ್ಮೇಳನ ಯಶ್ವಸಿಯಾಗಿ ನಡೆಸುವಂತೆ ಅಧಿಕಾರಿಗಳಿಗೆ ಸಲಹೆ ನೀಡಿದರು.

ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ಈಗಾಗಲೇ ಸ್ಥಳ ಪರಿಶೀಲನೆ ನಡೆಸಲಾಗಿದ್ದು, ದೂರದ ಜಿಲ್ಲೆಗಳಿಂದ ಆಗಮಿಸುವ ಹಾಗೂ ಮಂಡ್ಯ ಜಿಲ್ಲೆಯ ಜನತೆಗೆ ಅನುಕೂಲವಾದ ಸ್ಥಳವನ್ನು ಅಂತಿಮಗೊಳಿಸಿ ಸಮ್ಮೇಳನದ ಸಿದ್ದತೆ ಮಾಡಿಕೊಳ್ಳುವಂತೆ ಸಭೆಯಲ್ಲಿ ಭಾಗವಹಿಸಿದ ಅಧಿಕಾರಿಗಳಿಗೆ ಕೃಷಿ ಸಚಿವರು ತಿಳಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಮಾತನಾಡಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಾಡಿನ ಅತಿ ದೊಡ್ಡ ಸಾಂಸ್ಕೃತಿಕ ನುಡಿ ಹಬ್ಬ ಇದನ್ನು ಅತ್ಯಂತ ಜವಾಬ್ದಾರಿಯಿಂದ ಎಚ್ಚರಿಕೆಯಿಂದ ನಡೆಸಬೇಕಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ 50ನೇ ವರ್ಷದ ಸುವರ್ಣ ಸಂಭ್ರಮದ ಅಂಗವಾಗಿ ಬಿಡುಗಡೆ ಮಾಡಿರುವ ಲಾಂಛನ ಎಲ್ಲಾ ಕಾರ್ಯಕ್ರಮದಲ್ಲಿ ವಿಶೇ?ವಾಗಿ ಬಿಂಬಿತವಾಗಬೇಕು. ಖರ್ಚು-ವೆಚ್ಚಗಳಿಗೆ ಹೊಣೆಗಾರಿಕೆ ಇರಬೇಕು ಹಾಗಾಗಿ ಎಲ್ಲರೂ ಒಂದಾಗಿ ಕಾರ್ಯಕ್ರಮವನ್ನು ಆಯೋಜಿಸೋಣ ಎಂದರು.

ಕನ್ನಡ ಸಾಹಿತ್ಯ ಪರಿ?ತ್ತು ಅಧ್ಯಕ್ಷ ಮಹೇಶ್ ಜೋಶಿರವರು ಸಮ್ಮೇಳನಾಧ್ಯಕ್ಷರ ಆಯ್ಕೆ, ಕನ್ನಡ ಸಾಹಿತ್ಯ ಸಮ್ಮೇಳನದ ಸ್ವರೂಪ ಗೋಷ್ಠಿಗಳು, ಪುಸ್ತಕ ಮಳಿಗೆ, ಊಟೋಪಚಾರ ಮತ್ತಿತತೆ ವಿಷಯಗಳ ಬಗ್ಗೆ ಮಾಹಿತಿ ನೀಡಿ ಅನುದಾನವು ಜಿಲ್ಲಾಧಿಕಾರಿಗಳಿಗೆ ಬಿಡುಗಡೆಯಾಗಲಿದ್ದು, ಹಣಕಾಸಿನ ಸಂಪೂರ್ಣ ಜವಾಬ್ದಾರಿ ಜಿಲ್ಲಾಡಳಿತದ ಮೇಲಿರುತ್ತದೆ. ಸಾಹಿತ್ಯ ಪರಿಷತ್ತು ಸಂಪೂರ್ಣ ಸಹಕಾರ ನೀಡಿ ಸಮ್ಮೇಳನದ ಯಶಸ್ಸಿಗೆ ಶ್ರಮಿಸಲಿದೆ ಎಂದರು.

ಶಾಸಕರಾದ ನರೇಂದ್ರ ಸ್ವಾಮಿ, ಶಾಸಕ ರಮೇಶ್ ಬಂಡಿಸಿದ್ದೇಗೌಡ, ರವಿಕುಮಾರ್, ಉದಯ್ ಗೌಡ, ವಿಧಾನಪರಿಷ್ ಸದಸ್ಯರಾದ ದಿನೇಶ್ ಗೂಳಿಗೌಡ, ಮಧು ಮಾದೇಗೌಡ, ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್, ಪೊಲೀಸ್ ಅಧೀಕ್ಷಕ ಮಲ್ಲಿಕಾರ್ಜುನ್, ಜಿಲ್ಲಾ ಪಂಚಾಯತಿ ಸಿಇಓ ಶೇಖ್ ತನ್ವೀರ್ ಆಸಿಫ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣಿದೇವಿ ಮಾಲಗತ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ವಿವಿಧ ಪದಾಧಿಕಾರಿಗಳು ಹಾಗೂ ಹಲವು ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

# ಹನೂರಿನಲ್ಲಿ ವಿಜೃಂಭಣೆಯ ಕೆಂಪೇಗೌಡ ಜಯಂತಿ

**ಹನೂರು:** ಪಟ್ಟಣದಲ್ಲಿ ವಿಶ್ವಮಾನವ ಒಕ್ಕಲಿಗರ ಸಂಘದ ವತಿಯಿಂದ ಶ್ರೀ ನಾಡಪ್ರಭು ಕೆಂಪೇಗೌಡರ 515ನೇ ಜಯಂತಿ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು.

ಪಟ್ಟಣದಲ್ಲಿ ನೂತನವಾಗಿ ನಿರ್ಮಾಣ ಮಾಡಿರುವ ಶ್ರೀ ನಾಡಪ್ರಭು ಕೆಂಪೇಗೌಡ ವೃತ್ತದಲ್ಲಿ ಕೆಂಪೇಗೌಡ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದ ನಂತರ ಬೆಳ್ಳಿರಥದಲ್ಲಿ ಕೂರಿಸಲಾಗಿದ್ದ ಶ್ರೀ ನಾಡಪ್ರಭು ಕೆಂಪೇಗೌಡ ಪುತ್ಥಳಿಗೆ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮಿ, ಸಮಾಜದ ಹಿರಿಯ ಮುಖಂಡರು ಮಾಜಿ ಶಾಸಕ ಆರ್. ನರೇಂದ್ರ ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥಸ್ವಾಮಿ ಮಾತನಾಡಿ, ಬೆಂಗಳೂರು ನಿರ್ಮಾತೃ ಕೆಂಪೇಗೌಡ ಜಯಂತಿ ದೇಶಾದ್ಯಂತ ಮೂಲೆ ಮೂಲೆಯಲ್ಲಿ ಆಚರಣೆ ಮಾಡುತ್ತಿದ್ದೇವೆ. ನಾಡಿನ ಜಯಂತಿಗಳು ನಡೆಯುತ್ತಿವೆ ಎಂದರೆ ಅದರ ಹಿಂದೆ ವಿಶೇಷವಾದ ಭಾವನೆಗಳು ಇರುತ್ತವೆ, ಮಹನೀಯರ ಜಯಂತಿ ಆಚರಣೆ ಮಾಡುವ ನಾವು ಅವರ ಬದುಕು ಅವರ ಹೋರಾಟವನ್ನು ನಾವು ಅನುಸರಿಸಬೇಕು. ನಮ್ಮ ಪೂರ್ವಿಕರು ಕೊಟ್ಟಿರುವಂತ ಹಬ್ಬಗಳು, ಜಯಂತಿ ಮಾಡುವುದರಿಂದ ಒಗ್ಗಟ್ಟು ಬೆಳೆಯುತ್ತದೆ, ಬುದ್ಧ, ಬಸವ ಅಂಬೇಡ್ಕರ್, ಕುವೆಂಪು ಎಲ್ಲಾ ನಾಯಕರುಗಳು ಕೂಡ ನಾಡಿಗೆ ಅತ್ಯಂತ ಮರೆಯಲಾಗದ ಕೊಡುಗೆಯನ್ನು ಕೊಟ್ಟಿದ್ದಾರೆ. ಕುವೆಂಪು ಅವರ ಸರ್ವ ಜನಾಂಗದ ಶಾಂತಿಯ ತೋಟ ಅಂತ ಹೇಳಿದ್ದಾರೆ ಅದನ್ನು ಅನುಸರಿಸುತ್ತ ಕೆಂಪೇಗೌಡರು ಕಟ್ಟಿದ್ದ ಬೃಹತ್ ಬೆಂಗಳೂರು ಸರ್ವ ಜನಾಂಗದ ಜನರಿಂದ ಕಂಗೊಳಿಸುತ್ತಿದೆ. ನಮ್ಮ ಪೂರ್ವಿಕರು ಅವರದ್ದೇ ಆದ ವಿಶೇಷ ಕೊಡುಗೆಯನ್ನು ನಾಡಿಗೆ ಕೊಟ್ಟಿದ್ದಾರೆ. ಅದನ್ನು ನಾವು ಅನುಸರಣೆ ಮಾಡುವ ಮೂಲಕ ಉತ್ತಮ ಜಗತ್ತನ್ನು ನಿರ್ಮಾಣ ಮಾಡುವಂತವರಾಗಬೇಕು ನಮ್ಮ ಮಕ್ಕಳಿಗೆ ಎಲ್ಲಾ ಪೂರ್ವಿಕರ ಚರಿತ್ರೆಯನ್ನು ತಿಳಿಸುವ ಜೊತೆಗೆ ಜೀವನದಲ್ಲಿ ನಗು ನಗುತ ಬಾಳೋಣ ಭಗವಂತ ಕೊಟ್ಟಿರೋ ಜೀವನ ಅಮೂಲ್ಯವಾದದ್ದು ಅದನ್ನು ಉತ್ತಮ ಸಮಾಜ ಕಟ್ಟುವ ನಿಟ್ಟಿನಲ್ಲಿ ಸದಾ ಯೋಚನೆ ಮಾಡೋಣ ಮಾನವೀಯತೆಯನ್ನು ಜಗತ್ತಿಗೆ ಸಾರೋಣ ಎಂದು ತಿಳಿಸಿದರು.

ಇನ್ನು ಕಳೆದ ಮೂರು ವರ್ಷಗಳಿಂದ ಹನೂರಿನ ಯುವಕರು ಒಳ್ಳೆಯ ಸಂಘಟಿತರಾಗಿ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆ ಮಾಡುತ್ತಿರುವುದು ಸಂತಸದ ವಿಚಾರ ಮುಂದಿನ ದಿನಗಳಲ್ಲಿ ಇನ್ನಷ್ಟು ಸಂಘಟಿತರಾಗಿ ಜಯಂತಿಗಳನ್ನು ಆಚರಣೆ ಮಾಡುವ ಮೂಲಕ ಅವರ ತತ್ವ ಆದರ್ಶಗಳನ್ನು ತಮ್ಮ ಮೈಗೂಡಿಸಿಕೊಳ್ಳಬೇಕು ಎಂದು ಯುವಕರಿಗೆ ಶುಭ ಹಾರೈಸಿದರು. ಮೆರವಣಿಗೆಯಲ್ಲಿ ಕೇರಳದ ಚಂಡಿ ವಾದ್ಯ, ಡೊಳ್ಳು ಕುಣಿತ ವೀರಗಾಸೆ, ಬೊಂಬೆ ಕುಣಿತ, ದೊಣ್ಣೆ ವರಸೆ, ಹಳ್ಳಿಕಾರ್ ಜೋಡ್ ಎತ್ತುಗಳು ನೋಡುಗರ ಕಣ್ಮನ ಸೆಳೆಯಿತು.



# ಚಾಮುಂಡೇಶ್ವರಿ ವರ್ಧಂತಿ ಕಾರ್ಯಕ್ರಮ

**ವಿಜಯಪುರ;** ಪಟ್ಟಣದಲ್ಲಿ ನಗರ್ತ ಜನಾಂಗದ ವತಿಯಿಂದ ಸುಮಾರು 25 ವರ್ಷಗಳಿಂದ ಚಾಮುಂಡೇಶ್ವರಿ ವರ್ಧಂತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿದ್ದೇವೆ ಎಂದು ನಗರ್ತ ಯುವಕ ಸಂಘ ಗೌರವಾಧ್ಯಕ್ಷರಾದ ಪಿ ಮುರಳೀಧರ್ ತಿಳಿಸಿದರು.

ಪಟ್ಟಣದ ಇತಿಹಾಸ ಪ್ರಸಿದ್ಧ ಶ್ರೀ ನಗರೇಶ್ವರ ಸ್ವಾಮಿ ದೇವಾಲಯದಲ್ಲಿ ಶನಿವಾರದಂದು ಚಾಮುಂಡೇಶ್ವರಿ ವರ್ಧಂತಿ ಪ್ರಯುಕ್ತ ವಿಶೇಷ ಪೂಜೆ ಪುಣಾಸ್ಕಾರಗಳು ಏರ್ಪಡಿಸಲಾಗಿತ್ತು. ನಂತರ ಶ್ರೀ ಚಾಮುಂಡೇಶ್ವರಿ ತಾಯಿ ಪುತ್ಥಳಿಯನ್ನು ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯನ್ನು ನಡೆಸಲಾಯಿತು. ಶ್ರೀ ಚಾಮುಂಡೇಶ್ವರಿ ದೇವಿಯವರಿಗೆ ಹೆಣ್ಣು ಮಕ್ಕಳಿಂದ ಸಂಜೆ ಲಲಿತ ಸಹಸ್ರನಾಮ ಕುಂಕುಮಾರ್ಚನೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಶ್ರೀ ನಗರೇಶ್ವರ ಸ್ವಾಮಿ ಸೇವಾ ಟ್ರಸ್ಟ್ ಅಧ್ಯಕ್ಷರಾದ ಪುನೀತ್ ಶಿವಕುಮಾರ್,ಗೌರವ ಕಾರ್ಯದರ್ಶಿಗಳಾದ ಅಜಿತ್, ಪದಾಧಿಕಾರಿಗಳಾದ ಪ್ರವೀಣ್, ಮೋಹನ್, ಎನ್ ರುದ್ರಮೂರ್ತಿ, ಸಿ ಭಾಸ್ಕರ್, ಸಿ ಸುರೇಶ್ ಮಹಿಳಾ ಸಂಘದ ಕಾರ್ಯದರ್ಶಿಗಳಾದ ಭಾರತಿ ಪ್ರಭುದೇವ್ ನಗರ್ತ ಯುವಕ ಸಂಘದ ಅಧ್ಯಕ್ಷರಾದ ಎ ಮಂಜುನಾಥ್ ಅಂಗಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದರು.



## ತರಬೇತುದಾರರಿಂದ ಪ್ರಸ್ತಾವನೆ

**ರಾಮನಗರ:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಖೇಲೋ ಇಂಡಿಯಾ ಯೋಜನೆಯಡಿ ಸ್ಥಾಪಿಸಲಾಗಿರುವ ಈಜು ಕ್ರೀಡೆಗೆ ಅರ್ಹ ತರಬೇತುದಾರರನ್ನು (ಅಭ್ಯರ್ಥಿಗಳು) ನೇಮಿಸಿಕೊಳ್ಳಲು ಆಸಕ್ತ ಈಜು ತರಬೇತಿ ಪಡೆದ (ಸರ್ಟಿಫೈಡ್ ಕೋರ್ಸ್ ಆಗಿರುವವರು) ಜಿಲ್ಲಾ, ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸರ್ಟಿಫಿಕೇಟ್ ಪಡೆದ ಅಭ್ಯರ್ಥಿಗಳು ತಮ್ಮ ಪ್ರಸ್ತಾವನೆಯನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತುಕ್ರೀಡಾ ಇಲಾಖೆ, ರಾಮನಗರ ಜಿಲ್ಲೆ ಇವರನ್ನು ಖುದ್ದಾಗಿ ಅಥವಾ ಕಛೇರಿ ಅಧೀಕ್ಷಕರು, ದೂರವಾಣಿ ಸಂಖ್ಯೆ: 9448153308 ಇವರನ್ನು ಸಂಪರ್ಕಿಸುವಂತೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

## ಸಮಾಜದಲ್ಲಿ ಮಹಿಳೆಯರಿಗೆ ಸಮಾನತೆ ದೊರಕಬೇಕು

**ಮೈಸೂರು:** ಮೈಸೂರು ನಗರ ವರ್ತುಲ ರಸ್ತೆಯಲ್ಲಿರುವ ಮಾರ್ವೆಲ್ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಬೇಟಿ ಬಚವೋ ಬೇಟಿ ಪಡಾವೋ ಅಭಿಯಾನ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶ್ವೇತಾ ಮಾತನಾಡಿ, ಹೆಣ್ಣು ಮಕ್ಕಳಿಗೆ ಸಮಾನತೆ ದೊರಕುವಂತಾಗಬೇಕು, ಅಸಮಾನತೆ ನಿಲ್ಲಬೇಕು, ಹೆಣ್ಣು ಮಗುವಿಗೆ ಶಿಕ್ಷಣ ನೀಡಿದಾಗ ಇಡೀ ಕುಟುಂಬ ಮಾತ್ರವಲ್ಲ ಸಮಾಜದ ಉದ್ಧಾರ ಸಾಧ್ಯವಾಗುತ್ತದೆ. ಹೆಣ್ಣು ಮಕ್ಕಳಿಗೆ ಇನ್ನು ಹೆಚ್ಚು ಅವಕಾಶಗಳು ಸಿಕ್ಕಲ್ಲಿ ಮಹಿಳೆಯರು ತಮ್ಮ ಪ್ರತಿಭೆ ಹೊರಹಾಕಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಿಸಿದರು. ಕಾಲೇಜಿನ ಪ್ರಾಂಶುಪಾಲೆ ಮಾನಸ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂದು ನಾವು ಹೆಣ್ಣು ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಿ ಮಹಿಳೆಯರು ಶಿಕ್ಷಣ, ಸಾಮಾಜಿಕ, ರಾಜಕೀಯ ಹಾಗೂ ಎಲ್ಲ ಕ್ಷೇತ್ರಗಳಲ್ಲೂ ಗಣನೀಯ ಸಾಧನೆ ಮಾಡಲು ಪ್ರೇರೇಪಿಸಬೇಕೆಂದು ತಿಳಿಸಿ, ಮೂಢನಂಬಿಕೆಗಳನ್ನು ಹೋಗಲಾಡಿಸಿ ವೈಚಾರಿಕತೆಯ ಹಿನ್ನೆಲೆಯಲ್ಲಿ ಪ್ರಜ್ಞಾವಂತರಾಗಿ ಮುನ್ನಡೆಯಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಾಮಾಜಿಕ ಕಾರ್ಯಕರ್ತೆಯರು ಭಾಗವಹಿಸಿ ಜಾಗೃತಿ ಅಭಿಯಾನದಲ್ಲಿ ಪಾಲ್ಗೊಂಡಿದ್ದರು.



## ಶಾಸಕ ದರ್ಶನ್ ಪುಟ್ಟಣ್ಣಯ್ಯ ಭರವಸೆ

# ಚಿನಕುರಳಿ ಆಸ್ಪತ್ರೆಗೆ ಅಗತ್ಯ ಸೌಕರ್ಯ

**ಪಾಂಡವಪುರ :** ತಾಲೂಕಿನ ಚಿನಕುರಳಿ ಆಸ್ಪತ್ರೆಗೆ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಅಗತ್ಯವಿರುವ ಓರ್ವ ವೈದ್ಯ ಸೇರಿದಂತೆ ಮೂವರು ವೈದ್ಯರು, ಸಿಬ್ಬಂದಿ ನೇಮಕ ಹಾಗೂ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಲು ಶ್ರಮಿಸುವುದಾಗಿ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಭರವಸೆ ನೀಡಿದರು.

ತಾಲೂಕಿನ ಚಿನಕುರಳಿ ಆಸ್ಪತ್ರೆ ಸಭಾಂಗಣದಲ್ಲಿ ನಡೆದ ಆರೋಗ್ಯ ರಕ್ಷಾ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಆಸ್ಪತ್ರೆ ಮೇಲ್ದಾವಣಿಗೆ ಚುರುಕಿ ಹಾಕಿಸಿ, ಪಾಂಡವಪುರ ಉಪವಿಭಾಗೀಯ ಆಸ್ಪತ್ರೆ ಮಾದರಿಯಲ್ಲಿ ಗಿಡ-ಮರಗಳನ್ನು ಬೆಳೆಸಿ ಉದ್ಯಾನ ನಿರ್ಮಾಣ ಸೇರಿದಂತೆ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸುವ ಜತೆಗೆ ರಾತ್ರಿ ಪಾಳಿಯ ವೈದ್ಯರು, ನರ್ಸ್ ಗಳು, ಲಾಬ್ ಟೆಕ್ನಿಶಿಯನ್ ನೇಮಕಕ್ಕೆ ಅಗತ್ಯ ಕ್ರಮ ವಹಿಸಲಾಗುವುದು ಎಂದರು.

ಈ ವೇಳೆ ಆರೋಗ್ಯ ರಕ್ಷಾ ಸಮಿತಿ ಸದಸ್ಯರು, ಮೈಸೂರು-ಶಿವಮೊಗ್ಗ ಹೆದ್ದಾರಿಯಲ್ಲಿ ಚಿನಕುರಳಿ ಆಸ್ಪತ್ರೆ ಇರುವ ಹಿನ್ನಲೆಯಲ್ಲಿ ಅಪಘಾತ ಸೇರಿದಂತೆ ಇತರೆ ಆರೋಗ್ಯ ಸಂಬಂಧಿಸಿದಂತೆ ರೋಗಿಗಳು ರಾತ್ರಿ ವೇಳೆ ಹೆಚ್ಚಿನ ಸಂಖ್ಯೆಯಲ್ಲಿ ತುರ್ತು ಚಿಕಿತ್ಸೆಗೆ ಆಗಮಿಸುವುದರಿಂದ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಓರ್ವ ವೈದ್ಯರನ್ನು ಇಲ್ಲಿಗೆ ನಿಯೋಜಿಸಬೇಕು.



ಜತೆಗೆ ಆಸ್ಪತ್ರೆಯಲ್ಲಿ ಕೇವಲ ಮೂವರು ವೈದ್ಯರಿರುವ ಕಾರಣ ಪ್ರತಿನಿತ್ಯ 300ಕ್ಕೂ ಹೆಚ್ಚು ಹೊರರೋಗಿಗಳಿಗೆ ಚಿಕಿತ್ಸೆ ನೀಡಲು ಅನಾನುಕೂಲವಾಗಿದೆ. ಹೀಗಾಗಿ ಇಬ್ಬರು ವೈದ್ಯರನ್ನು ಇಲ್ಲಿಗೆ ನಿಯೋಜನೆ ಮಾಡಲು ಶಾಸಕರಿಗೆ ಮನವಿ ಮಾಡಿದರು.

ಮನವಿ ಸ್ವೀಕರಿಸಿದ ಶಾಸಕರು ಶೀಘ್ರ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಸಭೆಯಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಗಾಯತ್ರಿಕುಮಾರ್, ಉಪಾಧ್ಯಕ್ಷ ಬಿ.ಶ್ರೀನಿವಾಸ್, ತಾಲೂಕು ಆರೋಗ್ಯಾಧಿಕಾರಿ ಡಾ.ಸಿ.ಎ.ಅರವಿಂದ, ಚಿನಕುರಳಿ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ, ಸಮಿತಿ ಸದಸ್ಯ ಕಾರ್ಯದರ್ಶಿ ಡಾ.ಸಂದೀಪ್, ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಎಂ.ನಳಿನಾ, ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಸಿ.ಆರ್.ರಮೇಶ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ನಿರ್ದೇಶಕ ಎನ್.ಕೃಷ್ಣೇಗೌಡ, ಆರೋಗ್ಯ ರಕ್ಷಾ ಸಮಿತಿಯ ನಾಮ ನಿರ್ದೇಶನ ಸದಸ್ಯರಾದ ಸಿ.ನಾಗೇಶ್, ಸಿ.ಎಲ್.ರಾಜು, ಡಿ.ಕೆ.ಪುನೀತ್, ಸಿ.ಎಸ್.ಕಾಂತರಾಜು, ಟಿ.ಎನ್.ಮೇಘನಾ, ಸಿ.ಕೆ.ಸಂಪತ್, ವಿಶೇಷ ಆಹ್ವಾನಿತರಾದ ಸಿ.ಕೆ.ಪುಟ್ಟೇಗೌಡ, ಚಂದ್ರಶೇಖರ್, ರಮೇಶ್, ಸಂದೇಶ ಹಾಗೂ ಆಸ್ಪತ್ರೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಹೊಸೂರು ಎನ್‌ಡಿಸಿಗಾಗಿ ಬ್ಯಾಂಕ್‌ನಿಂದ ಹಣ: ಆರೋಪ

**ಹೊಸೂರು :** ಕೃಷಿ ಸಾಲಪಡೆಯಲು ನೂರಾರು ದಾಖಲೆ ಒದಗಿಸುವ ಸಲುವಾಗಿ ಹೆಣಗುವ ರೈತರಿಗೆ ಎನ್ ಡಿಸಿ ಪಡೆಯಲು ಬ್ಯಾಂಕ್‌ವೊಂದು ಹಣ ಪಡೆದು ಪತ್ರ ಒದಗಿಸುತ್ತಿದ್ದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ಸಾಲಿಗ್ರಾಮ ತಾಲೊಕಿನ ಹೊಸೂರು ಕೃಷಿಪತ್ತಿನ ಸಹಕಾರ ಸಂಘದಲ್ಲಿ ಬೆಳೆಸಾಲ ಪಡೆಯುವ ರೈತರಿಂದ ಈ ಪ್ರಕರಣ ಬೆಳಕಿಗೆ ಬಂದಿದ್ದು ಬೆಳೆ ಸಾಲ ಪಡೆಯುವ ರೈತರು ತಮ್ಮ ಸಮೀಪದಲ್ಲಿರುವ ಪಿಎಲ್‌ಡಿ, ಎಸ್‌ಬಿಐ, ಕರ್ನಾಟಕ ಬ್ಯಾಂಕ್‌ಗಳಿಂದ ಸಹಕಾರ ಸಂಘಗಳಿಗೆ ಅಡಮಾನ ಇಟ್ಟಿರುವ ಭೂಮಿಯಿಂದ ಯಾವುದೇ ಸಾಲ ಪಡೆದಿಲ್ಲವೆಂಬ ಖಾತ್ರಿ ಪಡೆಯುವ ಸಲುವಾಗಿ ಎನ್‌ಡಿಸಿ(ಓಂ ಜಣಜ ಛಿಜಡಿಣಜಿಛಿಚಿಣಜ) ಪಡೆಯುವುದು ಅವಶ್ಯಕ ಆದರೆ ಚುಂಚನಕಟ್ಟೆಯಲ್ಲಿರುವ ಕರ್ನಾಟಕ ಬ್ಯಾಂಕ್‌ನಲ್ಲಿ ಎನ್ ಡಿಸಿ ಪಡೆಯಲು 120ರೂಗಳನ್ನು ಪಡೆಯಲಾಗುತ್ತಿರುವುದು ಅನ್ಯಾಯ ಎಂದು ರೈತರು ದೂರಿದ್ದಾರೆ.

ಯಾವುದೇ ಬ್ಯಾಂಕ್‌ನಿಂದ ಎನ್‌ಡಿಸಿ ಪಡೆಯುವಾಗ ತಮ್ಮ ಆಧಾರ್ ಕಾರ್ಡ್ ನಂಬರ್ ಪಡೆದು ಪರಿಶೀಲನೆ ನಡೆಸಿ ಯಾವುದೇ ಸಾಲ ನೀಡಿಲ್ಲಎಂದು ಖಾತ್ರಿ ಪಡಿಸಿ ನಂತರ ಎನ್‌ಡಿಸಿ ಫಾರಂ ಮೇಲೆ ಸಂಬಂಧಪಟ್ಟ ಬ್ಯಾಂಕ್ ವತಿಯಿಂದ ಸಹಿ ಮತ್ತು ಸೀಲ್ ಹಾಕಿಕೊಡಲಾಗುತ್ತದೆ. ಇಷ್ಟಕ್ಕೆ ಬ್ಯಾಂಕ್‌ಗಳ ವ್ಯಾಪ್ತಿಯ



ಸಾವಿರಾರು ರೈತರಿಂದ ಈ ರೀತಿ ಹಣ ಪಡೆಯುತ್ತಿರುವುದು ನಿಜಕ್ಕೂ ಎಷ್ಟು ಸರಿ ಎಂಬುದು ಯಕ್ಷಪ್ರಶ್ನೆಯಾಗಿದೆ.

ಈ ಹಿಂದೆ ಎಸ್‌ಬಿಐನಲ್ಲಿಯೂ ಇದೇ ರೀತಿ ಹಣ ಪಡೆಯಲಾಗುತ್ತಿತ್ತು. ಆದರೆ ಈ ಬಾರಿ ಉಚಿತವಾಗಿ ಸೇವೆ ನೀಡುತ್ತಿದ್ದು ಕರ್ನಾಟಕ ಬ್ಯಾಂಕ್‌ನಲ್ಲಿ ಮಾತ್ರ ಹಣ ಪಡೆಯುತ್ತಿರುವುದು ಇದರಲ್ಲಿಯೂ ಭ್ರಷ್ಟಾಚಾರವಾಗುತ್ತಿದೆಯೇ ಎಂಬ ಅನುಮಾನಗಳು ಮೂಡುತ್ತಿದ್ದು ರೈತರಿಂದ ಈಗಾಗಲೇ ನಾಲ್ಕೈದು ವರ್ಷಗಳಿಂದಲೂ ಈ ರೀತಿ ಹಣ ವಸೂಲಿ ಧಂಧೆ ನಿರಂತರವಾಗಿ ನಡೆಯುತ್ತಿದ್ದು ಈ ಬಗ್ಗೆ ಬ್ಯಾಂಕ್‌ನವರಿಗೆ ನಿರ್ದೇಶನ ನೀಡುವವರು ಯಾರೂ ಇಲ್ಲವೇ ಎಂದು ರೈತರು ಪ್ರಶ್ನಿಸುತ್ತಿದ್ದಾರೆ.

ಕರ್ನಾಟಕ ಬ್ಯಾಂಕ್‌ನವರು ಹೇಳುವ ಪ್ರಕಾರ ಎನ್‌ಡಿಸಿಗೆ ಹಣ ಪಡೆಯುವ ಬಗ್ಗೆ ನಮ್ಮ ಕೇಂದ್ರ ಕಚೇರಿಯಿಂದಲೇ ನಮಗೆ ಆದೇಶ ಬಂದಿದೆ ಎಂದು ಹೇಳಲಾಗುತ್ತಿದ್ದು ಕೇವಲ ರೈತರ ಬ್ಯಾಂಕ್ ಖಾತೆ ಪರೀಶೀಲನೆ ನಡೆಸಿ ಸಹಿ ಹಾಕಲು 120ರೂಗಳನ್ನು ಪಡೆಯುವ ಔಚಿತ್ಯವೇನು ಎಂಬ ಪ್ರಶ್ನೆಗೆ ಉತ್ತರವಿಲ್ಲವಾಗಿದ್ದು ಖಾಸಗಿ ಬ್ಯಾಂಕ್‌ಗಳ ಈ ಸುಲಿಗೆಗೆ ಕಡಿವಾಣ ಹಾಕಬೇಕಿದೆ.

ಅದೇ ರೀತಿ ಪಿಎಲ್‌ಡಿ(ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್)ನಲ್ಲಿಯೂ ಪ್ರತಿ ಸಾಲಗಾರ ರೈತರಿಗೆ ಎನ್‌ಡಿಸಿ ನೀಡಲು 50ರೂಗಳನ್ನು ಪಡೆಯಲಾಗುತ್ತಿದೆ ಒಟ್ಟಾರೆ ಸಹಕಾರ ಸಂಘಗಳಲ್ಲಿಯೇ ಆಗಲಿ ಯಾವುದೇ ಬ್ಯಾಂಕ್ ಗಳಲ್ಲಿಯೂ ರೈತರು ಕೃಷಿ ಸಾಲ ಪಡೆಯಬೇಕಾದರೆ ತಮ್ಮ ಭೂಮಿ ಅಡಮಾನ ಮಾಡುವುದು ಖಡ್ಡಾಯವಾಗಿದ್ದು ಒಮ್ಮೆ ಅಡಮಾನ ಮಾಡಿ ಸಾಲ ಪಡೆದ ರೈತ ಸಾಲ ತೀರುವಳಿಯಾಗದೇ ಮತ್ತೊಂದು ಬ್ಯಾಂಕ್‌ನಲ್ಲಿ ಸಾಲಪಡೆಯಲು ಸಾಧ್ಯವಿಲ್ಲ ಏಕೆಂದರೆ ಜಮೀನಿನ ಪಹಣಿಗಳಲಿಯೇ ಸಾಲ ಪಡೆದ ಎಲ್ಲಾ ವಿವರಗಳು ದಾಖಲಾಗುತ್ತವೆ ಅಂತಹದರಲ್ಲಿ ಎನ್‌ಡಿಸಿ ಅವಶ್ಯಕತೆಯೇ ಇಲ್ಲವಾದರೂ ಸಹಕಾರ ಸಂಘಗಳು ಎನ್‌ಡಿಸಿ ನೀಡದೇ ಇದ್ದರೆ ಸಾಲ ನೀಡುವುದಿಲ್ಲ.

ಒಟ್ಟಾರೆ ಎನ್‌ಡಿಸಿಗಾಗಿ ರೈತರು ಖಾಸಗಿ ಬ್ಯಾಂಕ್ ಗಳು ಅಲೆದಾಡುವ ನಡುವೆ ನಿತ್ಯ ಸಾವಿರಾರು ರೂಗಳನ್ನು ವ್ಯಯಿಸುತ್ತಿದ್ದು ಎನ್‌ಡಿಸಿ ಅವಶ್ಯಕತೆ ಇದೆಯೇ ಇಲ್ಲ ಇದೊಂದು ಭ್ರಷ್ಟಾಚಾರವೇ ಈಗಲಾದರೂ ಸರ್ಕಾರ,ಕೃಷಿ ಮಂತ್ರಿಗಳು ಇತ್ತ ಗಮನಹರಿಸಿ ರೈತರಿಗೆ ಈ ಸೇವೆ ಉಚಿತವಾಗಿ ದೊರೆಯುವಂತೆ ಮಾಡಬೇಕಿದೆ.

**ರೈತರು ಕೃಷಿ ಸಾಲ ಪಡೆಯಲು ವಿವಿಧ ಬ್ಯಾಂಕ್‌ಗಳ ನಿರಾಕ್ಷೇಪಣಾ ಪತ್ರಕ್ಕಾಗಿ ಕೇಳಿದರೆ ಒಂದು ಸಹಿ, ಸೀಲ್ ಹಾಕಿಕೊಡಲು ಹಣ ಪಡೆಯುವುದು ಎಂತಹ ದುರಂತ ಅಲ್ಲವೇ ರೈತರು ಎಂದರೆ ಮೇಲಿನ ಅಧಿಕಾರಿಗಳು ಹೇಳಿದ್ದಾರೆ ಎಂದು ಈ ರೀತಿ ಹಣ ವಸೂಲಿ ಮಾಡುತ್ತಿರುವುದು ಹಗಲು ದರೋಡೆತನವಾಗಿದೆ.**

**-ಹೆಚ್.ವಿ ನಾಗರಾಜ್** ರೈತ ಹೊಸೂರು.

**ನಮ್ಮ ಬ್ಯಾಂಕ್ ಮ್ಯಾನೇಜರ್ ಸದ್ಯ ರಜೆಯಲ್ಲಿದ್ದು ಎನ್ ಡಿಸಿಗೆ ನಮ್ಮ ಬ್ಯಾಂಕ್ ವತಿಯಿಂದ ಆದೇಶ ಬಂದ ಮೇಲೆಯೇ ನಾವು ಹಣ ವಸೂಲಿ ಮಾಡುತ್ತಿದ್ದು ಹೆಚ್ಚಿನ ವಿವರಗಳಿಗೆ ಮೇಲಾಧಿಕಾರಿಗಳನ್ನೇ ಕೇಳಬೇಕಿದೆ.**

**-ಬ್ಯಾಂಕ್ ಸಿಬ್ಬಂದಿ** ಕರ್ನಾಟಕ ಬ್ಯಾಂಕ್ ಚುಂಚನಕಟ್ಟೆ.

## ನೇಣು ಬಿಗಿದು ಪ್ರೇಮಿಗಳ ಆತ್ಮಹತ್ಯೆ

**ಮೈಸೂರು:** ಪ್ರಿಯತಮೆ ಆತ್ಮಹತ್ಯೆಗೆ ಶರಣಾದ ಕಾರಣದಿಂದ ತೀವ್ರವಾಗಿ ನೊಂದ ಪ್ರಿಯತಮನೂ ನೇಣಿಗೆ ಶರಣಾದ ದುರಂತ ಘಟನೆ ನಡೆದಿದೆ. ಮೋನಿಕಾ(20) ಹಾಗೂ ಮನು(22) ಮೃತ ಪ್ರೇಮಿಗಳು. ಹತ್ತಿರದ ಸಂಭಂಧಿಗಳಾಗಿದ್ದ ಮಂಡಕಳ್ಳಿ ಗ್ರಾಮದ ನಿವಾಸಿ ಮೋನಿಕಾ ಹಾಗೂ ಮೈಸೂರಿನ ಜ್ಯೋತಿನಗರದ ಮನು ಕಳೆದ 2 ವರ್ಷಗಳಿಂದ ಪ್ರೀತಿಸುತ್ತಿದ್ದರು. ಮನೆಯಲ್ಲಿ ಇಬ್ಬರಿಗೂ ಮದುವೆ ಮಾಡಲು ಕುಟುಂಬಸ್ಥರು ತೀರ್ಮಾನಿಸಿದ್ದರು. ಆದರೆ, ಇತ್ತೀಚೆಗೆ ಇಬ್ಬರ ಮಧ್ಯೆ ಕ್ಷುಲ್ಲಕ ಕಾರಣಕ್ಕೆ ಭಿನ್ನಾಭಿಪ್ರಾಯ ಬಂದಿದ್ದು, ಸಣ್ಣ ಗಲಾಟೆ ಆಗಿದೆ. ಇದರಿಂದ ಬೇಸತ್ತ ಮೋನಿಕಾ ದಟ್ಟಗಳ್ಳಿಯ ಕೆಲಸ ಮಾಡುತ್ತಿದ್ದ ಮನೆಯೊಂದರಲ್ಲಿ ನೇಣಿಗೆ ಶರಣಾಗಿದ್ದಾಳೆ. ವಿಷಯ ತಿಳಿದ ಮನು ಸ್ಥಳಕ್ಕೆ ಧಾವಿಸಿ ಮೋನಿಕಾಳನ್ನು ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸುವ ವೇಳೆ ಮೋನಿಕಾ ಮೃತಪಟ್ಟಿದ್ದಾಳೆ ಎನ್ನಲಾಗಿದೆ. ನಂತರ ಮೋನಿಕಾ ಸಾವಿಗೆ ಮನನೊಂದ ಮನು, ತಾನೂ ಸಹ ಜ್ಯೋತಿನಗರದ ಮನೆಯಲ್ಲಿ ನೇಣಿಗೆ ಶರಣಾಗಿದ್ದಾನೆ. ಈ ಮೂಲಕ ಇಬ್ಬರೂ ಪ್ರೇಮಿಗಳು ಸಾವಿನಲ್ಲೂ ಒಂದಾಗಿದ್ದಾರೆ.

## ಚಾಮುಂಡೇಶ್ವರಿ ವರ್ಧಂತಿ

**ಹುಳಿಯಾರು:** ಹುಳಿಯಾರಿನ ಶ್ರೀ ದುರ್ಗಾಪರಮೇಶ್ವರಿ ಹಾಗೂ ಶ್ರೀ ಹುಳಿಯಾರಮ್ಮ ದೇವಸ್ಥಾನಗಳಲ್ಲಿ ಶ್ರೀ ಚಾಮುಂಡೇಶ್ವರಿ ವರ್ಧಂತಿ ಪ್ರಯುಕ್ತ ಶನಿವಾರ ವಿವಿಧ ಧಾರ್ಮಿಕ ಕೈಂಕರ್ಯಗಳನ್ನು ನಡೆಸಲಾಯಿತು. ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಕುಂಕುಮಾರ್ಚನೆ, ಅಭಿಷೇಕ ಸೇರಿದಂತೆ ವಿಶೇಷ ಪೂಜೆ ಜರುಗಿತು. ಸಂಜೆ ಆನಂದಾದ್ರಿ, ಭಜನಾ ಮಂಡಳಿಯಿಂದ ಭಜನೆ, ಮದಾಲ್‌ಸಿ ಉತ್ಸವ ನಡೆದು ತದನಂತರ ಮಹಾಮಂಗಳಾರತಿ ಹಾಗೂ ಪ್ರಸಾದ ವಿನಯೋಗ ಮಾಡಲಾಯಿತು. ಹುಳಿಯಾರಮ್ಮ ದೇವಸ್ಥಾನದಲ್ಲಿ ಅಭಿಷೇಕ, ಕುಂಕುಮಾರ್ಚನೆ ಮಾಡಿ ಎಲೆಪೂಜೆ- ಹೂವಿನ ಅಲಂಕಾರ ಮಾಡಿ ಮಹಾಮಂಗಳಾರತಿ ಮಾಡಲಾಯಿತು. ದೂತರಾಯನ ಮಣೇವು ನಡೆದು ನಂತರ ಪ್ರಸಾದ ವಿತರಿಸಲಾಯಿತು.



# ದೇಶದ ಸೈನಿಕರ ತ್ಯಾಗ, ಬಲಿದಾನದಿಂದ ದೇಶ ಸುಭದ್ರ

**ಪಿರಿಯಾಪಟ್ಟಣ:** 1999ರಲ್ಲಿ ಪಾಕಿಸ್ತಾನದ ವಿರುದ್ಧದ ಯುದ್ಧದಲ್ಲಿ ದೇಶದ ಸೈನಿಕರು ಮಾಡಿದ ತ್ಯಾಗ ಮತ್ತು ಬಲಿದಾನಗಳು ಅವಿಸ್ಮರಣೀಯವಾದುವು ಎಂದು ರೋಟರಿ ಮಿಡ್ ಟೌನ್ ಸಂಸ್ಥೆ ಅಧ್ಯಕ್ಷ ಎಂ.ಎಂ. ರಾಜೇಗೌಡ ತಿಳಿಸಿದರು.

ತಾಲೂಕಿನ ಕುಂದನಹಳ್ಳಿ ಸರ್ಕಲ್ ಬಳಿ ಇರುವ ಕೂರ್ಗ್ ವಾಟರ್ ಪಾರ್ಕ್ ನಲ್ಲಿ 25 ನೇ ಕಾರ್ಗಿಲ್ ವಿಜಯ ದಿವಸ್ ಅಂಗವಾಗಿ ನಿವೃತ್ತ ಯೋಧರಿಗಾಗಿ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದರು. ಪಾಕಿಸ್ತಾನ ಸೇನೆಯ ವಿರುದ್ಧ ಭಾರತೀಯ ಸೇನೆ ಜಯ ಸಾಧಿಸಿ ಇಂದಿಗೆ 25 ವರ್ಷಗಳಾಗುತ್ತಿವೆ. ನಾವು ಜಯಗಳಿಸಲು ನಮ್ಮ ಯೋಧರು ತೋರಿದ ಶೌರ್ಯ, ಪರಾಕ್ರಮಗಳು ಕಾರಣ ಈ ಸವಿ ನೆನಪಿಗಾಗಿ ನಾವು ಪ್ರತಿ ವರ್ಷ ಜುಲೈ 26 ರಂದು ಕಾರ್ಗಿಲ್ ವಿಜಯ ದಿವಸ್ ಆಚರಿಸುತ್ತಿದ್ದೇವೆ ಹಿಂದೆಯೂ1971 ರ ಡಿಸೆಂಬರ್ 16 ರಂದು ಪಾಕಿಸ್ತಾನದ ಸೇನಾಪಡೆಗಳ ಮುಖ್ಯಸ್ಥ ಜನರಲ್ ಅಮೀರ್ ಅಬ್ದುಲ್ಲಾ ಖಾನ್ ನಿಯಾಜಿ ಸೇರಿದಂತೆ 91,000 ಸೈನಿಕರು ಭಾರತೀಯ ಸೇನೆ ಮತ್ತು ಮುಕ್ತಿ ವಾಹಿನಿಯನ್ನು ಒಳಗೊಂಡ ಮಿತ್ರ ಪಡೆಗಳಿಗೆ ಶರಣಾಗಿದ್ದರು. ಆ ಯುದ್ಧದಲ್ಲಿ ಭಾರತದ 3,000 ಸೈನಿಕರು ಹುತಾತ್ಮರಾಗಿದ್ದರು. 10,000 ಮಂದಿ ಗಾಯಗೊಂಡಿದ್ದರು. ಕರ್ನಾಟಕದ 58 ಸೈನಿಕರು ಹುತಾತ್ಮರಾಗಿದ್ದು, 16 ಮಂದಿ ಗಾಯಗೊಂಡು ಅಂಗವಿಕಲರಾಗಿದ್ದರು ಎಂದು ನೆನಪಿಸಿಕೊಂಡ ಅವರು, ದೇಶದ ಪ್ರಜಾಪ್ರಭುತ್ವ ಮತ್ತು ಸಮಗ್ರತೆಯನ್ನು ಕಾಪಾಡುವಲ್ಲಿ ಸೇನಾಪಡೆಗಳ ಕೊಡುಗೆ ದೊಡ್ಡದು. ಪ್ರತಿಕೂಲ ಹವಾಮಾನ, ಬಿಕ್ಕಟ್ಟಿನ ಸನ್ನಿವೇಶಗಳಲ್ಲಿ ಪ್ರಾಣವನ್ನೇ ಪಣವಾಗಿಟ್ಟು ದೇಶವನ್ನು ರಕ್ಷಿಸುವ ಅವರ ತ್ಯಾಗ ಸ್ಮರಣೀಯವಾದುದು. ಯೋಧರ ಸುಖ, ದುಃಖಗಳಲ್ಲಿ ಭಾಗಿಯಾಗಬೇಕಾದುದು ಜನರ ಕರ್ತವ್ಯ ಎಂದರು.

ಪಿರಿಯಾಪಟ್ಟಣ ತಾಲೂಕಿನ ಮಾಜಿ ಸೈನಿಕರಾದ ಸುಬೇದಾರ್ ರವಿಕುಮಾರ್, ಹವಾಲ್ದಾರ್ ಧೃವರಾಜ್, ಹವಾಲ್ದಾರ್ ನರಸೇಗೌಡ, ನಾಯಕ್ ರಜೀತ್ ತಮ್ಮಯ್ಯ, ಹವಾಲ್ದಾರ್ ರಾಜು, ಪುಷ್ಪಾಕರ್, ಮಹಾದೇವ್ ರವರನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಐಕೆಪಿ ಹೆಗಡೆ, ವಲಯ ಸೇನಾನಿ ರಾಜೇಗೌಡ, ಜಂಟಿ ಕಾರ್ಯದರ್ಶಿ ರಾಜು, ಪದಾಧಿಕಾರಿಗಳಾದ ಹರೀಶ್ ಗೌಡ, ಸುನೀಲ್ ಕುಮಾರ್ ಗೌಡ, ಅಪ್ಪಣ್ಣ, ಮಾಜಿ ಸೈನಿಕ ವಿಕ್ರಂ ರಾಜ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



### ಚಾಮುಂಡೇಶ್ವರಿ ಕ್ಷೇತ್ರದ ಶಾಸಕ, ಮಾಜಿ ಸಚಿವ ಜಿಟಿ ದೇವೇಗೌಡ ಸಲಹೆ

# ಮಕ್ಕಳಲ್ಲಿ ಪರಿಸರ ಪ್ರೇಮ ಬೆಳೆಸಿ




**ಮೈಸೂರು:** ವಿಶ್ವ ಹವಾಮಾನ ವೈಪರೀತ್ಯಕ್ಕೆ ಬಹು ದೊಡ್ಡ ಬೆಲೆ ತೆರುತ್ತಿದೆ. ನಮ್ಮ ಮುಂದಿನ ಜನಾಂಗಕ್ಕೆ ಈ ಜಗತ್ತನ್ನು ಸುರಕ್ಷಿತವಾಗಿ ನೀಡಿ ಹೋಗಬೇಕಾದರೆ, ನಾವು ಪರಿಸರ ಪ್ರಜ್ಞೆ ಬೆಳೆಸಿಕೊಂಡು, ಪರಿಸರಕ್ಕೆ ತಗ್ಗಿ ಬಗ್ಗಿ ನಡೆಯಬೇಕು. ಮಕ್ಕಳಲ್ಲಿ ಎಳವೆಯಿಂದಲೇ ಪರಿಸರ ಜಾಗೃತಿ ಮೂಡಿಸಬೇಕು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ, ಮಾಜಿ ಸಚಿವ ಜಿಟಿ ದೇವೇಗೌಡ ತಿಳಿಸಿದ್ದಾರೆ.

ನಗರದ ಎಚ್ ಡಿ ಕೋಟೆ ರಸ್ತೆಯಲ್ಲಿರುವ ಪೂರ್ಣ ಚೇತನ ಶಾಲೆಯಲ್ಲಿ ಭಾನುವಾರ ನಡೆದ 944 ಇಕೋಬ್ರಿಕ್ಸ್ ತಯಾರಿ ಹಾಗು 10,777 ಗ್ರೋ ಬ್ಯಾಗ್ ಗಳಲ್ಲಿ ಬೀಜ ಭಿತ್ತನೆ ಮೂಲಕ ವಿಶ್ವ ದಾಖಲೆ ನಿರ್ಮಿಸಿದ ವಿದ್ಯಾರ್ಥಿಗಳನ್ನು ಅಭಿನಂದಿಸಿ ಅವರು ಮಾತನಾಡಿದರು.

ಬೆಳಗ್ಗೆ 11 ಗಂಟೆಗೆ ಆರಂಭವಾದ ಈ ವಿಶ್ವದಾಖಲೆ ಕಾರ್ಯಕ್ರಮದಲ್ಲಿ ಪೂರ್ವ ಪ್ರಾಥಮಿಕದಿಂದಿಡಿದು ಹತ್ತನೇ ತರಗತಿವರೆಗಿನ 550 ವಿದ್ಯಾರ್ಥಿಗಳು ಮಂಗಳವಾರ ನಗರದ ಮಾರುಕಟ್ಟೆ ಪ್ರದೇಶಗಳಿಂದ ಸಂಗ್ರಹಿಸಿದ್ದ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಬಳಸಿಕೊಂಡು 944 ಇಕೋಬ್ರಿಕ್ಸ್ ತಯಾರಿ ಹಾಗು ಅರಣ್ಯ ಇಲಾಖೆ ನಾನಾ ಮರಗಳ ಬೀಜಗಳನ್ನು 10,777 ಗ್ರೋ ಬ್ಯಾಗ್ ಗಳಲ್ಲಿ ಬಿತ್ತುವ ಮೂಲಕ ಅವರು ಈ ದಾಖಲೆ ಸೃಷ್ಟಿಸಿದರು.

ಹಲವಾರು ಬಾರಿ ತುಂತುರು ಮಳೆ ಆಗಮಿಸಿ ಈ ವಿಶ್ವ ದಾಖಲೆಯ ಈ ಪರಿಸರ ಸ್ನೇಹಿ ಪ್ರಯತ್ನಕ್ಕೆ ಪುಷ್ಪವೃಷ್ಟಿಯ ಮೂಲಕ ಶುಭ ಹಾರಿಸುವಂತಹ ವಿಶಿಷ್ಟ ವಾತಾವರಣದಲ್ಲಿ ಮಕ್ಕಳು ಈ ದಾಖಲೆ ಸೃಷ್ಟಿಸಿದರು.

ಎರಡು ಗಂಟೆಗಳಲ್ಲಿ ಈ ಎರಡು ಹೊಸ ದಾಖಲೆಗಳು ಸೃಷ್ಟಿಯಾಗುತ್ತಿದ್ದಂತೆ, ಅಲ್ಲಿ ನೆರೆದಿದ್ದ ನೂರಾರು ಹೆತ್ತವರು, ಸಾರ್ವಜನಿಕರು, ವಿದ್ಯಾರ್ಥಿಗಳನ್ನು ಅಭಿನಂದಿಸಿ, ಸ್ವಚ್ಛ -ಹಸಿರು ಭೂಮಿಗಾಗಿನ ಅವರ ಪ್ರಯತ್ನವನ್ನು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಲೆಯ ಅಧ್ಯಕ್ಷರಾದ ಡಾ. ವಿದ್ಯಾಸಾಗರ್ ಪಿ, ಈ ಇಡೀ ಪ್ರಯತ್ನದ ಮುಖ್ಯ ಉದ್ದೇಶ ಸಮಾಜದ ಸವಾಲುಗಳಿಗೆ ಮನ ಮಿಡಿಯುವ ಪ್ರಜೆಗಳನ್ನು ನಿರ್ಮಿಸಿ, ಭವ್ಯ ಭಾರತದ ಕನಸನ್ನು ನನಸಾಗಿಸುವುದು ಎಂದು.

ಸ್ವಾಮಿ ವಿವೇಕಾನಂದರು ಸೇರಿದಂತೆ, ನಮ್ಮ ಸಂತ ಶ್ರೇಷ್ಠರು, ದಾರ್ಶನಿಕರ ಕನಸು ನನಸಾಗಿಸುವ ಉದ್ದೇಶದಿಂದ, ಇಂತಹ ವಿಶಿಷ್ಟ ಕಾರ್ಯಕ್ರಮಗಳನ್ನು ನಾವು ಹಮ್ಮಿಕೊಳ್ಳುತ್ತಿದ್ದೇವೆ, ಎಂದು ಅವರು ತಿಳಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಮೈಸೂರು ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಟಿ ಹೀರಾಲಾಲ್ ಮಾತನಾಡಿ, ಇಂತಹ ವಿಶಿಷ್ಟ ಕಾರ್ಯಕ್ರಮ ಆಯೋಜಿಸುವ ಮೂಲಕ ಪೂರ್ಣ ಚೇತನ ಶಾಲೆ, ನಮ್ಮ ಮುಂದಿನ ಜನಾಂಗವನ್ನು ಪರಿಸರ ಪ್ರೇಮಿಗಳನ್ನಾಗಿಸಿ, ಈ ದೇಶದ ಸಂಪತ್ತಾಗಿಸುತ್ತಿದೆ ಎಂದು ತಿಳಿಸಿದರು.

ಶಾಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ ದರ್ಶನ್ ರಾಜ್ ಮಾತನಾಡಿ, ಮುಂದಿನ ದಿನಗಳಲ್ಲಿ, ಈ ಇಕೋ ಬ್ರಿಕ್ಸ್ ಹಾಗು ಗ್ರೋ ಬ್ಯಾಗ್ ತಯಾರಿಯನ್ನು ನಿಯಮಿತವಾಗಿ ನಡೆಸಲಾಗುವುದು. ಆ ಮೂಲಕ ಪ್ಲಾಸ್ಟಿಕ್ ಸಮಸ್ಯೆಗೆ ಪರಿಹಾರ ಕೆಂಧು ಹುಡುಕುವ ಕೆಲಸವನ್ನು ನಮ್ಮ ಶಾಲೆ ಮಾಡಲಿದೆ. ನಮ್ಮೊಂದಿಗೆ ಸರಕಾರಿಶಾಲೆಗಳನ್ನು ಕೂಡಾ ಒಳಗೊಂಡು ಈ ಪ್ರಯತ್ನ ಮುಂದುವರೆಸುತ್ತೇವೆ, ಎಂದು ಅವರು ತಿಳಿಸಿದರು.

ಶಾಲೆಯ ಮುಖ್ಯ ಆಡಳಿತಾಧಿಕಾರಿ ಮಾಧುರ್ಯ ರಾಮಸ್ವಾಮಿ ಮಾತನಾಡಿ, ನಮ್ಮ ವಿದ್ಯಾರ್ಥಿಗಳನ್ನು ಭವಿಷ್ಯದ ಉತ್ತಮ ನಾಗರೀಕರನ್ನಾಗಿಸುವ ನಿಟ್ಟಿನಲ್ಲಿ ನಾವು ನಮ್ಮೆಲ್ಲ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದೇವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಅಮೀತ್ ಕೆ ಹಿಂಗೋರಾಣಿ ರಾಯಭಾರಿ ಮತ್ತು ಹಿರಿಯ ತೀರ್ಪುಗಾರರು

ಎಲ್ಲೈಟ್ ವರ್ಲ್ಡ್ ರೆಕಾರ್ಡ್ಸ್,ಪಿ.ಜಿ. ಪ್ರತಿಬಾ, ಏಷ್ಯನ್ ರೆಕಾರ್ಡ್ಸ್ ಅಕಾಡೆಮಿ ,ಕೆ ಆರ್ ವೆಂಕಟೇಶ್ವರನ್, ರೆಕಾರ್ಡ್ಸ್ ಮ್ಯಾನೇಜರ್ ,ಇಂಡಿಯಾ ರೆಕಾರ್ಡ್ಸ್ ಅಕಾಡೆಮಿ, ಹಾಗೂ ಶಾಲೆಯ ಪ್ರಾಂಶುಪಾಲೆ ಪ್ರಿಯಾಂಕಾ ಬಿ, ಡೀನ್ ಲಾವಣ್ಯ ಉಪಸ್ಥಿತರಿದ್ದರು.

## ಗ್ರಾಪಂ ಮಾಜಿ ಸದಸ್ಯ ಮೈಲಾರಯ್ಯ ನಿಧನ

**ಹುಳಿಯಾರು:** ಚಿಕ್ಕನಾಯಕನಹಳ್ಳಿ ತಾಲೂಕು ಹುಳಿಯಾರು ಹೋಬಳಿಯ ಲಿಂಗಪ್ಪನ ಪಾಳ್ಯದ ಗ್ರಾಮ ಪಂಚಾಯ್ತಿ ಮಾಜಿ ಸದಸ್ಯ ಮೈಲಾರಯ್ಯ (79) ವಯೋಸಹಜ ಭಾನುವಾರ ಬೆಳಗ್ಗೆ ನಿಧನರಾದರು. ಮೃತರಿಗೆ ಪತ್ನಿ, ಓರ್ವ ಪುತ್ರ ಇಬ್ಬರು ಮೊಮ್ಮಕ್ಕಳು ಇದ್ದಾರೆ. ಅಂತ್ಯಕ್ರಿಯೆಯು ಲಿಂಗಪ್ಪನ ಪಾಳ್ಯದ ಮೃತರ ಜಮೀನಿನಲ್ಲಿ ನಡೆಯಿತು.

## ದಲಿತರ ಮೇಲಿನ ದೌರ್ಜನ್ಯ, ಹಲ್ಲೆ, ಮೀಸಲು ಹಣದ ದುರುಪಯೋಗ ತಡೆಗಟ್ಟಲು ಆಗ್ರಹ

ವಿಜಯಪುರ: ರಾಜ್ಯದಾದ್ಯಂತ ನಿರಂತರವಾಗಿ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯ ಹಾಗೂ ದಲಿತರಿಗಾಗಿ ಮೀಸಲಿಟ್ಟಿರುವ ಹಣದ ದುರುಪಯೋಗ ತಡೆಗಟ್ಟಲು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಭಾರತ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ದೌರ್ಜನ್ಯ ತಡೆ ಕಾಯ್ದೆ ಸಮಿತಿ ಸದಸ್ಯರಾದ ಓಬದೇನಹಳ್ಳಿ ಮುನಿಯಪ್ಪ ರವರು ಸರ್ಕಾರವನ್ನು ಆಗ್ರಹಿಸಿದರು. ಇಲ್ಲಿನ ಬಸವೇಶ್ವರ ನಗರದಲ್ಲಿ ವರದಿಗಾರರೊಂದಿಗೆ ಮಾತನಾಡುತ್ತಾ, ರಾಮನಗರ ಜಿಲ್ಲೆಯ, ಕನಕಪುರ ತಾಲೂಕಿನ, ಮಾಳಗಾಳು ಗ್ರಾಮದಲ್ಲಿ ಗಾಂಜಾ ಮತ್ತಿತರೆ ಮಾದಕ ವಸ್ತು ಬಳಸುವ ಅಭ್ಯಾಸವುಳ್ಳವರಿಂದ ಇಲ್ಲಿನ 25 ವರ್ಷದ ದಲಿತ ಹುಡುಗ ಅನಿಶ್ ಎಂಬುವರ ಮೇಲೆ



ಹಲ್ಲೆ ನಡೆಸಿದ್ದು ಆತನ ತಲೆಯನ್ನು ಕತ್ತರಿಸಲು ಹೋದಾಗ ಆತ ತನ್ನ ಕೈಯನ್ನು ಅಡ್ಡ ಇಟ್ಟ ಕಾರಣ ಕೈ ಕತ್ತರಿಸಿ ಹೋಗಿದೆ ಎಂದು ತಿಳಿಸಿ, ಇದೇ ವ್ಯಕ್ತಿಯ ಸಂಬಂಧಿಕ ಸಾಗರ್ ಎಂಬುವವರ ಮೇಲೆ ಕಳೆದ ವರ್ಷ ನಡೆದ ಹಲ್ಲೆಯಲ್ಲಿ ಆತನ ಎರಡು ಕಾಲುಗಳು ಕತ್ತರಿಸಿ ಹೋಗಿದ್ದು ಈ ರೀತಿಯಲ್ಲಿ ರಾಜ್ಯದಾದ್ಯಂತ ಕಾಂಗ್ರೆಸ್ ಸರ್ಕಾರದಲ್ಲಿ ನಿರಂತರ ಹಲ್ಲೆ ದೌರ್ಜನ್ಯ ಪ್ರಕರಣಗಳು ನಡೆಯುತ್ತಿದ್ದು, ಕೂಡಲೇ ಇವುಗಳನ್ನು ತಪ್ಪಿಸಲು ಕ್ರಮ ಕೈಗೊಳ್ಳಬೇಕೆಂದು, ಪ್ರಕರಣ ನಡೆದಿರುವ ತಾಲೂಕಿನ ಸಚಿವರು, ಉಪಮುಖ್ಯಮಂತ್ರಿಗಳು ಆದ ಡಿಕೆ ಶಿವಕುಮಾರ್ ರವರು ಇದರ ಜವಾಬ್ದಾರಿ ಹೊರಬೇಕಾಗಿದೆ ಎಂದು, ಇದರ ಬಗ್ಗೆ ಮಾಹಿತಿಗಳಿದ್ದರೂ ಸಹ ಯಾವುದೇ ಕ್ರಮ ಕೈಗೊಳ್ಳದ ಪೊಲೀಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಬೇಕೆಂದು ಆಗ್ರಹಿಸಿರುವರು. ವಾಲ್ಮೀಕಿ ನಿಗಮದ ದಲಿತರಿಗೆ ಸೇರಿದ ಹಣವನ್ನು ದುರುಪಯೋಗಪಡಿಸಿಕೊಂಡು ಬೇರೆ ರಾಜ್ಯಗಳಿಗೆ ವರ್ಗಾವಣೆ, ಚುನಾವಣೆಗಳಿಗೆ ಬಳಕೆ, ಬಂಗಾರ ಹಾಗೂ ಕಾರುಗಳನ್ನು ಈ ಹಣದಿಂದ ಕೊಂಡಿರುವುದು ದಲಿತರ ಹಣ ದುರುಪಯೋಗಕ್ಕೆ ಸಾಕ್ಷಿಯಾಗಿದ್ದು, ಪ್ರಕರಣ ಸಿಬಿಐ ತನಿಖೆಗೆ ವಹಿಸಬೇಕೆಂದರು.

# ನ್ಯಾಯಾಲಯದ ಆದೇಶದಂತೆ ಹರಾಜಿನವರೆವಿಗೆ ತೆರವು ಮಾಡಬೇಡಿ

**ಹುಳಿಯಾರು:** ನ್ಯಾಯಾಲಯದ ಆದೇಶದಂತೆ ಮಳಿಗೆಗಳ ಹರಾಜಿಗೆ ನಾವು ಬದ್ದರಾಗಿದ್ದೇವೆ. ನೀವೂ ಸಹ ನ್ಯಾಯಾಲಯದ ಆದೇಶದಂತೆ ಹರಾಜಿನವರೆವಿಗೆ ತೆರವು ಮಾಡಿಸಲು ಮುಂದಾಗಬೇಡಿ ಎಂದು ಹುಳಿಯಾರು ಪಪಂ ವಾಣಿಜ್ಯ ಮಳಿಗೆಗಳ ಬಾಡಿಗೆದಾರರು ಮನವಿ ಮಾಡಿದರು.

ಹುಳಿಯಾರು ಪಪಂ ಕಛೇರಿ ಮುಂದೆ ಕೆಲ ಸದಸ್ಯರು ಮಳಿಗೆಗಳ ತೆರವಿಗೆ ಪಟ್ಟು ಹಿಡಿದು ಧರಣಿ ಕುಳಿತಿದ್ದರಿಂದ ಗ್ರೇಡ್ 2 ತಹಸೀಲ್ದಾರ್ ಕೀರ್ತಿ ಅವರು ಧರಣಿ ಸ್ಥಳಕ್ಕೆ ಆಗಮಿಸಿ ಶನಿವಾರ ತೆರವು ಮಾಡುವಂತೆ ಪಪಂ ಮುಖ್ಯಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದರು. ಅದರಂತೆ ಮಳಿಗೆದಾರರಿಗೆ ತೆರವು ಮಾಡುವಂತೆ ಮೌಖಿಕವಾಗಿ ಪಂಚಾಯ್ತಿ ಸಿಬ್ಬಂದಿಗಳಿಂದ ತಿಳಿಸಲಾಗಿತ್ತು. ಆದರೂ ತೆರವಿಗೆ ಮುಂದಾಗದಿದ್ದರಿಂದ ಹುಳಿಯಾರು ಪೊಲೀಸ್ ಠಾಣೆಯಲ್ಲಿ ಪಿಎಸ್‌ಐ ಧರ್ಮಾಂಜಿ ಹಾಗೂ ಪಪಂ ಮುಖ್ಯಾಧಿಕಾರಿ ನಾಗಭೂಷಣ್ ಅವರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಅವರು ಮನವಿ ಮಾಡಿಕೊಂಡರು.

ನ್ಯಾಯಾಲಯವು ಮಳಿಗೆಗಳನ್ನು ಹರಾಜು ಮಾಡಲು 2022 ರಲ್ಲೇ ತೀರ್ಪು ನೀಡಿದೆ. ಅಲ್ಲದೆ



ಹರಾಜಿನಲ್ಲಿ ಅಂತಿಮವಾಗಿ ನಿಂತ ಬಿಡ್‌ಗೆ ಶೇ.5 ರಷ್ಟು ಹೆಚ್ಚು ಬಾಡಿಗೆ ಕೊಡುವುದಾದರೆ ಮೂಲ ಬಾಡಿಗೆದಾರರನ್ನೇ ಮುಂದುವರೆಸುವಂತೆಯೂ ಇದಕ್ಕೆ ಒಪ್ಪದಿದ್ದರೆ ಕರ್ನಾಟಕ ಸಾರ್ವಜನಿಕ ಆವರಣಗಳ ಅಧಿನಿಯಮ 1974 ರ ಪ್ರಕಾರ ಮಳಿಗೆ ಖಾಲಿ ಮಾಡಿಸುವಂತೆ ಇದೇ ತೀರ್ಪಿನಲ್ಲಿ ಇದೆ. ನಾವು ಈ ತೀರ್ಪಿಗೆ ಬದ್ದರಾಗಿದ್ದು ಹರಾಜಿನಲ್ಲಿ ನಿಂತ ಬಾಡಿಗೆ ಹಣಕ್ಕೆ ಶೇ.5 ರಷ್ಟು ಹೆಚ್ಚು ಬಾಡಿಗೆ ಕೊಡಲು ನಮಗೆ ಸಾಧ್ಯವಾಗದಿದ್ದರೆ ನ್ಯಾಯಾಲಯದ ತೀರ್ಪಿನಂತೆ ಖಾಲಿ ಮಾಡುತ್ತೇವೆ ಎಂದು ತಿಳಿಸಿದರು.

ಇದಕ್ಕೆ ಮುಖ್ಯಾಧಿಕಾರಿಗಳು ನಿಮ್ಮ ಬಾಡಿಗೆ ಕರಾರು ಅವಧಿ ಈಗಾಗಲೇ ಮುಗಿದಿದೆ. ಅಲ್ಲದೆ ಕೆಲ ಬಿಲ್ಡಿಂಗ್ ಡೆಮಾಲಿಷ್ ಹಾಗೂ ಕೆಲ ಬಿಲ್ಡಿಂಗ್ ಗಳನ್ನು ರಿಪೇರಿ ಮಾಡಿಸಬೇಕಿದೆ. ಹಾಗಾಗಿ ಮೊದಲು ರಿಪೇರಿ ಮಾಡಿಸಿ ನಂತರ ಹರಾಜು ಮಾಡಬೇಕಿದೆ. ಹಾಗಾಗಿ ಸೋಮವಾರ ತೆರವು ಮಾಡಿ ಎಂದು ತಿಳಿಸಿದರು. ಇದಕ್ಕೆ ಮಳಿಗೆದಾರರು ಇಲ್ಲಿಯವರೆವಿಗೂ ಆಷಾಡ ಇದಿದ್ದರಿಂದ ವ್ಯಾಪಾರ ನಡೆದಿರಲಿಲ್ಲ. ಈಗ ಶ್ರಾವಣ ಆರಂಭವಾಗಿದ್ದು ಇರುವ ಸ್ಟಾಕ್ ಖಾಲಿ ಮಾಡಿಕೊಂಡು ಮತ್ತೊಂದು ಮಳಿಗೆ ಹುಡುಕಿಕೊಳ್ಳುವವರೆವಿಗಾದರೂ ಕಾಲವಕಾಶ ಕೊಡಿ ಎಂದು ಕೇಳಿಕೊಂಡರಾದರೂ ಮುಖ್ಯಾಧಿಕಾರಿಗಳು ಒಪ್ಪಲಿಲ್ಲ. ಊರಿನ ಅಭಿವೃದ್ಧಿ ದೃಷ್ಟಿಯಿಂದ ನೀವೇ ಮಳಿಗೆ ಖಾಲಿ ಮಾಡಿ ಸಹಕರಿಸಿ ಎಂದರಲ್ಲದೆ ಹರಾಜು ಮುಗಿದಾಗ ಶೇ.5 ರಷ್ಟು ಹೆಚ್ಚು ಬಾಡಿಗೆ ನೀವೇ ಕೊಟ್ಟರೆ ಪುನಃ 12 ವರ್ಷ ನಿಮಗೆ ಬಾಡಿಗೆ ಕೊಡುತ್ತೇವೆ ಎಂದರು. ಆದರೆ ಮಳಿಗೆದಾರರು ಮಾತ್ರ ನಾವು ಇದ್ದಂಗೇ ಹರಾಜು ಮಾಡಿ ನಂತರ ಬೇಕಿದ್ದರೆ ದುರಸ್ತಿ ಮಾಡಬಹುದು ಎಂದು ಕೇಳಿಕೊಂಡರು. ಹೀಗೆ ಗಂಟೆಗೂ ಹೆಚ್ಚು ಕಾಲ ಮಾತುಕತೆ ನಡೆಯಿತಾದರೂ ಬಾಡಿಗೆದಾರರ ಮನವಿಗೆ ಪಪಂ ಮುಖ್ಯಾಧಿಕಾರಿ ಸ್ಪಂದಿಸಲಿಲ್ಲ. ಅಲ್ಲದೆ ಮಳಗೆ ತೆರವಿಗೆ ನಮೊಂದಿಗೆ ಸಹಕರಿಸುವಂತೆ ಪಿಎಸ್‌ಐ ಅವರಿಗೆ ತಿಳಿಸಿ ಸಭೆ ಮುಕ್ತಾಯ ಮಾಡಲಾಯಿತು.

# ಮೈಸೂರಿನ ಕರಾಮುವಿಯ ಸಾಲಿನ ಪ್ರವೇಶಾತಿ ಆರಂಭ

**ಬೆಂಗಳೂರು:** ಮೈಸೂರಿನ ಕರಾಮುವಿಯು ಪ್ರಸಕ್ತ 2024-25ನೇ (ಜುಲೈ ಆವೃತ್ತಿ) ಶೈಕ್ಷಣಿಕ ಸಾಲಿಗೆ ಪ್ರವೇಶಾತಿ ಆರಂಭಿಸಿದ್ದು, ಸ್ನಾತಕ/ಸ್ನಾತಕೋತ್ತರ ಕೋರ್ಸ್‌ಗಳಾದ ಬಿ.ಎ/ಬಿ.ಕಾಂ/ಬಿ.ಎಸ್.ಡಬ್ಲ್ಯೂ/ಬಿ.ಬಿ.ಎ/ಬಿ.ಸಿ.ಎ/ಬಿ.ಎಸ್ಸಿ-(ಜನರಲ್ ಮತ್ತು ಐ.ಟಿ), ಬಿ.ಎಲ್.ಐ.ಎಸ್ಸಿ / ಎಂ.ಎ/ ಎಂ.ಸಿ.ಜೆ/ ಎಂ.ಎಸ್.ಡಬ್ಲ್ಯೂ/ ಎಂ.ಕಾಂ/ ಎಂ.ಎಲ್.ಐ.ಎಸ್ಸಿ/ ಎಂ.ಸಿ.ಎ/ ಎಂ.ಎಸ್ಸಿ / ಎಂ.ಬಿ.ಎ. ಪಿ.ಜಿ. ಸರ್ಟಿಫಿಕೇಟ್ ಪ್ರೋಗ್ರಾಮ್ಸ್/ ಡಿಪ್ಲೋಮಾ ಪ್ರೋಗ್ರಾಮ್ಸ್/ ಸರ್ಟಿಫಿಕೇಟ್ ಪ್ರೋಗ್ರಾಮ್ಸ್‌ಗಳಿಗೆ ಪ್ರವೇಶಾತಿಯನ್ನು ಮಾಡಿಕೊಳ್ಳಲಾಗುತ್ತಿದೆ. ಕರಾಮುವಿಯು ಮಲ್ಲೇಶ್ವರಂನ ಪ್ರಾದೇಶಿಕ ಕೇಂದ್ರದಲ್ಲಿ ಮಹಿಳಾ ಮತ್ತು ಪುರುಷ ವಿದ್ಯಾರ್ಥಿಗಳಿಗೆ ಪ್ರವೇಶಾತಿಗೆ ಅವಕಾಶ ಕಲ್ಪಿಸಿದೆ. ಪ್ರಥಮ ವರ್ಷದ ಈ ಮೇಲ್ಕಂಡ ಕೋರ್ಸ್‌ಗಳ ಪ್ರವೇಶಾತಿ 22/07/2024 ರಿಂದ ಪ್ರಾರಂಭವಾಗಿದೆ. ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ತಿಳಿಸುವುದೇನೆಂದರೆ ಕರಾಮುವಿಯ ಅಧಿಕೃತ ವೆಬ್‌ಸೈಟ್ www.ksoumysuru.ac.inನಲ್ಲಿ KSOU Admission Portal ಮೂಲಕ ಈ ಮೇಲ್ಕಂಡ ಪದವಿಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡಿ ನಂತರ ಪ್ರಾದೇಶಿಕ ಕೇಂದ್ರಕ್ಕೆ ಖುದ್ದಾಗಿ ಭೇಟಿ ನೀಡಿ ಆನ್ ಲೈನ್ ಮುಖಾಂತರ ಪ್ರವೇಶಾತಿ ಶುಲ್ಕ ಪಾವತಿಸಿ ಪ್ರವೇಶಾತಿ ಪಡೆಯಲು ಪ್ರಾದೇಶಿಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:- ಶಶಿಕಲಾ ಜೆ, ಪ್ರಾದೇಶಿಕ ನಿರ್ದೇಶಕರು, ಕ.ರಾ.ಮು.ವಿ ಮಹಿಳಾ ಪ್ರಾದೇಶಿಕ ಕೇಂದ್ರ, ಸರ್ಕಾರಿ ಪದವಿ ಪೂರ್ವ ಬಾಲಕಿಯರ ಕಾಲೇಜು, 4ನೇ ಮುಖ್ಯರಸ್ತೆ, 13ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03. ಕಛೇರಿ ದೂರವಾಣಿ ಸಂಖ್ಯೆ:- 080 23448811, 9741197921, 9483517160, 7760848564. 9620395584,

# ಅಭಿವೃದ್ಧಿ ಕಾಮಗಾರಿಗೆ ದರ್ಶನ್ ಪುಟ್ಟಣ್ಣಯ್ಯ ಚಾಲನೆ

**ಪಾಂಡವಪುರ :** ತಾಲೂಕಿನ ವಿವಿಧೆಡೆ 2.26ಕೋಟಿ ರೂಪಾಯಿಗಳ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ಹಾಗೂ ಹೆಚ್ಚುವರಿ ಶಾಲಾ ಕೊಠಡಿ ಉದ್ಘಾಟನಾ ಕಾರ್ಯಕ್ರಮಕ್ಕೆ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಚಾಲನೆ ನೀಡಿದರು.

ತಾಲೂಕಿನ ಸುಂಕಾತೊಣ್ಣೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಲ್ಲಹಳ್ಳಿ ಹಾಗೂ ಅತ್ತಿಗಾನಹಳ್ಳಿ ಗ್ರಾಮದಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ 1.10ಕೋಟಿ ರೂಪಾಯಿಗಳ ಕುಡಿಯುವ ನೀರಿನ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದರು.

50ಲಕ್ಷ ರೂ. ವೆಚ್ಚದಲ್ಲಿ ತಾಲೂಕಿನ ನೀಲಹಳ್ಳಿ ಗ್ರಾಮದಲ್ಲಿ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದರು. ಬಳಿಕ ಮೇಲುಕೋಟೆಯಲ್ಲಿ 50ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಕಾಮಗಾರಿ ಗುದ್ದಲಿ ಪೂಜೆ ನೆರವೇರಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಪ್ರತಿ ಮನೆ ಮನೆಗೆ ಶುದ್ಧ ಕಾವೇರಿ ನೀರು ಒದಗಿಸುವ ಮಹತ್ವಾಕಾಂಕ್ಷೆ ಯೋಜನೆಗಳಲ್ಲಿ ಜಲ ಜೀವನ್ ಮಿಷನ್ ಯೋಜನೆ ಒಂದಾಗಿದೆ. ಯೋಜನೆಯನ್ನು ಶೀಘ್ರ ಅನುಷ್ಠಾನಗೊಳಿಸುವಂತೆಯೂ ಹಾಗೂ ಗುಣಮಟ್ಟದ ಕಾಮಗಾರಿ ನಿರ್ವಹಿಸುವಂತೆ



ಸಂಬಂಧಪಟ್ಟ ಇಂಜನಿಯರ್ ಹಾಗೂ ಗುತ್ತಿಗೆದಾರರಿಗೆ ಸ್ಪಷ್ಟವಾಗಿ ಸೂಚನೆ ನೀಡಲಾಗಿದೆ ಎಂದರು. ಈ ಹಿಂದೆ ನಡೆದಿರುವ ಜಲ ಜೀವನ್ ಮಿಷನ್ ಯೋಜನೆ ಕಾಮಗಾರಿ ಕಳಪೆಯಾಗಿದೆ ಎಂಬ ಆರೋಪಕ್ಕೆ ಉತ್ತರಿಸಿದ ಶಾಸಕರು, ಈ ಬಗ್ಗೆ ನನ್ನ ಗಮನಕ್ಕೂ ಬಂದಿದೆ. ಸ್ಥಳೀಯ ಪಂಚಾಯಿತಿ ಸದಸ್ಯರು ಹಾಗೂ ಅಲ್ಲಿನ ಗ್ರಾಮಸ್ಥರು ಕಳಪೆ ಕಾಮಗಾರಿಯಾಗದಂತೆ ನೋಡಿಕೊಳ್ಳುವುದು ಅವರ ಜವಾಬ್ದಾರಿ ಕೂಡ ಆಗಿದೆ. ಈ ಬಗ್ಗೆ ಸೂಕ್ತ ಕ್ರಮ ವಹಿಸಲಾಗುವುದು ಎಂದರು.

**» ತಾಲೂಕಿನ ವಿವಿಧೆಡೆ 2.26ಕೋಟಿ ರೂಪಾಯಿಗಳ ಅಭಿವೃದ್ಧಿ ಕಾಮಗಾರಿ**

ಹೆಚ್ಚುವರಿ ಶಾಲಾ ಕೊಠಡಿ ಉದ್ಘಾಟನೆ : ಇದೇ ವೇಳೆ ತಾಲೂಕಿನ ಲಕ್ಷ್ಮಿಸಾಗರ ಗ್ರಾಮದಲ್ಲಿ ಸರ್ಕಾರಿ ಶಾಲೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಚಾಲನೆ ನೀಡಿದರು.

ಪಂಚಾಯತ್ ಇಂಜನಿಯರಿಂಗ್ ಇಲಾಖಾ ಅನುದಾನ 16ಲಕ್ಷ ರೂ. ವೆಚ್ಚದಲ್ಲಿ ಲಕ್ಷ್ಮೀಸಾಗರ ಗ್ರಾಮದ ಸರ್ಕಾರಿ ಶಾಲೆಯ ಮೂರು ಹೆಚ್ಚುವರಿ ಕೊಠಡಿಗಳನ್ನು ಉದ್ಘಾಟಿಸಲಾಗಿದೆ ಎಂದರು.

ಈ ವೇಳೆ ಸರ್ವೋದಯ ಕರ್ನಾಟಕ ತಾಲೂಕು ಅಧ್ಯಕ್ಷ ಎಸ್.ದಯಾನಂದ, ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಸಿ.ಆರ್.ರಮೇಶ್, ಸಮಾಜ ಸೇವಕ ಕನಗೋನಹಳ್ಳಿ ಪರಮೇಶ್ ಗೌಡ, ರೈತಸಂಘದ ಮಹಿಳಾಧ್ಯಕ್ಷೆ ಕೋಕಿಲಾ ಜ್ಞಾನೇಶ್, ರೈತಸಂಘದ ಮುಖಂಡರಾದ ಅತ್ತಿಗಾನಹಳ್ಳಿ ಸಿದ್ದೇಗೌಡ, ಚಿಕ್ಕಾಡೆ ವಿಜಯೇಂದ್ರ, ಹಾರೋಹಳ್ಳಿ ಲಕ್ಷ್ಮೇಗೌಡ, ರಾಮಕೃಷ್ಣ, ಸಿಂಗ್ರೀಗೌಡನಕೊಪ್ಪಲು ಬಾಬು, ಗ್ರಾ.ಪಂ ಅಧ್ಯಕ್ಷೆ ಮಮತಾ, ಮಾಜಿ ಅಧ್ಯಕ್ಷರಾದ ನಲ್ಲಹಳ್ಳಿ ಮಹೇಶ್, ಮಾಣಿಕ್ಯನಹಳ್ಳಿ ಕುಮಾರ್, ಮಾಜಿ ಉಪಾಧ್ಯಕ್ಷ ಅತ್ತಿಗಾನಹಳ್ಳಿ ನಾಗರಾಜು, ಗ್ರಾ.ಪಂ ಸದಸ್ಯರು, ರೈತ ಸಂಘದ ಮುಖಂಡರು, ಕ್ಷೇತ್ರ ಶಿಕ್ಷಣಾಧಿಕಾರಿ ರವಿಕುಮಾರ್, ಕ್ಷೇತ್ರ ಸಮನ್ವಯಾಧಿಕಾರಿ ಕೆ.ಎನ್ .ಪ್ರಕಾಶ್, ಸಿಆರ್ ಪಿ ಲೋಕೇಶ್, ಶಿಕ್ಷಕರು, ಗುತ್ತಿಗೆದಾರರಾದ ದೇವರಾಜು, ಎಲ್.ಬಿ.ರವಿ, ಉಮೇಶ್, ಮೇಲುಕೋಟೆ ಯೋಗನರಸಿಂಹೇಗೌಡ ಇತರರಿದ್ದರು.

# ಸಾಮಾಜಿಕ ಕ್ರಾಂತಿಯ ಯತಿ ಪುಂಗವ

**ಬೆಂಗಳೂರು:** ನಗರದ ಮಲ್ಲೇಶ್ವರದ ಸಂಪಿಗೆ ರಸ್ತೆಯ ಶ್ರೀ ಯದುಗಿರಿ ಯತಿರಾಜ ಮಠದಲ್ಲಿ ಶ್ರೀಮಠದ ಯತಿರಾಜ ಜೀಯರ್ ಸ್ವಾಮಿಗಳ ಹತ್ತನೇ ಚಾತುರ್ಮಾಸ್ಯ ಹಾಗೂ 75ನೇ ವರ್ಧಂತಿಯ ಅಂಗವಾಗಿ ಡಾ ಬಾಬು ಕೃಷ್ಣಮೂರ್ತಿ ವಿರಚಿತ ಶ್ರೀ ರಾಮಾನುಜಾಚಾರ್ಯರ ಜೀವನಾಧಾರಿತ ಕಾದಂಬರಿಯ ಕುರಿತು ವಿಚಾರ ಸಂಕಿರಣವನ್ನು ಶ್ರೀಮಠದ ಆವರಣದಲ್ಲಿರುವ ರಾಮಾನುಜ ಸಂಸ್ಕೃತಿ ಭವನದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಮಾಜಿ ಅಡ್ವಕೇಟ್ ಜನರಲ್ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಉದ್ಘಾಟಿಸಿ ಮಾತನಾಡುತ್ತಾ ಸಹಸ್ರ ವರ್ಷಗಳ ಹಿಂದೆಯೇ ಸಾಮಾಜಿಕ ಕ್ರಾಂತಿಯನ್ನು ಉಂಟು ಮಾಡಿ ಸಮಾನತೆಯ ತತ್ವವನ್ನು ಪ್ರತಿಪಾದಿಸಿದವರು ಆಚಾರ್ಯ ರಾಮಾನುಜರು ಎಂದು ಅಭಿಪ್ರಾಯಪಟ್ಟರು.

ವಿಚಾರ ಸಂಕಿರಣದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೋ. ಮಲ್ಲೇಪುರಂ ಜಿ ವೆಂಕಟೇಶ್ ಮಾತನಾಡಿ ಆಚಾರ್ಯ ತ್ರಯರ ಕುರಿತು ಅನೇಕ ಶಾಸ್ತ್ರ ಗ್ರಂಥಗಳು ಬಂದಿರುತ್ತದೆ, ಸಾಹಿತ್ಯಕ ದೃಷ್ಟಿಯಿಂದ ದಾರ್ಶನಿಕರ ಒಬ್ಬರ ಕುರಿತಾದ ಕಾದಂಬರಿ ಬಂದಿರುವುದು ಇದೆ ಮೊದಲು, ಆಚಾರ್ಯರ ಭವ್ಯ ವ್ಯಕ್ತಿತ್ವವನ್ನು



ಕಟ್ಟುಕೊಡುವಲ್ಲಿ ಲೇಖಕ ಬಾಬು ಕೃಷ್ಣಮೂರ್ತಿ ರವರ ಬರವಣಿಗೆಯಲ್ಲಿ ಬಹಳ ಸೊಗಸಾಗಿ ನಿರೂಪಿಸಿದ್ದಾರೆ ಎಂದು ತಿಳಿಸಿದರು.

ಉಪನ್ಯಾಸಕ ಡಾ ಎನ್ಕೆ ರಾಮಶೇಷನ್, ಇತಿಹಾಸಕಾರ ಡಾ ಜಿ ಬಿ ಹರೀಶ, ಚಿಂತಕ ಡಾ ಬೆಳವಾಡಿ ಮಂಜುನಾಥ್ ಕಾದಂಬರಿಯ ವಿವಿಧ ಮಜಲಗಳನ್ನು ಕುರಿತು ಮಾತನಾಡಿದರು. ಖ್ಯಾತ ವಾಗ್ಮಿ ವಿದ್ಯಾ ವಾಚಸ್ಪತಿ ಡಾ ಅರಳುಮಲ್ಲಿಗೆ ಪಾರ್ಥಸಾರಥಿ ಸಮಾರೋಪ ನುಡಿಗಳನ್ನಾಡಿದರು.

ಡಾ ಗಣಪತಿ ಹೆಗಡೆ ಪ್ರಾಸ್ತಾವಿಕ ನುಡಿಗಳನ್ನು ಆಡಿದರು. ಡಾ ನಂಜುಂಡ ರಾವ್ ಕಾರ್ಯಕ್ರಮ ನಿರೂಪಿಸಿದರು. ಶ್ರೀಮಠದ ಪಿ ಆರ್ ಓ ರಾಮಪ್ರಸಾದ್ ಸ್ವಾಗತಿಸಿದರು.

ಸಂಜೆ ಟಿಪ್ಸ್

## ಎಚ್ ಪಿಯಿಂದ ಕೋಪೈಲಟ್ +ನೊಂದಿಗೆ ಶಕ್ತಿಶಾಲಿ ಎಐ ಪಿಸಿಗಳ ಬಿಡುಗಡೆ

ಎಚ್‌ಪಿ ಇಂದು ತನ್ನ ಅತ್ಯಂತ ಶಕ್ತಿಶಾಲಿ ಎಐ ಪಿಸಿಗಳನ್ನು ಬಿಡುಗಡೆ ಮಾಡಿದೆ. ದೊಡ್ಡ ಉದ್ದಿಮೆಗಳು, ಸ್ಟಾರ್ಟಪ್ ಗಳು ಮತ್ತು ರೀಟೇಲ್ ಗ್ರಾಹಕರು ಹಿಂದೆಂದಿಗಿಂತಲೂ ಹೆಚ್ಚು ಪಿಸಿ ಅನುಭವ ಹೊಂದುವ ಮೂಲಕ ಅವರನ್ನು ಸಬಲರನ್ನಾಗಿ ಮಾಡುವ ಉದ್ದೇಶವನ್ನು ಈ ಎಐ ಪಿಸಿಗಳು ಹೊಂದಿವೆ. ಹೊಸದಾಗಿ ಬಿಡುಗಡೆಗೊಂಡಿರುವ ಲ್ಯಾಪ್ ಟಾಪ್ ಗಳು ಎಚ್ ಪಿ ಎಲೈಟ್ ಬುಕ್ ಅಲ್ಟ್ರಾ ಮತ್ತು ಎಚ್ ಪಿ ಒಮ್ನಿ ಬುಕ್ ಎಕ್ಸ್ ಅನ್ನು ಒಳಗೊಂಡಿದ್ದು, ಎಚ್ ಪಿಯ ಮೊಟ್ಟ ಮೊದಲ ಕೋಪೈಲಟ್+ ಪಿಸಿಗಳಾಗಿವೆ. ಎರಡೂ ಬಗೆಯ ಲ್ಯಾಪ್ ಟಾಪ್ ಗಳನ್ನು ಸ್ನ್ಯಾಪ್ ಡ್ರಾಗನ್ ಎಕ್ಸ್ ಎಲೈಟ್ ಪ್ರೊಸೆಸರ್ ನಿಂದ ವಿನ್ಯಾಸಗೊಳಿಸಲಾಗಿದೆ. ತನ್ನ ಪ್ರತ್ಯೇಕ ನ್ಯೂರಲ್ ಪ್ರೊಸೆಸಿಂಗ್ ಯುನಿಟ್ (ಓಕಗ) ಹೊಂದಿದ್ದು, ಇದರಲ್ಲಿ ಸ್ಥಳೀಯವಾಗಿ ಭಾಷಾ ಮಾದರಿಗಳು ಮತ್ತು ಉತ್ಪಾದಕ ಎಐ ಅನ್ನು ಚಲಾಯಿಸಲು ಪ್ರತಿ ಸೆಕೆಂಡಿಗೆ 45 ಟ್ರಿಲಿಯನ್ ಕಾರ್ಯಾಚರಣೆಗಳನ್ನು ಕೈಗೊಳ್ಳಬಹುದಾದ ಸಾಮರ್ಥ್ಯವನ್ನು ಹೊಂದಿದೆ. ಎಚ್ ಪಿ ಇಂಡಿಯಾದ ಹಿರಿಯ ಉಪಾಧ್ಯಕ್ಷ ವ್ಯವಸ್ಥಾಪಕ ನಿರ್ದೇಶಕರಾದ ಇಪ್ಸಿತಾ ದಾಸಗುಪ್ತಾ ಅವರು ಮಾತನಾಡಿ, ''ನಾವು ಎಐ ಪಿಸಿಗಳ ಹೊಸ ಯುಗಾರಂಭದಲ್ಲಿದ್ದೇವೆ. ಇದು ವೈಯಕ್ತಿಕ ಕಂಪ್ಯೂಟರ್ ಏನನ್ನು ಮಾಡಬಹುದು ಎಂಬುದನ್ನು ಮರುವ್ಯಾಖ್ಯಾನ ಮಾಡುತ್ತದೆ. ಈ ನಾವೀನ್ಯತೆಯು ಹೊಸ ಸಾಧ್ಯತೆಗಳನ್ನು ಅನ್ಲಾಕ್ ಮಾಡಲು ಮತ್ತು ಕೆಲಸ ಭವಿಷ್ಯವನ್ನು ಪರಿವರ್ತಿಸುವ ನಿಟ್ಟಿನಲ್ಲಿ ಸಜ್ಜಾಗಿದೆ ಎಂದು ನಾವು ನಂಬುತ್ತೇವೆ. ನಮ್ಮ ಮುಂದಿನ ಪೀಳಿಗೆಯ ಎಐ ಪಿಸಿಗಳು ಕಾರ್ಯದಕ್ಷತೆಯನ್ನು ಹೆಚ್ಚಿಸಲು, ಭದ್ರತೆಯನ್ನು ಇನ್ನಷ್ಟು ಉತ್ತಮಗೊಳಿಸಲು ಮತ್ತು ಹೈಬ್ರಿಡ್ ಕಾರ್ಯಶೈಲಿಗಳಿಗಾಗಿ ವೈಯಕ್ತೀಕರಿಸಿದ ಅನುಭವಗಳನ್ನು ನೀಡುವ ನಿಟ್ಟಿನಲ್ಲಿ ವಿನ್ಯಾಸಗೊಳಿಸಲಾಗಿದೆ. ಈ ನವೀನ ಮಾದರಿಯ ಸಾಧನಗಳು ಭಾರತದ ಡಿಜಿಟಲ್ ರೂಪಾಂತರ ಮತ್ತು ಆರ್ಥಿಕ ಬೆಳವಣಿಗೆಗೆ ಹೇಗೆ ಚಾಲನೆ ನೀಡಲಬಲ್ಲವು ಎಂಬುದನ್ನು ನಾವು ಕಾತುರದಿಂದ ಎದುರು ನೋಡುತ್ತಿದ್ದೇವೆ'' ಎಂದು ತಿಳಿಸಿದರು. ನಾವು ವಾಸ ಮಾಡುವ ಮತ್ತು ಕಾರ್ಯ ನಿರ್ವಹಿಸುವ ವಿಧಾನವು ಸಾಂಪ್ರದಾಯಿಕ ಡೆಸ್ಕ್ ನ ಆಚೆಗೆ ವಿಕಸನಗೊಳ್ಳುತ್ತಲೇ ಇರುತ್ತದೆ. ಈ ಹಿನ್ನೆಲೆಯಲ್ಲಿ ಎಲೈಟ್ ಬುಕ್ ಅಲ್ಟ್ರಾವನ್ನು ಆಧುನಿಕ ವ್ಯಾಪಾರ-ಸಿದ್ಧವಾಗುವ ರೀತಿಯಲ್ಲಿರುವ ನಾಯಕರಿಗೆ ಹೊಂದುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ.

## ಪನ್ನೀರ್ ಕಾರ್ನ್ ಸ್ಯಾಂಡ್ವಿಚ್

ಪಾಕ ಶಾಲೆ



### ಮಾಡುವ ವಿಧಾನ

ಒಂದು ಬಟ್ಟಲಿಗೆ ಪನ್ನೀರ್, ಕಾರ್ನ್, ಈರುಳ್ಳಿ, ಉಪ್ಪು, ಮೆಣಸಿನಕಾಯಿ ಪುಡಿ ಮತ್ತು ಓರೆಗಾನೊ ಸೇರಿಸಿ. ಬ್ರೆಡ್ ಚೂರುಗಳಿಗೆ ಟೊಮೊಟೊ ಸಾಸ್ ಹಚ್ಚಿ. ಅದ್ರ ಮೇಲೆ ಕಾರ್ನ್ ಮಿಶ್ರಣವನ್ನು ಹಾಕಿ. ಇನ್ನೊಂದು ಬ್ರೆಡ್ ಗೆ ಟೊಮೊಟೊ ಸಾಸ್ ಹಚ್ಚಿ ಬ್ರೆಡ್ ಚೂರನ್ನು ಮುಚ್ಚಿ. ಪ್ಯಾನ್ ಅಥವಾ ಸ್ಯಾಂಡ್ವಿಚ್ ತಯಾರಕಕ್ಕೆ ಹಾಕಿ ಬೇಯಿಸಿ. ಸಾಸ್ ಜೊತೆ ಪನೀರ್ ಕಾರ್ನ್ಸ್ ಸ್ಯಾಂಡ್ವಿಚ್ ಸರ್ವ್ ಮಾಡಿ.

### ಬೇಕಿರುವ ಸಾಮಗ್ರಿ

ಬ್ರೆಡ್ ಚೂರುಗಳು 6, ಪನೀರ್ 100 ಗ್ರಾಂ, ಕಾರ್ನ್ 50 ಗ್ರಾಂ, ಈರುಳ್ಳಿ 1 ಚಮಚ, ರುಚಿಗೆ ತಕ್ಕಷ್ಟು ಉಪ್ಪು, ಕೆಂಪು ಮೆಣಸಿನಕಾಯಿ ಪುಡಿ ರುಚಿಗೆ ತಕ್ಕಷ್ಟು, ಟೊಮೆಟೊ ಸಾಸ್ 1 ಚಮಚ, ಓರೆಗಾನೊ ರುಚಿಗೆ ತಕ್ಕಷ್ಟು, ಕೊತ್ತಂಬರಿ ಸೊಪ್ಪು 1 ಚಮಚ

## ನಟಿ ನಯನತಾರಾ ಕೊಟ್ರು ಬ್ಯೂಟಿ ಟಿಪ್ಸ್



ಇತ್ತೀಚಿಗೆ ಮಂದಿ ಆಯುರ್ವೇದ ಹಾಗೂ ಗಿಡ ಮೂಲಿಕೆ ಔಷಧಿಗಳತ್ತ ಜನ ವಾಲುತ್ತಿದ್ದಾರೆ. ಯಾವುದೇ ಸಮಸ್ಯೆಗಳಿದ್ದರೂ ಈಗ ಗಿಡಮೂಲಿಕೆಯಿಂದ ಪರಿಹಾರ ಸಾಧ್ಯ ಎಂಬುದನ್ನು ಅರ್ಥೈಸಿಕೊಂಡಿದ್ದಾರೆ. ಹೀಗಾಗಿ ಮನೆಯಲ್ಲೇ ಗಿಡಮೂಲಿಕೆ ಮಾಡಿಕೊಳ್ಳುವುದು, ಹರ್ಬಲ್ ಔಷಧಿಗಳ ಖರೀದಿ ಮಾಡುವುದು ಹೆಚ್ಚುತ್ತಿದೆ.

ಇನ್ನು ಇನ್‌ಸ್ಟಗ್ರಾಮ್‌ನಲ್ಲಿ ನಟರು-ನಟಿಯರು ಸಹ ಈ ರೀತಿಯ ಗಿಡಮೂಲಿಕೆಗಳು, ಹರ್ಬಲ್ ಔಷಧಿ, ಪಾನೀಯಗಳ ಹೆಚ್ಚು ಬಳಸುವುದು ಹಾಗೂ ಬಳಸುವಂತೆ ಪ್ರೇರೇಪಿಸುವುದು ಸಹ ನಾವು ನೋಡಬಹುದು. ಈಗ ನಟಿ ನಯನತಾರಾ ಕೂಡ ಇಂತಹದ್ದೆ ಹರ್ಬಲ್ ಚಹಾವೊಂದರ ಕುರಿತು ಹಂಚಿಕೊಂಡಿದ್ದಾರೆ.

ನಯನತಾರಾ ದಾಸವಾಳದ ಚಹಾ ಕುರಿತಂತೆ ಪೋಸ್ಟ್ವೊಂದನ್ನು ಹಂಚಿಕೊಂಡಿದ್ದಾರೆ. ಇದು ಮಧುಮೇಹ, ಕೊಲೆಸ್ಟ್ರಾಲ್, ಅಧಿಕ ರಕ್ತದೊತ್ತಡ ಮತ್ತು ಹೃದಯ ಸಂಬಂಧಿ ಕಾಯಿಲೆಗಳಿಗೆ ಇದು ಸಹಕಾರಿಯಂತೆ. ಜೊತೆಗೆ ದೇಹಕ್ಕೆ ಬಹಳ ತಂಪಾಗುವ ಹಿನ್ನಲೆ ಇದು ಮೊಡವೆಗಳ ನಿವಾರಣೆ, ಚರ್ಮದ ಆರೋಗ್ಯ ಕಾಪಾಡಲು ಸಹ ನೆರವಾಗುತ್ತದೆ.

ದಾಸವಾಳದ ಚಹಾವು ಮಳೆಗಾಲದಲ್ಲಿ ಉತ್ತಮವಾಗಿದೆ ಏಕೆಂದರೆ ಇದು ವಿಟಮಿನ್ಗಳಿಂದ ಸಮೃದ್ಧವಾಗಿದೆ ಮತ್ತು ನಮ್ಮ ರೋಗನಿರೋಧಕ ಶಕ್ತಿಯನ್ನು ಸಮತೋಲನದಲ್ಲಿಡುತ್ತದೆ. ಇದು ಆಂಟಿಬ್ಯಾಕ್ಟೀರಿಯಲ್ ಪರಿಣಾಮಗಳನ್ನು ಹೊಂದಿದ್ದು ಅದು ಕಾಲೋಚಿತ ಸೋಂಕು/ ಅನಾರೋಗ್ಯದಿಂದ ರಕ್ಷಿಸುತ್ತದೆ ಎಂದು ನಟಿ ತಮ್ಮ ಪೋಸ್ಟ್ನಲ್ಲಿ ಹಂಚಿಕೊಂಡಿದ್ದರು.

ದಾಸವಾಳವು ಅದರ ಆಳವಾದ ಕೆಂಪು ಹೂವುಗಳು ಮತ್ತು ಕ್ರ್ಯಾನ್ಬೆರಿಗಳಂತೆಯೇ ಸಿಹಿ-ಟಾರ್ಟ್ ರುಚಿಯಿಂದ ನಿರೂಪಿಸಲ್ಪಟ್ಟಿದೆ, ಜೊತೆಗೆ ಗಮನಾರ್ಹವಾದ ಆರೋಗ್ಯ ಪ್ರಯೋಜನಗಳನ್ನು ನೀಡುತ್ತದೆ. ದಾಸವಾಳದ ಚಹಾವು ಕ್ಯಾಲ್ಸಿಯಂ, ಮೆಗ್ನೀಸಿಯಮ್, ರಂಜಕ ಮತ್ತು ಪೊಟ್ಯಾಸಿಯಮ್ ಸೇರಿದಂತೆ ಸಣ್ಣ ಪ್ರಮಾಣದ ಪ್ರಮುಖ ಖನಿಜಗಳನ್ನು ಸಹ ಹೊಂದಿರುತ್ತದೆ ಎಂದು ತಿಳಿದುಬಂದಿದೆ.

ದಾಸವಾಳ ಚಹಾವು ರಕ್ತದೊತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂದು ಸಂಶೋಧನೆ ಸೂಚಿಸುತ್ತದೆ. ಆದರೆ ರಕ್ತದೊತ್ತಡಕ್ಕೆ ಔಷಧಿ ಸೇವಿಸುವವಮಂದಿ ಈ ದಾಸವಾಳದ ಚಹಾ ಸೇವಿಸಬಾರದಂತೆ. ದಾಸವಾಳದ ಚಹಾವು ಮಧುಮೇಹ ಮತ್ತು ಮೆಟಾಬಾಲಿಕ್ ಸಿಂಡ್ರೋಮ್ ಹೊಂದಿರುವ ಜನರಲ್ಲಿ ಕೆಟ್ಟ ಕೊಲೆಸ್ಟ್ರಾಲ್ ಮತ್ತು ಟ್ರೈಗ್ಲಿಸರೈಡ್ ಮಟ್ಟವನ್ನು ಕಡಿಮೆ ಮಾಡುತ್ತದೆ.

## ವಿಟಮಿನ್ ಡಿ ಕೊರತೆಯೇ




ಹೆಲ್ತ್ ಟಿಪ್ಸ್

ಎಲುಬಿನ ಆರೋಗ್ಯಕ್ಕೆ. ಸಂಧಿವಾತ, ಎಲುಬಿನಲ್ಲಿ ಸವೆತ, ಎಲುಬಿನಲ್ಲಿ ಸಾಂದ್ರತೆ ಕಡಿಮೆಯಾಗುವುದು ಇತ್ಯಾದಿ ಸಮಸ್ಯೆಗಳು ಕಾಡದೆ ಇರಬೇಕೆಂದರೆ ನಮ್ಮ ದೇಹಕ್ಕೆ ಸರಿಯಾಗಿ ವಿಟಮಿನ್ ಡಿ ಪೂರೈಕೆಯಾಗುತ್ತಲೂ ಇರಬೇಕು.ಕೇವಲ ಎಲುಬಿನ ಆರೋಗ್ಯವೊಂದೇ ವಿಟಮಿನ್ ಡಿಯ ಮೇಲೆ ನಿಂತಿಲ್ಲ.

ದೇಹ ಎಲ್ಲ ರೀತಿಯಲ್ಲೂ ಸೌಖ್ಯವಾಗಬೇಕಾಗಿದ್ದರೆ ವಿಟಮಿನ್ ಡಿ ಅವಶ್ಯಕವಾಗಿ ಬೇಕು. ನಮ್ಮ ನಿತ್ಯದ ಸಂತೋಷದ ಹಿಂದೆಯೂ ವಿಟಮಿನ್ ಡಿಯ ಕೈಚಳಕವಿದೆ. ವಿಟಮಿನ್ ಡಿ ಕೊರತೆಯಿಂದ ಖಿನ್ನತೆಯೂ ಬರುವ ಸಾಧ್ಯತೆಗಳಿವೆ ಎಂದು ಇತ್ತೀಚೆಗಿನ ಸಂಶೋಧನೆಗಳು ಬಹಿರಂಗಪಡಿಸಿವೆ.

ಟಮಿನ್ ಡಿ ಕೊರತೆಯಾದರೆ ಈ ಕೆಲವು ಲಕ್ಷಣಗಳು ಸಾಮಾನ್ಯ. ಆಗಾಗ ಇನ್ಫೆಕ್ಷನ್ಗಳಾಗುವುದು, ರೋಗ ನಿರೋಧಕತೆ ಕಡಿಮೆಯಾಗುವುದು, ಆಗಾಗ ನೆಗಡಿ, ಶೀತ ಬರುವುದು ಇತ್ಯಾದಿಗಳೂ ವಿಟಮಿನ್ ಡಿಯ ಕೊರತೆಯ ಲಕ್ಷಣಗಳು. ಮೂಳೆಯಲ್ಲಿ ಶಕ್ತಿ ಇಲ್ಲದಂತಾಗುವುದು ಕೂಡಾ ಇದರ ಪ್ರಮುಖ ಲಕ್ಷಣ. ಖಿನ್ನತೆಯೂ ಕೂಡಾ ವಿಟಮಿನ್ ಡಿಯ ಕೊರತೆಯಿಂದ ಬರುವ ಸಂಭವವಿದೆ. ವಿಟಮಿನ್ ಡಿ ನಮ್ಮ ಆಹಾರದಲ್ಲಿರುವ ಕ್ಯಾಲ್ಶಿಯಂ ಅನ್ನು ದೇಹಕ್ಕೆ ಸರಿಯಾಗಿ ಒದಗಿಸುವ ಕೆಲಸವನ್ನು ಮಾಡುವುದರಿಂದ ಕ್ಯಾಲ್ಶಿಯಂ ದೇಹಕ್ಕೆ ಸೇರುವ ಪ್ರಕ್ರಿಯೆ ನಿಂತುಹೋಗುತ್ತದೆ. ದೇಹಕ್ಕೆ ಸರಿಯಾದ ಪ್ರಮಾಣದಲ್ಲಿ ಕ್ಯಾಲ್ಶಿಯಂ ಸಿಗದೇ, ಮೂಳೆಗಳು ದುರ್ಬಲವಾಗುತ್ತದೆ. ವಿಟಮಿನ್ ಡಿ ಪಡೆಯಲು ಸೂರ್ಯನ ಬೆಳಕು ಅತ್ಯಂತ ಮುಖ್ಯವಾದ ಮೂಲ. ಇದಲ್ಲದೆ, ಅನೇಕ ಆಹಾರಗಳ ಮೂಲಕವೂ ವಿಟಮಿನ್ ಡಿ ಲಭ್ಯವಾದರೂ ಇದು ಅತ್ಯಂತ ಕಡಿಮೆ ಪ್ರಮಾಣದ್ದು. ಸೂರ್ಯನ ಬಿಸಿಲಿನಲ್ಲಿ 15ರಿಂದ 0 ನಿಮಿಷಗಳು ಇರುವುದರಿಂದಲೂ ದಿನಕ್ಕೆ ಅಗತ್ಯವಾದ ವಿಟಮಿನ್ ಡಿ ಲಭ್ಯವಾಗುತ್ತದೆ. ಹೀಗಾಗಿ. ಸೂರ್ಯನ ಬಿಸಿಲಿಗೆ ಮೈಯೊಡ್ಡುವುದು ಅತ್ಯಂತ ಮುಖ್ಯವಾಗುತ್ತದೆ. ಇವೆಲ್ಲಕ್ಕಿಂತಲೂ, ಸೂರ್ಯನ ಬಿಸಿಲಿಗೆ ಬೆಳಗ್ಗೆಯೇ ದೇಹವನ್ನು ಒಡ್ಡುವುದರಿಂದ ಮೈಮನಸ್ಸು ಚುರುಕಾಗಿ ಸಂತಸ ಇಮ್ಮಡಿಸುತ್ತದೆ.

ಹಾಗಾಗಿ ವಿಟಮಿನ್ ಡಿ ಕೇವಲ ಮೂಳೆ ಸಂಬಂಧೀ ಮಾತ್ರವಲ್ಲ, ನಮ್ಮ ಇಡಿಯ ಆರೋಗ್ಯದ ಕೀಲಿಕೈ. ಮಿದುಳನು ಚುರುಕಾಗಿಡುವ ಪೋಷಕಾಂಶವೂ ಹೌದು. ವಿಟಮಿನ್ ಡಿ ಕೊರತೆಯಿದ್ದರೆ, ಈ ಪೋಷಕಾಂಶವನ್ನು ವೈದ್ಯರ ಮಾರ್ಗದರ್ಶನದ ಮೇರೆಗೆ ತೆಗೆದುಕೊಳ್ಳುವುದು ಒಳ್ಳೆಯದು. ಖಿನ್ನತೆಯ ಸಮಸ್ಯೆ ಇರುವ ಮಂದಿಯೂ ವಿಟಮಿನ್ ಡಿ ಸಪ್ಲಿಮೆಂಟ್ ಸೇವನೆಯಿಂದ ಈ ಸಮಸ್ಯೆಯಲ್ಲಿ ಸಾಕಷ್ಟು ಸುಧಾರಣೆ ಕಂಡಿದ್ದಾರೆ.

## ದೀಪಿಕಾ ಜೊತೆ ಇಂಟಿಮೇಟ್ ದೃಶ್ಯ ನಿಭಾಯಿಸಿದ್ದು ಅಷ್ಟು ಸುಲಭವಾಗಿರಲಿಲ್ಲ: ಸಿದ್ಧಾಂತ್ ಚತುರ್ವೇದಿ



ಬಾಲಿವುಡ್ ನಟ ಸಿದ್ಧಾಂತ್ ಚತುರ್ವೇದಿ ಸದ್ಯ ಕರಣ್ ಜೋಹರ್ ನಿರ್ಮಾಣದ ಸಿನಿಮಾ ಸೇರಿದಂತೆ ಹಲವು ಚಿತ್ರಗಳಲ್ಲಿ ಬ್ಯುಸಿಯಾಗಿದ್ದಾರೆ. ಇದೀಗ ಅವರು ನೀಡಿದ ಸಂದರ್ಶನವೊಂದರಲ್ಲಿ ದೀಪಿಕಾ ಪಡುಕೋಣೆ ಜೊತೆ ಇಂಟಿಮೇಟ್ ದೃಶ್ಯ ನಿಭಾಯಿಸಿದ್ದು ಅಷ್ಟು ಸುಲಭವಾಗಿರಲಿಲ್ಲ ಎಂದು ಮಾತನಾಡಿದ್ದಾರೆ.

ಭಾರತದ ಅನೇಕರು ಸಿಕ್ಕ ಒಳ್ಳೆಯ ಅವಕಾಶವನ್ನು ಕಳೆದುಕೊಳ್ಳಲು ಬಯಸುವುದಿಲ್ಲ. ಮಾತ್ರವಲ್ಲ ಇಂತಹ ದೃಶ್ಯಗಳನ್ನು ನಿಭಾಯಿಸುವಾಗ ತಂದೆಯ ಸಹಕಾರ ಕೂಡ ನನಗಿತ್ತು. 'ಗೆಹ್ರೈಯಾನ್' ಚಿತ್ರದಲ್ಲಿ ದೀಪಿಕಾ ಜೊತೆ ಹಸಿ ಬಿಸಿ ದೃಶದಲ್ಲಿ ನಟಿಸುವಾಗ ತುಂಬಾ ನರ್ವಸ್ ಆಗಿದ್ದೆ. ಕರಣ್ ಜೋಹರ್ ಅವರ ಬಳಿ ಕೂಡ ನನ್ನ ಕಳವಳ ವ್ಯಕ್ತಪಡಿಸಿದ್ದೆ. ವೃತ್ತಿಪರವಾಗಿ ಪರಿಸ್ಥಿತಿಯನ್ನು ನಿಭಾಯಿಸಲು ನನಗೆ ಪ್ರೋತ್ಸಾಹಿಸಿದರು ಎಂದು ನಟ ಸಿದ್ಧಾಂತ್ ಮಾತನಾಡಿದ್ದಾರೆ. ಧರ್ಮ ಪ್ರೊಡಕ್ಷನ್ಸ್ ಮತ್ತು ದೀಪಿಕಾ ಪಡುಕೋಣೆ ಹಾಗೂ ನಿರ್ದೇಶಕ ಶಕುನ್ ಬಾತ್ರಾ ಜೊತೆ ಕೆಲಸ ಮಾಡುವ ಒಳ್ಳೆಯ ಅವಕಾಶ ನನ್ನದಾಗಿತ್ತು ಎಂದು ಹೇಳಿದ್ದಾರೆ.

ಇನ್ನೂ ದೀಪಿಕಾ ಪಡುಕೋಣೆ ಸ್ವೀಟ್ ವ್ಯಕ್ತಿಯಾಗಿದ್ದರು. ಈ ಸಿನಿಮಾ ಮಾಡುವಾಗ ಬೆಂಬಲಿಸಿದ್ದರು. ಆ ಬಾಂಧವ್ಯದಿಂದಲೇ ನಾವು ಉತ್ತಮ ಸ್ನೇಹಿತರಾದೆವು ಎಂದು ಸಿದ್ಧಾಂತ್ ಚರ್ತುರ್ವೇದಿ ಮಾತನಾಡಿದ್ದಾರೆ.

ಅಂದಹಾಗೆ, 'ಗೆಹ್ರೈಯಾನ್' ಸಿನಿಮಾ 2022ರಲ್ಲಿ ರಿಲೀಸ್ ಆಗಿ ಪ್ರೇಕ್ಷಕರಿಂದ ಮೆಚ್ಚುಗೆ ಗಳಿಸಿತ್ತು. ಈ ಚಿತ್ರವನ್ನು ಕರಣ ಜೋಹರ್ ನಿರ್ಮಾಣ ಮಾಡಿದ್ದರು.

## ಎಂಎಂಟಿಸಿ-ಪಿಎಎಂಪಿ-ಗೆ ಚಿನ್ನ ಹಾಗೂ ಬೆಳ್ಳಿ ನಾಣ್ಯ / ಗಟ್ಟಿಯ ಏಷ್ಯಾ ಖಂಡದ ಶುದ್ಧ ಬ್ರ್ಯಾಂಡ್ ಮಾನ್ಯತೆ ನೀಡಿದ ಏಷ್ಯಾ ಬುಕ್ ಆಫ್ ರೆಕಾರ್ಡ್ಸ್




ಚಿನ್ನ ಮತ್ತು ಬೆಳ್ಳಿಯಂತಹ ಅಮೂಲ್ಯ ಲೋಹಗಳನ್ನು ಬಂಡವಾಳ ಹೂಡಿಕೆಗೆ ಸೇರ್ಪಡೆ ಮಾಡುವ ಮೂಲಕ ಬಂಡವಾಳ ಹೂಡಿಕೆಗಳನ್ನು ವೈವಿಧ್ಯಮಯಗೊಳಿಸಲು ಜಾಣ ಹೂಡಿಕೆದಾರರು ಸಲಹೆ ನೀಡುತ್ತಾರೆ. ಈ ಅಮೂಲ್ಯ ಲೋಹಗಳು ನಿರಂತರವಾಗಿ ಗರಿಷ್ಠ ಮೌಲ್ಯ ಒದಗಿಸುವುದರ ಜೊತೆಗೆ ದೀರ್ಘಾವಧಿಯ ಹೂಡಿಕೆಯ ಬೆಳವಣಿಗೆಗೆ ಹೆಚ್ಚು ಸೂಕ್ತವಾಗಿವೆ. ಚಿನ್ನ ಮತ್ತು ಬೆಳ್ಳಿ, ಹಣಕಾಸು ಸಂಕಷ್ಟದ ಸಮಯದಲ್ಲಿ ಆಪದ್ಬಾಂಧವನಂತೆ ಕಾರ್ಯನಿರ್ವಹಿಸುತ್ತವೆ. ಹೀಗಾಗಿ, ಅತಿ ಹೆಚ್ಚು ಕ್ಯಾರೆಟ್, ಪರಿಶುದ್ಧ ಚಿನ್ನ ಮತ್ತು ಬೆಳ್ಳಿಗಳಲ್ಲಿ ಹಣ ಹೂಡಿಕೆ ಮಾಡುವುದು ಅಥವಾ ಚಿನ್ನ ಇಲ್ಲವೆ ಬೆಳ್ಳಿ ಖರೀದಿಸುವುದು ಹೆಚ್ಚು ಮಹತ್ವದ್ದಾಗಿರುತ್ತದೆ.

ಲಂಡನ್ ಚಿನಿವಾರ ಪೇಟೆಯ (ಎಲ್ಬಿಎಂಎ) ಮಾನ್ಯತೆ ಪಡೆದಿರುವ ಪರಿಶುದ್ಧತೆಯ ಮಾನದಂಡದ ವಿಶ್ವಾಸಾರ್ಹತೆಗೆ ಪಾತ್ರವಾಗಿರುವ ಭಾರತದ ಏಕೈಕ ಚಿನ್ನದ ಸಂಸ್ಕರಣಾಗಾರವಾಗಿರುವ ಎಂಎಂಟಿಸಿ-ಪಿಎಎಂಪಿ, 999.9+ (99.99%+) ಪರಿಶುದ್ಧತೆಯ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ಮತ್ತು ಚಿನ್ನ / ಬೆಳ್ಳಿ ಗಟ್ಟಿಗಳನ್ನು ಒದಗಿಸುವ ಏಷ್ಯಾದ ಏಕೈಕ ಬ್ರ್ಯಾಂಡ್ ಎಂದು ಗುರುತಿಸಲ್ಪಟ್ಟಿದೆ. ಪರಿಶುದ್ಧತೆಯ ಮಟ್ಟ ಮತ್ತು ಸಕಾರಾತ್ಮಕ ತೂಕ ಸಹಿಷ್ಣುತೆ - ಅಂದರೆ ಗ್ರಾಹಕರು ಮತ್ತು ಹೂಡಿಕೆದಾರರು ಪ್ಯಾಕೇಜಿಂಗ್ನಲ್ಲಿ ಹೇಳಲಾದ ತೂಕಕ್ಕಿಂತ ಹೆಚ್ಚು ತೂಕದ ಉತ್ಪನ್ನವನ್ನು ಪಡೆಯುತ್ತಾರೆ ಎಂದರ್ಥ. ಏಷ್ಯಾದ ಅನೇಕ ಚಿನ್ನಾಭರಣ ವಹಿವಾಟುದಾರರು 999 ಉತ್ಕೃಷ್ಟತೆ ಒಳಗೊಂಡಿರುವ 24 ಕ್ಯಾರೆಟ್ ಚಿನ್ನ ಕೊಡುವುದಾಗಿ ಹೇಳುತ್ತಾರೆ. 999-ಉತ್ಕೃಷ್ಟತೆಯ ಚಿನ್ನ ಎಂದರೆ ಚಿನ್ನದ 1,000 ಭಾಗಗಳ ಪೈಕಿ 999 ಪ್ರಮಾಣವು ಉತ್ಕೃಷ್ಟ / ಪರಿಶುದ್ಧ ಚಿನ್ನವಾಗಿರಲಿದೆ. ಉಳಿದ ಲೋಹವು ಬಹುಮಟ್ಟಿಗೆ ತಾಮ್ರ ಒಳಗೊಂಡಿರಲಿದೆ. ಎಂಎಂಟಿಸಿ-ಪಿಎಎಂಪಿ ನಿರಂತರವಾಗಿ ಗರಿಷ್ಠ ಶುದ್ಧತೆಯ 999.9+ (99.99%+) ಟಂಕಿಸಲಾದ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ಮತ್ತು ಗಟ್ಟಿಗಳನ್ನು ಒದಗಿಸುತ್ತಿದೆ. ಇದರರ್ಥ ಏನೆಂದರೆ- ಗ್ರಾಹಕರು 1,000 ಗ್ರಾಂಗಳಷ್ಟು ಚಿನ್ನ ಅಥವಾ ಬೆಳ್ಳಿಯಲ್ಲಿ 999.9 ಗ್ರಾಂ ಚಿನ್ನ ಅಥವಾ ಬೆಳ್ಳಿಯನ್ನು ಪಡೆಯುತ್ತಾರೆ. ಎಂಎಂಟಿಸಿ- ಪಿಎಎಂಪಿ-ಯು ಶುದ್ಧ ಬೆಳ್ಳಿಯನ್ನು ಸಮತೋಲನದ ಲೋಹವಾಗಿ ಬಳಸುವ ಏಕೈಕ ಚಿನ್ನದ ಸಂಸ್ಕರಣಾಗಾರವಾಗಿದೆ, ಹೀಗಾಗಿ ಗ್ರಾಹಕರಿಗೆ ಹೆಚ್ಚು ಬೆಲೆಬಾಳುವ ಟಂಕಿಸಿದ ಚಿನ್ನದ ಉತ್ಪನ್ನವನ್ನು ಒದಗಿಸುತ್ತಿದೆ.

ಈ ಪ್ರಶಸ್ತಿಯ ಗೌರವ ಮತ್ತು ಮನ್ನಣೆಯ ಕುರಿತು ಮಾತನಾಡಿರುವ ಎಂಎಂಟಿಸಿ-ಪಿಎಎಂಪಿ-ದ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ವಿಕಾಸ್ ಸಿಂಗ್ ಅವರು, ''ಏಷ್ಯಾ ಬುಕ್ ಆಫ್ ರೆಕಾರ್ಡ್ಸ್ನಿಂದ ಈ ಗೌರವ ಸ್ವೀಕರಿಸುತ್ತಿರುವುದಕ್ಕೆ ನಾವು ನಿಜವಾಗಿಯೂ ಪುಳಕಿತರಾಗಿದ್ದೇವೆ. ಇಂಡಿಯಾ ಬುಕ್ ಆಫ್ ರಿಕಾರ್ಡ್ಸ್ನಿಂದ ಪಡೆದ ಮನ್ನಣೆಯ ಮುಂದುವರೆದ ಭಾಗ ಇದಾಗಿದೆ. ಈ ಏಷ್ಯಾ ಭೂಖಂಡದ ಸಾಧನೆಯು 999.9+ (99.99%+) ರಷ್ಟು ಪರಿಶುದ್ಧ ಚಿನ್ನ ಮತ್ತು ಬೆಳ್ಳಿಯ ಟಂಕಿಸಿದ ಉತ್ಪನ್ನಗಳೊಂದಿಗೆ ನಮ್ಮ ಅಮೂಲ್ಯ ಗ್ರಾಹಕರಿಗೆ ಪರಿಶುದ್ಧತೆ ಮತ್ತು ಕರಕುಶಲತೆಯ ಪರಾಕಾಷ್ಠೆಗೆ ನಿದರ್ಶನವಾಗಿರುವ ಉತ್ಪನ್ನಗಳನ್ನು ಒದಗಿಸುವ ನಮ್ಮ ಬದ್ಧತೆಯನ್ನು ಸೂಚಿಸುತ್ತದೆ. ಎಂಎಂಟಿಸಿ-ಪಿಎಎಂಪಿ- ನಲ್ಲಿ, ನಮ್ಮ ಉತ್ಪನ್ನಗಳು ನಮ್ಮ ಗ್ರಾಹಕರಿಗೆ ಅಮೂಲ್ಯವಾದ ಹೂಡಿಕೆಗಳಾಗಿ ಕಾರ್ಯನಿರ್ವಹಿಸುವುದರ ಜೊತೆಗೆ ಜಾಗತಿಕ ಬೆಲೆಬಾಳುವ ಲೋಹಗಳ ಮಾರುಕಟ್ಟೆಯಲ್ಲಿ ಭಾರತದ ಹೆಚ್ಚುತ್ತಿರುವ ಮಹತ್ವವನ್ನು ಎತ್ತಿ ತೋರಿಸುತ್ತವೆ? ಎಂದು ಹೇಳಿದ್ದಾರೆ.

ಸಾಂಪ್ರದಾಯಿಕ 999.9 ಪರಿಶುದ್ಧತೆ ಮೀರಿಸುವ ಗುರಿಯೊಂದಿಗೆ, ಎಂಎಂಟಿಸಿ-ಪಿಎಎಂಪಿ-ಯು ಉದ್ಯಮದ ಪಾಲಿಗೆ ಹೊಸ ಚಿನ್ನದ ಗುಣಮಟ್ಟ ಸ್ಥಾಪಿಸಲು ನಿರಂತರವಾಗಿ ಪ್ರಯತ್ನಿಸುತ್ತಿದೆ. ಈ ದಾಖಲೆಯ ಪ್ರಯತ್ನವು ಕೇವಲ ದಾಖಲೆಗಳನ್ನು ಮುರಿಯುವುದಕ್ಕೆ ಸೀಮಿತವಾಗಿಲ್ಲ. ಗ್ರಾಹಕರು ತಾವು ಹೂಡಿಕೆ ಮಾಡುವ ಚಿನ್ನದಿಂದ ಏನನ್ನು ನಿರೀಕ್ಷಿಸಬಹುದು ಎಂಬುದನ್ನು ಮರುವ್ಯಾಖ್ಯಾನಿಸುವುದಾಗಿದೆ.

## ಮಾನ್ಸೂನ್ ನಲ್ಲಿ ತ್ವಚೆ ಆರೈಕೆ

ಬ್ಯೂಟಿ ಟಿಪ್ಸ್



ಮಳೆಗಾಲದಲ್ಲಿ ನಮ್ಮ ವೇಷ ಭೂಷಣ, ಆಹಾರಕ್ರಮ ಎಲ್ಲವೂ ಬದಲಾಗುತ್ತದೆ. ಬೆಚ್ಚನೆಯ ಉಡುಪು ಧರಿಸಲಾರಂಭಿಸುತ್ತೇವೆ. ಬೇಸಿಗೆಯಲ್ಲಿ ಕೋಲ್ಡ್ ಜ್ಯೂಸ್ ಕುಡಿಯುತ್ತಿದ್ದ ನಾವೆಲ್ಲಾ ಈಗ ಬಿಸಿ ಕಾಫಿ, ಮಸಾಲೆ ಟೀ ಕುಡಿಯಲು ಇಷ್ಟ ಪಡುತ್ತೇವೆ.

ಬೇಸಿಗೆ, ಮಳೆ, ಚಳಿ ಈ ಮೂರು ಕಾಲಕ್ಕೆ ಒಂದೇ ರೀತಿಯ ತ್ವಚೆ ಆರೈಕೆಯ ವಿಧಾನ ಪಾಲಿಸಲು ಸಾಧ್ಯವಿಲ್ಲ.

ಕಾಲ ಬದಲಾದಂತೆ ತ್ವಚೆ ಆರೈಕೆಯ ವಿಧಾನವೂ ಬದಲಾಗಬೇಕು. ಈಗ ಮಾನ್ಸೂನ್ ಸೀಸನ್. ಈ ಸಮಯದಲ್ಲಿ ತ್ವಚೆ ಸೌಂದರ್ಯಕ್ಕಾಗಿ ಏನು ಮಾಡಬೇಕು, ಏನು ಮಾಡಬಾರದು ಅಂತ ತಿಳಿದುಕೊಳ್ಳಿ. ದಿನದಲ್ಲಿ ಮೂರು ಬಾರಿ ಫೇಸ್ವಾಶ್ ಹಾಕಿ ಮುಖ ತೊಳೆಯಿರಿ. ಆಲ್ಕೋಹಾಲ್ ಅಂಶವಿಲ್ಲದ ಟೋನರ್ ಬಳಸಿ. ಇದರಿಂದ ತ್ವಚೆಯಲ್ಲಿ ಪಿ ಎಚ್ ಬ್ಯಾಲೆನ್ಸ್ ಮಾಡಬಹುದು. ಸ್ನಾನದ ಬಳಿಕ ಮಾಯಿಶ್ಚರೈಸರ್ ಹಚ್ಚಿ. ಸೆನ್ಸಿಟಿವ್ ಸ್ಕಿನ್ ಇರುವವರು ಆರ್ಟಿಫಿಶಿಯಲ್ ಜ್ಯೂವೆಲರಿ ಬಳಸದಿರುವುದು ಸೂಕ್ತ.ಚಳಿಯೆಂದು ತುಂಬಾ ಬಿಸಿ ನೀರನ್ನು ಸ್ನಾನಕ್ಕೆ ಬಳಸಬೇಡಿ. ತ್ವಚೆಗೆ ಉಗುರು ಬೆಚ್ಚಗಿನ ನೀರು ಒಳ್ಳೆಯದು. ಎಲ್ಲಾ ಸಮಯದಲ್ಲಿ ಶೂ ಬಳಸಬೇಡಿ. ಕಾಲಿನ ತ್ವಚೆಗೆ ಸ್ವಲ್ಪ ಗಾಳಿಯಾಡಲಿ. ವಾಟರ್ ಪ್ರೂಫ್ ಶೂ ಬಳಸಿ, ಇಲ್ಲದಿದ್ದರೆ ನೀರು ನಿಂತು ಕಾಲಿನ ತ್ವಚೆಯಲ್ಲಿ ತುರಿಕೆ ಕಂಡು ಬರುತ್ತದೆ. ಉತ್ತಮ ಕೊಬ್ಬಿನಂಶವಿರುವ ಆಹಾರ ತ್ವಚೆಯ ಅಂದವನ್ನು ಹೆಚ್ಚಿಸುತ್ತದೆ.



ಜಯಶ್ರೀ.ಬಿ.ಆರ್
ಖ್ಯಾತ ಜ್ಯೋತಿಷಿ
ದೂರವಾಣಿ-9964739507
www.jyotishyavaastu.com

## ರಾಶಿ ಭವಿಷ್ಯ

**ಮೇಷ:** ಗುರು ಹಿರಿಯರಲ್ಲಿ ಭಕ್ತಿ, ಭೂ ಲಾಭ, ದಾನ ಧರ್ಮ, ಮನಶಾಂತಿ.

**ವೃಷಭ:** ಅನ್ಯ ವಿಷಯಗಳ ಚರ್ಚೆ ಬೇಡ, ಕುಟುಂಬದಲ್ಲಿ ನೆಮ್ಮದಿ, ಕಾರ್ಯಕ್ಷೇತ್ರದಲ್ಲಿ ಪ್ರಗತಿ, ಉತ್ತಮ ಲಾಭ.

**ಮಿಥುನ:** ಎಲ್ಲರಿಂದ ಸಹಾಯ ದೊರೆಯುವುದು, ಶತ್ರು ನಾಶ, ದಾಂಪತ್ಯದಲ್ಲಿ ತೊಂದರೆ ಕಲಹ.ಪರಿಹಾರ: ಓಂ ನಮೋ ನಾರಾಯಣಾಯ.

**ಕಟಕ:** ಆರೋಗ್ಯದ ಸಮಸ್ಯೆ ಜಾಗೃತಿ, ಕೃಷಿಯಲ್ಲಿ ಲಾಭ, ಉದ್ಯೋಗದಲ್ಲಿ ಬಡ್ತಿ, ಹಣಕಾಸಿನ ವಿಚಾರದಲ್ಲಿ ಕಲಹ.

**ಸಿಂಹ:** ಕುಟುಂಬ ಸೌಖ್ಯ, ಹೊಸ ಯೋಜನೆಗಳ ಪ್ರಾರಂಭ, ಮನಶಾಂತಿ, ವ್ಯಾಪಾರದಲ್ಲಿ ಲಾಭ, ಯತ್ನ ಕಾರ್ಯಜಯ.

**ಕನ್ಯಾ:** ಅನ್ಯ ಜನರಲ್ಲಿ ಪ್ರೀತಿ, ಸುಖ ಭೋಜನ, ಆದಾಯ ಉತ್ತಮ ಖರ್ಚಿನ ಬಗ್ಗೆ ನಿಯಂತ್ರಣ ಅಗತ್ಯ.

**ತುಲಾ:** ವಿದ್ಯಾರ್ಥಿಗಳಿಗೆ ಉತ್ತಮ ಪ್ರಗತಿ, ದಾಯಾದಿ ಕಲಹ, ಕೋಪ ಜಾಸ್ತಿ, ಕಾರ್ಯವಿಕಲ್ಪ, ಶೀತ ರೋಗ.

**ವೃಶ್ಚಿಕ:** ಕ್ರಯ ವಿಕ್ರಯಗಳಿಂದ ಲಾಭ, ಮಾನಸಿಕ ಒತ್ತಡ, ಆಪ್ತರ ಸಲಹೆ, ಶ್ರಮಕ್ಕೆ ತಕ್ಕ ಫಲ, ಮಕ್ಕಳಿಂದ ಶುಭವಾರ್ತೆ

**ಧನಸ್ಸು:** ನಿರೀಕ್ಷಿತ ಆದಾಯ, ತಾಳ್ಮೆ ಅಗತ್ಯ, ಮಾತಿನ ಚಕಮುಕಿ, ಆಕಸ್ಮಿಕ ಬಂಧುಗಳ ಭೇಟಿ,ಕೆಲಸ ಕಾರ್ಯಗಳಲ್ಲಿ ಜಯ.

**ಮಕರ:** ಸ್ತ್ರೀಯರಿಗೆ ಶುಭ, ಮನೆಯಲ್ಲಿ ಸಂತಸ, ಗುರು ಹಿರಿಯರ ಆಶೀರ್ವಾದ, ವಿವಿಧ ಮೂಲಗಳಿಂದ ಧನ ಲಾಭ.

**ಕುಂಭ:** ಸರ್ಕಾರಿ ಕಾರ್ಯಗಳಲ್ಲಿ ಹಿನ್ನಡೆ, ವಾಹನ ಯೋಗ, ರಾಜಕಾರಣಿಗಳಿಗೆ ಗೊಂದಲ, ದ್ರವ್ಯ ಲಾಭ, ಹಿತ ಶತ್ರು ಭಾದೆ.

**ಮೀನ:** ಇತರರ ಕಷ್ಟಕ್ಕೆ ಸ್ಪಂದಿಸುವಿರಿ, ಸುಖ ಭೋಜನ, ಮನಶಾಂತಿ, ನೀಚ ಜನರಿಂದ ದೂರವಿರಿ.

## ವಿಶ್ವ ಮಾನವ ಕಳ್ಳಸಾಗಣೆ ವಿರುದ್ಧ ದಿನ

ಪ್ರತಿ ವರ್ಷ ಜುಲೈ 30 ರಂದು ವಿಶ್ವ ಮಾನವ ಕಳ್ಳಸಾಗಣೆ ವಿರುದ್ಧ ದಿನವನ್ನು ಆಚರಿಸಲಾಗುತ್ತದೆ, ಇದು ಮಾನವ ಕಳ್ಳಸಾಗಣೆ ಸಾಂಕ್ರಾಮಿಕ ರೋಗಕ್ಕೆ ಜಾಗತಿಕ ನಾಗರಿಕರ ಸಂವೇದನೆಗಾಗಿ ಮೀಸಲಿಟ್ಟ ರಜಾದಿನವಾಗಿದೆ. ಮಾನವ ಕಳ್ಳಸಾಗಣೆಯು ಮಾನವ ವ್ಯಕ್ತಿಗಳನ್ನು ಲಾಭಕ್ಕಾಗಿ ಬಳಸಿಕೊಳ್ಳಲು ಬಲಾತ್ಕಾರ ಅಥವಾ ಇತರ ಮೋಸದ ವಿಧಾನಗಳ ಮೂಲಕ ನೇಮಕಾತಿ, ಸಾಗಿಸುವುದು ಮತ್ತು ಸ್ವಾಧೀನಪಡಿಸಿಕೊಳ್ಳುವುದನ್ನು ಒಳಗೊಂಡಿರುತ್ತದೆ. ವಯಸ್ಸು ಅಥವಾ ಹಿನ್ನೆಲೆಯನ್ನು ಲೆಕ್ಕಿಸದೆ ಯಾರಾದರೂ ಈ ಹೇಯ ಕೃತ್ಯಕ್ಕೆ ಬಲಿಯಾಗಬಹುದು ಮತ್ತು ಮಾನವ ಕಳ್ಳಸಾಗಣೆ ಪ್ರಪಂಚದಾದ್ಯಂತ ಇದೆ. ಮಾನವ ಕಳ್ಳಸಾಗಣೆಯು ಗುಲಾಮಗಿರಿಯ ಯುಗದಿಂದ ಹುಟ್ಟಿಕೊಂಡ ಜಾಗತಿಕ ಸಾಂಕ್ರಾಮಿಕವಾಗಿದೆ ಮತ್ತು ಇಂದಿಗೂ ಇದು ಹೆಚ್ಚು ಪ್ರಚಲಿತವಾಗಿದೆ. ಸಾಮಾನ್ಯವಾಗಿ ಬಲವಂತದ ದುಡಿಮೆ ಅಥವಾ ಲೈಂಗಿಕ ಶೋಷಣೆಯ ರೂಪದಲ್ಲಿರುವ ತಮ್ಮ ಕೆಲಸ ಅಥವಾ ಸೇವೆಯಿಂದ ಪ್ರಯೋಜನ ಪಡೆಯಲು ಜನರನ್ನು ಸಾಗಿಸುವ ಅಥವಾ ಬಲವಂತಪಡಿಸುವ ಕಾನೂನುಬಾಹಿರ ಕ್ರಿಯೆ ಎಂದು ಸರಳವಾಗಿ ವ್ಯಾಖ್ಯಾನಿಸಬಹುದು. ಈ ಕಾಯಿದೆಯು ವ್ಯಕ್ತಿಯ ವಿರುದ್ಧದ ಅಪರಾಧವಾಗಿದೆ ಏಕೆಂದರೆ ಇದು ಬಲಿಪಶುವಿನ ಬಲವಂತದ ಮೂಲಕ ಚಳುವಳಿಯ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಮತ್ತು ಬಲಿಪಶುವನ್ನು ವಾಣಿಜ್ಯಕವಾಗಿ ಬಳಸಿಕೊಳ್ಳಲಾಗುತ್ತಿದೆ ಎಂಬ ಅಂಶವನ್ನು ಉಲ್ಲಂಘಿಸುತ್ತದೆ. ಮಾನವ ಕಳ್ಳಸಾಗಣೆ ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳನ್ನು ಗುರಿಯಾಗಿಸುತ್ತದೆ ಮತ್ತು ಯಾವಾಗಲೂ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವ್ಯಕ್ತಿಯ ಚಲನೆಯನ್ನು ಒಳಗೊಂಡಿರುವುದಿಲ್ಲ. ಮತ್ತು ಕಾರ್ಮಿಕ ಕಳ್ಳಸಾಗಣೆ ಮತ್ತು ಲೈಂಗಿಕ ಕಳ್ಳಸಾಗಣೆಯನ್ನು ಸಾಮಾನ್ಯವಾಗಿ ಸಾಮಾನ್ಯ ಕಳ್ಳಸಾಗಣೆ ಭಾಷಣದಲ್ಲಿ ಪ್ರತ್ಯೇಕವಾಗಿ ಪರಿಗಣಿಸಲಾಗಿದ್ದರೂ, ಎರಡೂ ರೀತಿಯ ಕಳ್ಳಸಾಗಣೆಯ ಬಲಿಪಶುಗಳು ಸಾಮಾನ್ಯವಾಗಿ ಹೊಂದಿರುವ ಒಂದು ವಿಷಯವೆಂದರೆ ಅವರ ಕಳ್ಳಸಾಗಣೆಯು ತೋರಿಕೆಯಲ್ಲಿ ಉತ್ತಮ ವಾತಾವರಣಕ್ಕೆ ವಲಸೆಯೊಂದಿಗೆ ಪ್ರಾರಂಭವಾಯಿತು. ವ್ಯಕ್ತಿಗಳ ಸಂಚಾರ ನಿಗ್ರಹ ಮತ್ತು ಇತರರ ವೇಶ್ಯಾವಾಟಿಕೆ ಶೋಷಣೆಗಾಗಿ ವಿಶ್ವಸಂಸ್ಥೆಯ ಸಮಾವೇಶವನ್ನು 1949 ರಲ್ಲಿ ಅಂಗೀಕರಿಸಲಾಯಿತು ಮತ್ತು 1951 ರಲ್ಲಿ ಜಾರಿಗೆ ಬಂದಿತು. ಈ ಸಮಾವೇಶವು ಮಾನವ ಕಳ್ಳಸಾಗಣೆಯಲ್ಲಿ ಒಂದು ಕಾನೂನು ತಿರುವು ಆಗಿತ್ತು ಏಕೆಂದರೆ ಇದು ಪ್ರಾಥಮಿಕ ಕಾನೂನುಬದ್ಧ ಸಾಧನವಾಗಿದೆ ವಿಷಯದ ಮೇಲೆ. ಇಂದಿನವರೆಗೆ, ಕೇವಲ 66 ದೇಶಗಳು ಸಮಾವೇಶವನ್ನು ಅನುಮೋದಿಸಿವೆ. ಒಪ್ಪಂದದ ಪ್ರಕಾರ ವೇಶ್ಯಾವಾಟಿಕೆಯನ್ನು ಅಪರಾಧೀಕರಿಸಲು ಹಲವಾರು ದೇಶಗಳು ಹಿಂಜರಿಯುವುದು ಕಡಿಮೆ ಅನುಮೋದನಾ ದರಕ್ಕೆ ಪ್ರಮುಖ ಕಾರಣವಾಗಿದೆ. ಸಮಾವೇಶದ ಜಾರಿಯ ನಂತರ, ಅಂತರಾಷ್ಟ್ರೀಯ ಸಮುದಾಯವು ಹಲವಾರು (ಕಾನೂನುಬದ್ಧವಲ್ಲದ) ಸಾಧನಗಳನ್ನು ಅಳವಡಿಸಿಕೊಂಡಿತು, ಇದು ಮಾನವ ಕಳ್ಳಸಾಗಣೆಯ ಕೇಂದ್ರಬಿಂದುವನ್ನು ಕಡೆಗೆ ನಿರ್ದೇಶಿಸಿತು. ಅಂತಹ ಒಂದು ಸಾಧನವೆಂದರೆ ಬೀಜಿಂಗ್ ಪ್ಲಾಟ್ಫಾರ್ಮ್ ಫಾರ್ ಆಕ್ಷನ್ 1995 ರಲ್ಲಿ ಮಹಿಳೆಯರ ಮೇಲಿನ ನಾಲ್ಕನೇ ವಿಶ್ವ ಸಮ್ಮೇಳನವು ಅಳವಡಿಸಿಕೊಂಡಿದೆ, ಇದು ಲೈಂಗಿಕ ವ್ಯಾಪಾರದಲ್ಲಿ ಮಹಿಳೆಯರು ಮತ್ತು ಹುಡುಗಿಯರ ಕಳ್ಳಸಾಗಣೆಯನ್ನು ಪರಿಣಾಮಕಾರಿಯಾಗಿ ನಿಗ್ರಹಿಸಲು ಕರೆ ನೀಡುತ್ತದೆ.

# ಕ್ಯಾಲಿಫೋರ್ನಿಯಾದಲ್ಲಿ 4.9 ತೀವ್ರತೆಯ ಭೂಕಂಪ




**ಕ್ಯಾಲಿಫೋರ್ನಿಯಾ:** ಕ್ಯಾಲಿಫೋರ್ನಿಯಾದಲ್ಲಿ ಜುಲೈ 29 ರ ಸೋಮವಾರ 4.9 ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದೆ. ಲಾಸ್ ಏಂಜಲೀಸ್ನಲ್ಲಿ ಭೂಕಂಪನದ ಅನುಭವವಾಗಿದ್ದು, ಬಾರ್ಸ್ಟೋ ಬಳಿ ಭೂಕಂಪ ಸಂಭವಿಸಿದೆ ಎಂದು ವರದಿಯಾಗಿದೆ.

ಈ ಪ್ರಮಾಣದ ಭೂಕಂಪವು ಕ್ಯಾಲಿಫೋರ್ನಿಯಾದ ಜನರನ್ನು ಬೆಚ್ಚಿಬೀಳಿಸಿತು, ಮತ್ತು ಭೂಕಂಪ ಮುಗಿದ ನಂತರವೂ ಭೂಕಂಪನದ ಅನುಭವಗಳು ಮುಂದುವರೆದವು.

ರಾಜ್ಯದಲ್ಲಿ ಯಾವುದೇ ಹಾನಿ ಅಥವಾ ಆಸ್ತಿಪಾಸ್ತಿಗೆ ತೀವ್ರ ಹಾನಿಯಾದ ವರದಿಗಳಿಗಾಗಿ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ.ಕ್ಯಾಲಿಫೋರ್ನಿಯಾ ಮತ್ತು ದಕ್ಷಿಣ ಕ್ಯಾಲಿಫೋರ್ನಿಯಾದಾದ್ಯಂತ ಭೂಕಂಪನದ ಅನುಭವವಾಗಿದ್ದು, ಲಾಸ್ ಏಂಜಲೀಸ್ ಪ್ರದೇಶದಲ್ಲಿ ನಡುಕ ಉಂಟಾಗಿದೆ. ಸ್ಯಾನ್ ಬರ್ನಾರ್ಡಿನೊ ಕೌಂಟಿಯ ಬಾರ್ಸ್ಟೋದಿಂದ 15 ಮೈಲಿ ದೂರದಲ್ಲಿ 4.9 ತೀವ್ರತೆಯ ಭೂಕಂಪ ದಾಖಲಾಗಿದೆ. ಯುಎಸ್ ಭೂವೈಜ್ಞಾನಿಕ ಸಮೀಕ್ಷೆಯ ಪ್ರಕಾರ, ಸ್ಥಳೀಯ ಕಾಲಮಾನ ಮಧ್ಯಾಹ್ನ 1:00 ರ ಸುಮಾರಿಗೆ ನೆಲವು ನಡುಗಲು ಪ್ರಾರಂಭಿಸಿತು, ಅದರ ಭೂಕಂಪವು 5 ಮೈಲಿ ಆಳದಲ್ಲಿದೆ. ರಿಕ್ಟರ್ ಮಾಪಕದಲ್ಲಿ ಕ್ರಮವಾಗಿ 3.5 ಮತ್ತು 2.7 ತೀವ್ರತೆಯ ಭೂಕಂಪನಗಳು ಸಂಭವಿಸಿದ್ದು, ಕ್ಯಾಲಿಫೋರ್ನಿಯಾದ ಜನರನ್ನು ಮತ್ತಷ್ಟು ನಡುಗಿಸಿದೆ. ಸ್ಯಾನ್ ಬರ್ನಾರ್ಡಿನೊ ಕೌಂಟಿಯನ್ನು ಹೊರತುಪಡಿಸಿ, ಲಾಸ್ ಏಂಜಲೀಸ್, ಕೆರ್ನ್, ರಿವರ್ಸೈಡ್ ಮತ್ತು ಆರೆಂಜ್ ಕೌಂಟಿಗಳಲ್ಲಿ ಭೂಕಂಪನದ ಅನುಭವವಾಗಿದೆ ಎಂದು ಯುಎಸ್ಎ ಟುಡೇ ವರದಿ ಮಾಡಿದೆ.

# ಭಾರತ-ಚೀನಾ ಸಂಬಂಧ ಹದಗೆಟ್ಟಿದ್ದು ಮಧ್ಯಸ್ಥಿಕೆ ಬೇಕಿಲ್ಲ: ಸಚಿವ ಜೈಶಂಕರ್



**ಚೀನಾ:** ಚೀನಾದೊಂದಿಗಿನ ಭಾರತದ ಗಡಿವಿವಾದದಲ್ಲಿ ಮೂರನೇ ಪಕ್ಷದ ಪಾತ್ರವನ್ನು ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ತಳ್ಳಿಹಾಕಿದ್ದಾರೆ. ಈ ಸಮಸ್ಯೆ 2 ನೆರೆಯ ರಾಷ್ಟ್ರಗಳ ನಡುವಿನದ್ದಾಗಿದ್ದು, ಅದನ್ನು ಪರಿಹರಿಸಿಕೊಳ್ಳುವುದು ಭಾರತ ಮತ್ತು ಚೀನಾಕ್ಕೆ ಬಿಟ್ಟದ್ದು ಎಂದಿದ್ದಾರೆ.

ಟೋಕಿಯೋದಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜೈಶಂಕರ್, 'ಭಾರತ ಮತ್ತು ಚೀನಾ ನಡುವಿನ ನಿಜವಾದ ಸಮಸ್ಯೆ ಏನೆಂಬುದನ್ನು ಗುರುತಿಸಲು ಮತ್ತು ಅದನ್ನು ಬಗೆಹರಿಸಿಕೊಳ್ಳಲು ನಾವು ಇತರ ದೇಶಗಳ ಮಧ್ಯಸ್ಥಿಕೆಯನ್ನು ಬಯಸುತ್ತಿಲ್ಲ' ಎಂದು ಹೇಳಿದ್ದಾರೆ.

ಕ್ವಾಡ್ ವಿದೇಶಾಂಗ ಸಚಿವರ ಸಭೆಯಲ್ಲಿ ಭಾಗವಹಿಸಲು ಟೋಕಿಯೋಗೆ ತೆರಳಿರುವ ಜೈಶಂಕರ್, ಚೀನಾದೊಂದಿಗಿನ ಭಾರತದ ಸಂಬಂಧ ಚೆನ್ನಾಗಿಲ್ಲ ಮತ್ತು ಅದು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿಲ್ಲಎಂದು ಹೇಳಿದರು. ನಿಸ್ಸಂಶಯವಾಗಿ ಪ್ರಪಂಚದ ಇತರ ದೇಶಗಳು ಈ ವಿಷಯದಲ್ಲಿ ಆಸಕ್ತಿಯನ್ನು ಹೊಂದಿರುತ್ತವೆ. ಏಕೆಂದರೆ ನಮ್ಮ ಎರಡು ದೊಡ್ಡ ದೇಶಗಳು ಮತ್ತು ನಮ್ಮ ಸಂಬಂಧದ ಸ್ಥಿತಿಯು ಪ್ರಪಂಚದ ಉಳಿದ ಭಾಗಗಳ ಮೇಲೆ ಪರಿಣಾಮ ಬೀರುತ್ತದೆ ಎಂದು ಅವರು ಹೇಳಿದ್ದಾರೆ.

ಭಾರತ ಮತ್ತು ಚೀನಾ ನಡುವಿನ ಸಂಬಂಧ 'ಉತ್ತಮ' ಅಥವಾ 'ಸಾಮಾನ್ಯ' ಎರಡೂ ಅಲ್ಲ ಎಂದು ವಿದೇಶಾಂಗ ಸಚಿವ ಜೈಶಂಕರ್ ಒತ್ತಿ ಹೇಳಿದ್ದಾರೆ. ಆದರೆ, ಬೀಜಿಂಗ್ನೊಂದಿಗೆ ಉತ್ತಮ ನೆರೆಯ ಸಂಬಂಧವನ್ನು ನವದೆಹಲಿ ಬಯಸುತ್ತದೆ ಎಂದು ಅವರು ಹೇಳಿದರು.

## ಸತ್ನಾಮ್ ಸಿಂಗ್ ಸಂಧು ಬಿಜೆಪಿ ಸೇರ್ಪಡೆ



**ನವದೆಹಲಿ:** ರಾಜ್ಯಸಭೆಯ ನಾಮನಿರ್ದೇಶಿತ ಸದಸ್ಯ ಸತ್ನಾಮ್ ಸಿಂಗ್ ಸಂಧು ಅವರು ಬಿಜೆಪಿ ಸೇರ್ಪಡೆಯಾಗಿದ್ದಾರೆ. ಈ ಮೂಲಕ ರಾಜ್ಯಸಭೆಯಲ್ಲಿ ಬಿಜೆಪಿ ಸದಸ್ಯರ ಬಲ 87ಕ್ಕೆ ಏರಿಕೆಯಾಗಿದೆ. ನಾಮನಿರ್ದೇಶಿತ ಸಂಸದರಾಗಿ ಪ್ರಮಾಣ ವಚನ ಸ್ವೀಕರಿಸಿದವರು ಆರು ತಿಂಗಳೊಳಗಾಗಿ ಯಾವುದಾದರೂ ಪಕ್ಷಕ್ಕೆ ಸೇರ್ಪಡೆಯಾಗಲಿದ್ದಾರೆಯೇ ಎನ್ನುವುದನ್ನು ಸಂಸತ್ತಿಗೆ ತಿಳಿಸಬೇಕು. ಅದರಂತೆ ಜುಲೈ 31ರೊಳಗೆ ಸತ್ನಾಮ್ ಸಿಂಗ್ ಸಂಧು ತಮ್ಮ ನಿರ್ಧಾರ ತಿಳಿಸಬೇಕಿತ್ತು. ಹೀಗಾಗಿ ಅವರು ಬಿಜೆಪಿಗೆ ಸೇಪರ್ಡೆಯಾಗುತ್ತಿರುವುದಾಗಿ ಹೇಳಿದ್ದಾರೆ. 2024ರ ಜನವರಿ 31ರಂದು ಪ್ರಮಾಣವಚನ ಸ್ವೀಕರಿಸಿದ್ದ ಸಂಧು 6 ತಿಂಗಳ ಗಡುವು ಮುಗಿಯುವ ಮುನ್ನವೇ ಬಿಜೆಪಿ ಸೇರ್ಪಡೆಯಾಗುವುದಾಗಿ ತಿಳಿಸಿದ್ದಾರೆ. ಆದ್ದರಿಂದ ಅವರನ್ನು ಬಿಜೆಪಿ ಸದಸ್ಯ ಎಂದು ಪರಿಗಣಿಸಲಾಗುತ್ತದೆ ಎಂದು ರಾಜ್ಯಸಭೆ ಪ್ರಕಟಣೆಯಲ್ಲಿ ತಿಳಿಸಿದೆ. ಇತ್ತೀಚೆಗೆ ನಾಮನಿರ್ದೇಶನಗೊಂಡಿದ್ದ ನಾಲ್ವರು ಸದಸ್ಯರ ಅವಧಿ ಮುಗಿದ ಹಿನ್ನೆಲೆಯಲ್ಲಿ ಮೇಲ್ಮನೆಯಲ್ಲಿ ಬಿಜೆಪಿ ಬಲವು 86ಕ್ಕೆ ಇಳಿಕೆಯಾಗಿತ್ತು.

# ಜಾರ್ಖಂಡ್‌ನಲ್ಲಿ ಹಳಿ ತಪ್ಪಿದ ಮುಂಬೈ ರೈಲು: ಇಬ್ಬರ ಸಾವು



**ಜಮಶೆಡ್ಪುರ:** ಕೋಲ್ಕತ್ತಾದ ಹೌರಾದಿಂದ ಮುಂಬೈಗೆ ಆಗಮಿಸುತ್ತಿದ್ದ ಹೌರಾ-ಸಿಎಸ್ಎಂಟಿ ಎಕ್ಸ್ಪ್ರೆಸ್ ರೈಲು ಹಳಿ ತಪ್ಪಿ 18 ಬೋಗಿಗಳು ಉರುಳಿ ಬಿದ್ದುದರಿಂದ ಇಬ್ಬರು ಸ್ಥಳದಲ್ಲೇ ಮೃತಪಟ್ಟು 20 ಮಂದಿ ಗಾಯಗೊಂಡಿರುವ ಘಟನೆ ಜಾರ್ಖಂಡ್ ರಾಜ್ಯದ ಜಮಶೆಡ್ಪುರ ಸಮೀಪದ ಬಡಾಬಾಂಬೂ ಎಂಬಲ್ಲಿ ಮಂಗಳವಾರ ಬೆಳಗಿನ ಜಾವ ನಡೆದಿದೆ.

ಘಟನೆ ನಡೆದ ಸ್ಥಳವು ಜಮಶೆಡ್ಪುರದಿಂದ 80 ಕಿ.ಮಿ. ದೂರದಲ್ಲಿದ್ದು ರಕ್ಷಣಾ ಕಾರ್ಯವು ಚುರುಕುಗೊಂಡಿದೆ. ಗಾಯಗೊಂಡವರನ್ನು ಸ್ಥಳೀಯ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಪ್ರಯಾಣಿಕರನ್ನು ಸುರಕ್ಷಿತವಾಗಿ ಬೇರೆ ರೈಲುಗಳಲ್ಲಿ ಪ್ರಯಾಣಿಸಲು ವ್ಯವಸ್ಥೆ ಮಾಡಲಾಗುತ್ತಿದೆ. ಇದೇ ವೇಳೆ ಸಮೀಪದಲ್ಲಿಯೇ ಮತ್ತೊಂದು ಗೂಡ್ಸ್ ರೈಲು ಕೂಡ ಹಳಿ ತಪ್ಪಿದ್ದು, ಈ ರೈಲು ಡಿಕ್ಕಿ ಆಗಿದೆಯೇ ಎನ್ನುವ ಚರ್ಚೆಗಳು ನಡೆದಿವೆ. ಆದರೆ ಅದಿನ್ನೂ ನಿಖರವಾಗಿಲ್ಲ. ಹೌರಾ ಎಕ್ಸ್ಪ್ರೆಸ್ ಹಳಿ ತಪ್ಪಿದ ಘಟನೆ ಹಿನ್ನೆಲೆಯಲ್ಲಿ ಭಾರತೀಯ ರೈಲ್ವೆಯ ತನಿಖೆಗೆ ಆದೇಶಿಸಿದೆ.

ಹೌರಾದಿಂದ ಜಮಶೆಡ್ ಪುರ ಮಾರ್ಗವಾಗಿ ಎಕ್ಸ್ಪ್ರೆಸ್ ರೈಲು ಮುಂಬೈ ಕಡೆಗೆ ಹೊರಟಿತ್ತು. ಟಾಟಾ ನಗರ ಬಳಿ ಹೋಗುವ ವೇಳೆ ಮಂಗಳವಾರ ಬೆಳಿಗ್ಗೆ ಏಕಾಏಕಿ ರೈಲು ಹಳಿ ತಪ್ಪಿತು. ಬೆಳಗಿನ ಜಾವದ ನಿದ್ರೆಯಲ್ಲಿದ್ದ ಪ್ರಯಾಣಿಕರಿಗೆ ಏಕಾಏಕಿ ಶಬ್ದ ಕೇಳಿ ಭಯವೂ ಆಯಿತು. ಈ ವೇಳೆ ರೈಲಿನ ಬೋಗಿಗಳು ಉರುಳಿ ಬಿದ್ದಿದ್ದವು. ಅದರಲ್ಲೂ ಹದಿನೆಂಟು ಬೋಗಿಗಳು ಅಸ್ತವ್ಯಸ್ತಗೊಂಡಿದ್ದವು. ಇದರಲ್ಲಿ ಹದಿನಾರು ಬೋಗಿಗಳು ಪ್ರಯಾಣಿಕರವು. ಈ ವೇಳೆ ಗಾಯಗೊಂಡ ಇಬ್ಬರು ಪ್ರಯಾಣಿಕರು ಮೃತಪಟ್ಟರೆ, ಇಪ್ಪತ್ತು ಪ್ರಯಾಣಿಕರು ಗಾಯಗೊಂಡರು. ಆತಂಕಗೊಂಡು ಹೊರ ಬಂದ ಪ್ರಯಾಣಿಕರಿಗೆ ರೈಲ್ವೆ ಸಿಬ್ಬಂದಿ ಸಂತೈಸಿದರು. ಕೂಡಲೇ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರಿಂದ ರೈಲ್ವೆ ರಕ್ಷಣಾ ಸಿಬ್ಬಂದಿ ಧಾವಿಸಿದರು. ಗಾಯಗೊಂಡವರನ್ನು ಸ್ಥಳೀಯವಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಧ್ಯಪ್ರದೇಶ, ಮಹಾರಾಷ್ಟ್ರ ಕಡೆಗೆ ಹೋಗಬೇಕಿದ್ದ ಪ್ರಯಾಣಿಕರಿಗೆ ಪರ್ಯಾಯ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

# ರಾಹುಲ್ ಮಾತಿಗೆ ಹಣೆ ಚಚ್ಚಿಕೊಂಡು, ಮುಖ ಮುಚ್ಚಿಕೊಂಡ ಕೇಂದ್ರ ಹಣಕಾಸು ಸಚಿವೆ



**ನವದೆಹಲಿ:** ಇಂದು ಸಂಸತ್ತಿನ ಮುಂಗಾರು ಅಧಿವೇಶನದ ಒಂಬತ್ತನೇ ದಿನ. ಇಂದು ದೆಹಲಿ ಕೋಚಿಂಗ್ ಸೆಂಟರ್ ದುರಂತ, ಅಗ್ನಿಪಥ್ ಯೋಜನೆ ಸೇರಿದಂತೆ ಹಲವು ವಿಚಾರಗಳನ್ನಿಟ್ಟುಕೊಂಡು ವಿಪಕ್ಷ ನಾಯಕ ರಾಹುಲ್ ಗಾಂಧಿ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಈ ವೇಳೆ ರಾಹುಲ್ ಆರೋಪಕ್ಕೆ ಕೇಂದ್ರ ಹಣಕಾಸು ಸಚಿವ ನಿರ್ಮಲಾ ಸೀತಾರಾಮನ್ಮುಖ ಮುಚ್ಚಿಕೊಂಡ ಅಪರೂಪದ ಘಟನೆಗೆ ಸದನ ಸಾಕ್ಷಿಯಾಯಿತು. ಕೇಂದ್ರ ಬಜೆಟ್ ಕುರಿತು ಮಾತನಾಡುತ್ತಿದ್ದ ರಾಹುಲ್ ಗಾಂಧಿ, ಹಲ್ವಾ ಕಾರ್ಯಕ್ರಮದ ಫೋಟೋ ಪ್ರದರ್ಶನ ಮಾಡಿದಾಗ ನಿರ್ಮಲಾ ಸೀತಾರಾಮನ್ ಅವರು ನಗುತ್ತಾ ಮುಖ ಮುಚ್ಚಿಕೊಂಡರು. ಇದೀಗ ಈ ವಿಡಿಯೋ ಎಲ್ಲೆಡೆ ವೈರಲ್ ಆಗತೊಡಗಿದೆ ಅಲ್ಲದೇ ಹಲವು ಪರ ವಿರೋಧ ಟೀಕೆಗಳು ವ್ಯಕ್ತವಾಗಿವೆ. ಕೇಂದ್ರ ಬಜೆಟ್ ನ್ನು ಮಧ್ಯಮ ವರ್ಗ, ಹಿಂದುಳಿದ ವರ್ಗಗಳ ವಿರೋಧಿ ಬಜೆಟ್ ಎಂದು ರಾಹುಲ್ ಗಾಂಧಿ ತಮ್ಮ ಭಾಷಣದಲ್ಲಿ ಟೀಕಾ ಪ್ರಹಾರ ನಡೆಸಿದರು. ರಾಹುಲ್ ಗಾಂಧಿ ಬಜೆಟ್ ಪೂರ್ವದಲ್ಲಿ ನಡೆಯುವ ಸಾಂಪ್ರದಾಯಿಕ ಹಲ್ವಾ ಸಮಾರಂಭದ ಪೋಸ್ಟರ್ ನ್ನು ಪ್ರದರ್ಶಿಸಿದ್ದು, ಬಜೆಟ್ ತಯಾರಿಕೆಯ ತಂಡದಲ್ಲಿದ್ದ 20 ಅಧಿಕಾರಿಗಳ ಪೈಕಿ ದಲಿತರು, ಒಬಿಸಿ, ಆದಿವಾಸಿಗಳು ಇಲ್ಲವೇ ಇಲ್ಲ. 20 ಅಧಿಕಾರಿಗಳ ಪೈಕಿ ಯಾರೊಬ್ಬರೂ ಹಿಂದುಳಿದ ವರ್ಗ, ದಲಿತ ಹಾಗೂ ಆದಿವಾಸಿ ಸಮುದಾಯಕ್ಕೆ ಸೇರಿದವರು ಇಲ್ಲ. ನಾನು ಬೇಕಿದ್ದರೆ ಅವರ ಹೆಸರುಗಳನ್ನೂ ಹೇಳಬಲ್ಲೆ ಎಂದರು. ಈ ವೇಳೆ ರಾಹುಲ್ ಗಾಂಧಿ ಈ ಹೇಳಿಕೆ ನೀಡುತ್ತಿದ್ದಂತೆ ನಿರ್ಮಲಾ ಸೀತಾರಾಮನ್ ಅವರು ಹಣೆ ಚಚ್ಚಿಕೊಂಡು, ತಮ್ಮ ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡು ನಕ್ಕರು.

## ಕೇಜ್ರಿವಾಲ್ ಆರೋಗ್ಯ ಕ್ಷೀಣ



**ನವದೆಹಲಿ:** ಅಬಕಾರಿ ನೀತಿ ಪ್ರಕರಣ ದಲ್ಲಿ ಜೈಲುಪಾಲಾಗಿರುವ ದೆಹಲಿ ಮುಖ್ಯಮಂತ್ರಿ ಮತ್ತು ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಅವರಿಗೆ ಜೈಲಿನಲ್ಲಿ ಜೀವ ಬೆದರಿಕೆ ಇದೆ ಎಂದು ಆಪ್ ಆತಂಕ ವ್ಯಕ್ತಪಡಿಸಿರುವ ಬೆನ್ನಲ್ಲೇ ನಾಳೆ ಇಂಡಿಯಾ ಒಕ್ಕೂಟ ರ್ಯಾಲಿ ನಡೆಸಲು ಮುಂದಾಗಿವೆ. ನ್ಯಾಯಾಂಗ ಬಂಧನದಲ್ಲಿ ದಿನೇ ದಿನೇ ಕೇಜ್ರಿವಾಲ್ ಅವರ ಆರೋಗ್ಯ ಹದಗೆಡುತ್ತಿರುವ ಬಗ್ಗೆ ಆತಂಕ ವ್ಯಕ್ತವಾಗಿರುವ ಹಿನ್ನೆಲೆ ನಾಳೆ ಪ್ರತಿಪಕ್ಷಗಳು ಕೇಂದ್ರ ಸರ್ಕಾರದ ವಿರುದ್ಧ ಜಂತರ್ ಮಂಥರ್‌ನಲ್ಲಿ ರ್ಯಾಲಿ ನಡೆಸಿ ಪ್ರತಿಭಟನೆ ಮಾಡಲಿದೆ. ಈ ಬಗ್ಗೆ ಅಪ್ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಮಾಹಿತಿ ನೀಡಿದ್ದು, ಕಾಂಗ್ರೆಸ್, ಸಮಾಜವಾದಿ ಪಕ್ಷ, ತೃಣಮೂಲ ಕಾಂಗ್ರೆಸ್, ಡಿಎಂಕೆ, ಸಿಪಿಐ, ಜಾರ್ಖಂಡ್ ಮುಕ್ತಿ ಮೋರ್ಚಾ, ಎನ್ಸಿಪಿ-ಎಸ್ಪಿ, ಶಿವಸೇನೆ (ಯುಬಿಟಿ) ಮತ್ತು ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ ಪಕ್ಷಗಳು ಪ್ರತಿಭಟನೆ ನಡೆಸಲಿವೆ. ಮತ್ತೆ ಮೂರು ಪಕ್ಷಗಳ ಜೊತೆ ನಾಳೆ ಪ್ರತಿಭಟನೆಗೆ ಸಾಥ್ ಕೊಡುವಂತೆ ಮನವಿ ಮಾಡಿದ್ದೇವೆ ಎಂದಿದ್ದಾರೆ. ಕೇಜ್ರಿವಾಲ್‌ಅವರಿಗೆ ಜೈಲಿನಲ್ಲಿ ಜೀವ ಬೆದರಿಕೆ ಇದೆ ಎಂದು ಆಪ್ ಆತಂಕ ವ್ಯಕ್ತಪಡಿಸಿದೆ. ತಿಹಾರ್‌ನಲ್ಲಿ ಕೇಜ್ರಿವಾಲ್ಗೆ ಸೂಕ್ತ ವೈದ್ಯಕೀಯ ಚಿಕಿತ್ಸೆ ನೀಡದೇ ಅವರ ಹತ್ಯೆಗೆ ಬಿಜೆಪಿ ಸಂಚು ರೂಪಿಸಿದೆ ಎಂದು ಆಪ್ ಗಂಭೀರ ಆರೋಪ ಮಾಡಿತ್ತು. ಕೆಲವು ದಿನಗಳ ಹಿಂದೆ ಮಾಧ್ಯಮಗೋಷ್ಠಿ ನಡೆಸಿದ ದಿಲ್ಲಿ ಸಚಿವೆ ಆತಿಷಿ, ಕೇಜ್ರಿವಾಲ್ ಅವರನ್ನು ಜೈಲಿಗೆ ತಳ್ಳುವುದು ಮಾತ್ರವಲ್ಲ, ಅವರನ್ನು ಅನಾರೋಗ್ಯಕ್ಕೀಡು ಮಾಡಿ ಕೊಲೆಗೈಯುವ ಸಂಚು ಬಿಜೆಪಿಗಿದೆ. ಸರ್ವಾಧಿಕಾರಿ ತಮ್ಮ ವಿರೋಧಿಗಳನ್ನು ಜೈಲಿಗೆ ತಳ್ಳಿ ಅವರ ಆರೋಗ್ಯ ಹದಗೆಡುವಂತೆ ಮಾಡುತ್ತಿದ್ದಾರೆ. ಕೇಜ್ರಿವಾಲ್ಗೆ ಏನಾದರೂ ಹೆಚ್ಚುಕಡಿಮೆ ಆದರೆ ಅದಕ್ಕೆ ಬಿಜೆಪಿಯೇ ನೇರ ಜವಾಬ್ದಾರಿ ಎಂದು ಹೇಳಿದ್ದರು.

# ರಾಹುಲ್‌ಗೆ ರಾಜನಾಥ್ ಸಿಂಗ್ ಸಖತ್ ಟಾಂಗ್



**ನವದೆಹಲಿ:** ಕಾಂಗ್ರೆಸ್ ನಾಯಕ, ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರು ಲೋಕಸಭೆಯಲ್ಲಿ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಅದರಲ್ಲೂ, ಮಹಾಭಾರತದ ಚಕ್ರವ್ಯೂಹವನ್ನು ಉಲ್ಲೇಖಿಸಿದ ರಾಹುಲ್ ಗಾಂಧಿ ಅವರು ನರೇಂದ್ರ ಮೋದಿ ಹಾಗೂ ಬಿಜೆಪಿ ವಿರುದ್ಧ ವಾಗ್ಬಾಣ ಪ್ರಯೋಗಿಸಿದ್ದಾರೆ.

ಇದೇ ವೇಳೆ ಪ್ರತಿಪಕ್ಷಗಳಿಂದ ತೀವ್ರ ಟೀಕೆಗೆ ಗುರಿಯಾಗಿರುವ ಅಗ್ನಿಪಥ್ ಯೋಜನೆ ಇಂದು ಲೋಕಸಭೆಯಲ್ಲಿ ಕಾಂಗ್ರೆಸ್ನ ರಾಹುಲ್ ಗಾಂಧಿ ಮತ್ತು ಕೇಂದ್ರ ಸಚಿವ ರಾಜನಾಥ್ ಸಿಂಗ್ ನಡುವೆ ವಾದ ಪ್ರತಿವಾದಕ್ಕೆ ವೇದಿಕೆ ಕಲ್ಪಿಸಿತ್ತು. ಸದನದಲ್ಲಿ ಮಾತನಾಡಿದ ರಾಹುಲ್ ಗಾಂಧಿ, ಸೇನೆಯ ಸೈನಿಕರನ್ನು ಅಗ್ನಿವೀರ್ ಹೆಸರಿನ ಚಕ್ರವ್ಯೂಹದಲ್ಲಿ ಸಿಲುಕಿಸಲಾಯ್ತು. ಈ ಬಜೆಟ್ನಲ್ಲಿ ಅಗ್ನಿವೀರರ ಪಿಂಚಣಿಗಾಗಿ ಒಂದು ರೂಪಾಯಿಯನ್ನು ತೆಗೆದಿರಿಸಿಲ್ಲ. ನಿಮ್ಮನ್ನು ದೇಶಭಕ್ತರೆಂದು ಕರೆದುಕೊಳ್ಳುವ ನೀವು ಅಗ್ನಿವೀರರ ಪಿಂಚಣಿಗಾಗಿ ಅನುದಾನ ಘೋಷಣೆ ಮಾಡಿಲ್ಲ. ನಿಮ್ಮ ಚಕ್ರವ್ಯೂಹದಿಂದ ಹೊರಬರಲು ರೈತರು ಎಂಎಸ್ಪಿ ಲೀಗಲ್ ಗ್ಯಾರಂಟಿಯನ್ನು ಕೇಳಿದ್ದರು. ಆದ್ರೆ ನೀವು ರೈತರ ಜೊತೆ ಮಾತನಾಡಲು ಸಿದ್ಧವಿಲ್ಲ ಎಂದು ಕೇಂದ್ರ ಸರ್ಕಾರದ ವಿರುದ್ಧ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದರು.

# ವೆನೆಝುವೆಲಾ ಅಧ್ಯಕ್ಷೀಯ ಚುನಾವಣೆ: ನಿಕೊಲಸ್ ಮಡುರೊ ಗೆಲುವು ಘೋಷಣೆ



**ವೆನೆಝುವೆಲಾ:** ವೆನೆಝುವೆಲಾದಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ನಿಕೊಲಸ್ ಮಡುರೊ ಗೆಲುವು ಸಾಧಿಸಿರುವುದಾಗಿ ರವಿವಾರ ಘೋಷಿಸಲಾಗಿದೆ. ಆದರೆ ಈ ಫಲಿತಾಂಶವನ್ನು ತಿರಸ್ಕರಿಸುವುದಾಗಿ ದೇಶದ ಪ್ರಮುಖ ವಿಪಕ್ಷ ಹೇಳಿದೆ.

ನಿಕೊಲಸ್ ಮಡುರೊ 51.2%ದಷ್ಟು ಮತಗಳನ್ನು ಪಡೆದು ಮರು ಆಯ್ಕೆಗೊಂಡಿರುವುದಾಗಿ ಚುನಾವಣಾ ಆಯೋಗ ಘೋಷಿಸಿದೆ.

ಪ್ರಮುಖ ವಿಪಕ್ಷಗಳ ಅಭ್ಯರ್ಥಿ ಎಡ್ಮಂಡೊ ಗೊನ್ಸಾಲ್ವಿಸ್ ಉರೂಷಿಯಾ 44.2% ಮತಗಳನ್ನು ಪಡೆದಿದ್ದಾರೆ ಎಂದು ಆಯೋಗ ಹೇಳಿದೆ. ಚುನಾವಣಾ ಪೂರ್ವ ಮತ್ತು ಚುನಾವಣೋತ್ತರ ಸಮೀಕ್ಷೆಗಳು ನಿಕೊಲಸ್ ಮಡುರೊ ಗೆಲ್ಲುವ ಸಾಧ್ಯತೆ ಕಡಿಮೆ ಮತ್ತು ಎಡ್ಮಂಡೊ ಗೊನ್ಸಾಲ್ವಿಸ್ ಗೆಲುವು ಬಹುತೇಕ ನಿಶ್ಚಿತ ಎಂದು ಭವಿಷ್ಯ ನುಡಿದಿದ್ದವು.

ಮತ ಎಣಿಕೆಯಲ್ಲಿ ತನ್ನ ಅಭ್ಯರ್ಥಿ ಗೊನ್ಸಾಲ್ವಿಸ್ 70% ಮತ ಪಡೆದಿದ್ದಾರೆ. ಆದರೆ ಮಡುರೊಗೆ ನಿಷ್ಠರಾಗಿರುವ ಚುನಾವಣಾ ಆಯೋಗ ಫಲಿತಾಂಶವನ್ನು ತಿರುಚಿದೆ. ಗೆಲುವು ನಮ್ಮದೇ ಎಂದು ವಿಪಕ್ಷಗಳ ಮೈತ್ರಿಕೂಟ ಪ್ರತಿಪಾದಿಸಿದೆ. ವೆನೆಝುವೆಲಾ ಮತ್ತೊಮ್ಮೆ ರಾಜಕೀಯ ಬಿಕ್ಕಟ್ಟಿನತ್ತ ಸಾಗುತ್ತಿರುವ ಬಗ್ಗೆ ಅಮೆರಿಕ ಕಳವಳ ವ್ಯಕ್ತಪಡಿಸಿದೆ.

# ಸ್ಥೂಲಕಾಯದಿಂದ ನಾಯಿ ಸಾವು



**ನ್ಯೂಜಿಲೆಂಡ್:** ನ್ಯೂಜಿಲೆಂಡ್ ಮಹಿಳೆಯೊಬ್ಬರು ತನ್ನ ಸಾಕುನಾಯಿಗೆ ಅತಿಯಾಗಿ ಫುಡ್ ನೀಡಿದ ಕಾರಣ ಅದರ ಸಾವಿಗೆ ಕಾರಣವಾಗಿದ್ದಕ್ಕೆ ಎರಡು ತಿಂಗಳ ಜೈಲು ಶಿಕ್ಷೆ ವಿಧಿಸಲಾಗಿದೆ. 2021 ರ ಅಕ್ಟೋಬರ್ ನಲ್ಲಿ ರಾಯಲ್ ನ್ಯೂಜಿಲೆಂಡ್ ಸೊಸೈಟಿ ಫಾರ್ ದಿ ಪ್ರಿವೆನ್ಷನ್ ಆಫ್ ಕ್ರೌರ್ಲ್ಟಿ ಟು ಅನಿಮಲ್ಸ್ ಸರ್ಚ್ ವಾರಂಟ್ ಎಕ್ಸಿಕ್ಯೂಶನ್ ಸಮಯದಲ್ಲಿ ಅಧಿಕಾರಿಗಳು ಬೊಜ್ಜು ನಾಯಿಯನ್ನು ಕಂಡುಹಿಡಿದಿದ್ದಾರೆ ಎಂದು ವರದಿಯಾಗಿದೆ. ಈ ವೇಳೆ ಹಲವಾರು ನಾಯಿಗಳನ್ನು ವಶಪಡಿಸಿಕೊಳ್ಳಲಾಯಿತು. ಬಳಿಕ ಅವುಗಳನ್ನು ಆಕ್ಲೆಂಡ್ ಪ್ರಾಣಿಗಳ ಆಶ್ರಯಕ್ಕೆ ಕಳುಹಿಸಲಾಯಿತು. ಆದರೆ ಶ್ವಾನ ನುಗ್ಗಿಗೆ ಅತಿಯಾದ ತೂಕದಿಂದಾಗಿ ನಡೆಯಲು ಕಷ್ಟವಾಯಿತು. ಅತಿಯಾದ ತೂಕದಿಂದ ನಾಯಿಯ ಆರೋಗ್ಯದ ಮೇಲೆ ತೀವ್ರವಾಗಿ ಪರಿಣಾಮ ಬೀರಿದೆ. ಪರೀಕ್ಷೆಯ ವೇಳೆ ನುಗ್ಗಿ 53.7 ಕೆಜಿ ತೂಕವನ್ನು ಹೊಂದಿರುವುದು ಬಯಲಾಗಿದೆ. ಸ್ಟೆತಸ್ಕೋಪ್ನಿಂದ ಅದರ ಹೃದಯ ಬಡಿತವನ್ನು ಕೇಳಲು ಅಸಾಧ್ಯವಾಗಿತ್ತು. ನಾಯಿಯು ಕಾಂಜಂಕ್ಟಿವಿಟಿಸ್, ಅತಿಯಾಗಿ ಬೆಳೆದ ಉಗುರುಗಳು, ಬಹು ಚರ್ಮದ ಟ್ಯಾಗ್ಗಳಿಂದ ಬಳಲುತ್ತಿದೆ ಮತ್ತು ಅದರ ತೂಕದಿಂದಾಗಿ ಚಲಿಸಲು ಮತ್ತು ಉಸಿರಾಡಲು ಕಷ್ಟವಾಗಿತ್ತು. SPCA ಆರೈಕೆಯಲ್ಲಿದ್ದಾಗ ನುಗ್ಗಿ 8.9 ಕೆಜಿ ತೂಕವನ್ನು ಕಳೆದುಕೊಳ್ಳುವಲ್ಲಿ ಯಶಸ್ವಿಯಾಯಿತು. ಆದರೆ ಅದರ ಯಕೃತ್ತಿನಲ್ಲಿ ತೀವ್ರವಾದ ರಕ್ತಸ್ರಾವದಿಂದ ಇದ್ದಕ್ಕಿದ್ದಂತೆ ಪ್ರಾಣಬಿಟ್ಟಿದೆ. ಸದ್ಯ ಮಹಿಳೆಗೆ ಪರಿಹಾರದ ಜೊತೆಗೆ ಎರಡು ತಿಂಗಳ ಜೈಲು ಶಿಕ್ಷೆಯನ್ನು ವಿಧಿಸಲಾಗಿದೆ. ಅಲ್ಲದೇ 1 ವರ್ಷದವರೆಗೆ ನಾಯಿ ಸಾಕದಂತೆ ನಿಷೇಧ ಹೇರಲಾಗಿದೆ.

## ಭಾರತಕ್ಕೆ ಮಾಲ್ಡೀವ್ಸ್ ಅಧ್ಯಕ್ಷ ಅಭಿನಂದನೆ

**ಮಾಲೆ:** ಸಾಲ ಮರುಪಾವತಿಗೆ ಆರ್ಥಿಕ ಬೆಂಬಲ ನೀಡಿದ ಭಾರತ ಸರಕಾರಕ್ಕೆ ಮಾಲ್ಡೀವ್ಸ್ ಸರಕಾರವು ಅಭಿನಂದನೆ ಸಲ್ಲಿಸಿದೆ. ಅಲ್ಲದೆ, ಮಾಲ್ಡೀವ್ಸ್ ಜತೆಗೆ ಭಾರತವು ಮುಕ್ತ



ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಬಹುದು ಎಂಬ ಆಶಾಭಾವವನ್ನು ವ್ಯಕ್ತಪಡಿಸಿದೆ. ಈ ಕುರಿತು ಮಾಹಿತಿ ನೀಡಿರುವ ಮಾಲ್ಡೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಜು, ಮಾಲ್ಡೀವ್ಸ್ನ ಸಾಲ ಮರುಪಾವತಿ ಸುಲಭಗೊಳಿಸುವ ನಿಟ್ಟಿನಲ್ಲಿ ಭಾರತ ಮತ್ತು ಚೀನಗಳು ನೀಡುತ್ತಿರುವ ಆರ್ಥಿಕ ಬೆಂಬಲಕ್ಕೆ ಅಭಿನಂದನೆ. ಈ ಎರಡೂ ರಾಷ್ಟ್ರಗಳೊಂದಿಗೆ ಮುಕ್ತ ವ್ಯಾಪಾರ ಒಪ್ಪಂದದ ನಿರೀಕ್ಷೆಯನ್ನು ಮಾಲ್ಡೀವ್ಸ್ ಇಟ್ಟುಕೊಂಡಿದೆ ಎಂದಿದ್ದಾರೆ.

# ಪಾಂಟೂನ್ ದೋಣಿ ಮುಳುಗಿ 3 ಮಂದಿ ಸಾವು



**ನ್ಯೂಯಾರ್ಕ್:** ಅಮೆರಿಕದ ಉತ್ತರ ಅರಿಝೋನಾ ರಾಜ್ಯದ ಪೊವೆಲ್ ಸರೋವರದಲ್ಲಿ ಪಾಂಟೂನ್ ದೋಣಿ ಮಗುಚಿಬಿದ್ದು ಇಬ್ಬರು ಮಕ್ಕಳ ಸಹಿತ ಮೂವರು ಸಾವನ್ನಪ್ಪಿದ್ದು ಇತರ ಇಬ್ಬರು ಗಾಯಗೊಂಡಿರುವುದಾಗಿ ವರದಿಯಾಗಿದೆ.

ಪಾಂಟೂನ್ ಎಂಬುದು ಚಪ್ಪಟೆ ತಳದ ದೋಣಿಯಾಗಿದ್ದು ಸಾಮಾನ್ಯವಾಗಿ ಟೊಳ್ಳಾದ ಕೊಳವೆಗಳ ಸಹಾಯದಿಂದ ತೇಲುತ್ತದೆ.

ವಿಸ್ತಾರವಾದ ಕೋಣೆಗಳು, ಸ್ಟ್ಯಾಂಡ್ ಅಪ್ ಬಾರ್ಗಳು, ಸನ್ಶ್ಯಾಡ್(ನೆರಳಿನ ವ್ಯವಸ್ಥೆ)ಗಳಿರುವ ವಿಸ್ತಾರವಾದ ಡೆಕ್ ಅನ್ನು ಈ ದೋಣಿಗಳು ಹೊಂದಿರುತ್ತವೆ.

ಖಾಸಗಿ ಒಡೆತನದ 25 ಅಡಿ ಉದ್ದದ ದೋಣಿ ಸರೋವರದ ಅಲೆಗಳ ಹೊಡೆತಕ್ಕೆ ಸಿಲುಕಿ ಮಗುಚಿದೆ. ಅರಿಝೋನಾ - ಉತಾಹ್ ಗಡಿಯ ಸನಿಹದ ನವಾಜೊ ಕೊಳ್ಳದ ಬಳಿ ದುರಂತ ನಡೆದಿದೆ ಎಂದು ನ್ಯಾಷನಲ್ ಪಾರ್ಕ್ ಸರ್ವಿಸ್ ಅಧಿಕಾರಿಗಳು ಹೇಳಿದ್ದಾರೆ. ತಕ್ಷಣ ರಕ್ಷಣಾ ತಂಡದ ದೋಣಿ ಸ್ಥಳಕ್ಕೆ ಧಾವಿಸಿದ್ದು ಮುಳುಗಿದ್ದ ದೋಣಿಯ ಒಂದು ಭಾಗದ ಮೇಲೆ ನೇತಾಡುತ್ತಿದ್ದ 11 ಪ್ರಯಾಣಿಕರನ್ನು ರಕ್ಷಿಸಿದ್ದು 72 ವರ್ಷದ ವ್ಯಕ್ತಿ ಹಾಗೂ 4 ವರ್ಷದ ಇಬ್ಬರು ಬಾಲಕರು ಮೃತಪಟ್ಟಿದ್ದಾರೆ. ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು ಇದರಲ್ಲಿ ಬಾಲಕಿಯ ಸ್ಥಿತಿ ಗಂಭೀರವಾಗಿದೆ ಎಂದು ವರದಿಯಾಗಿದೆ.

# ಉಕ್ರೇನ್ ವಿರುದ್ಧ ಹೋರಾಡಲು ರಷ್ಯಾ ಸೇನೆ ಕಳುಹಿಸಿದ್ದ ಭಾರತೀಯ ಯುವಕ ಸಾವು



**ಉಕ್ರೇನ್:** ಉಕ್ರೇನ್ ಪಡೆಗಳ ವಿರುದ್ಧ ಮುಂಚೂಣಿಯಲ್ಲಿ ಹೋರಾಡಲು ರಶ್ಯಾ ಸೇನೆ ಕಳುಹಿಸಿದ್ದ ಭಾರತ ಮೂಲದ ಹರ್ಯಾಣದ 22 ವರ್ಷದ ಯುವಕ ಮೃತಪಟ್ಟಿದ್ದಾನೆ ಎಂದು ಆತನ ಕುಟುಂಬ ಮಾಹಿತಿ ನೀಡಿದೆ.

ಹರ್ಯಾಣದ ಕೈಥಲ್ ಜಿಲ್ಲೆಯ ಮಾಟೌರ್ ಗ್ರಾಮದ ರವಿ ಮೌನ್ ಅವರು ಮೃತಪಟ್ಟಿರುವುದನ್ನು ಮಾಸ್ಕೊದಲ್ಲಿರುವ ಭಾರತೀಯ ರಾಯಭಾರಿ ಕಚೇರಿ ದೃಢಪಡಿಸಿದೆ ಎಂದು ಆತನ ಸಹೋದರ ಅಜಯ್ ಮೌನ್ ತಿಳಿಸಿದ್ದಾರೆ.

ಸಾರಿಗೆ ಕೆಲಸಕ್ಕೆ ನೇಮಕವಾದ ಬಳಿಕ ರವಿ ಮೌನ್ ಜನವರಿ 13ರಂದು ರಶ್ಯಕ್ಕೆ ತೆರಳಿದ್ದರು. ಏಜೆಂಟ್ ಓರ್ವ ಆತನನ್ನು ಸಾರಿಗೆ ಕೆಲಸಕ್ಕೆ ರಶ್ಯಕ್ಕೆ ಕಳುಹಿಸಿದ್ದ. ಆದರೆ ಆತನನ್ನು ಅಲ್ಲಿ ಸೇನೆಗೆ ನಿಯೋಜಿಸಲಾಗಿತ್ತು ಎಂದು ಅಜಯ್ ಮೌನ್ ಹೇಳಿದ್ದಾರೆ.

ತನ್ನ ಸಹೋದರ ಕುರಿತು ಮಾಹಿತಿ ನೀಡುವಂತೆ ಅಜಯ್ ಮೌನ್ ಜುಲೈ 21ರಂದು ಭಾರತದ ರಾಯಭಾರ ಕಚೇರಿಗೆ ಪತ್ರ ಬರೆದಿದ್ದರು. ಆದರೆ, ರವಿ ಮೌನ್ ಸಾವನ್ನಪ್ಪಿದ್ದಾರೆ ಎಂದು ರಾಯಭಾರ ಕಚೇರಿ ತಿಳಿಸಿತು ಎಂದು ಅವರು ಹೇಳಿದ್ದಾರೆ. ಮೃತದೇಹವನ್ನು ಗುರುತಿಸಲು ತಮ್ಮ ಡಿಎನ್ಎ ಪರೀಕ್ಷೆಯ ವರದಿ ಕಳುಹಿಸಿಕೊಡುವಂತೆ ಭಾರತದ ರಾಯಭಾರ ಕಚೇರಿ ನಮಗೆ ಸೂಚಿಸಿದೆ ಎಂದು ಕುಟುಂಬ ಹೇಳಿದೆ. ಸೇನೆಯಲ್ಲಿರುವ ಭಾರತೀಯ ಪ್ರಜೆಗಳನ್ನು ಆದಷ್ಟು ಬೇಗ ಬಿಡುಗಡೆ ಮಾಡುವಂತೆ ಹಾಗೂ ಹಿಂದೆ ಕಳುಹಿಸುವಂತೆ ಭಾರತದ ಬೇಡಿಕೆಗೆ ರಶ್ಯ ಒಪ್ಪಿಕೊಂಡ ಕೆಲವು ದಿನಗಳ ಬಳಿಕ ಕುಟುಂಬ ಈ ಪ್ರತಿಪಾದನೆ ಮಾಡಿದೆ.

ಸಂಜೆ ಮುಗಿಲು

Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

# ಮತ್ತೆ 'ಕಾಂತಾರ 1' ಶೂಟಿಂಗ್ ಶುರು ಮಾಡಿದ ರಿಷಬ್ ಶೆಟ್ಟಿ



ಮಳೆ ಅವಾಂತರದ ನಂತರ ಮತ್ತೆ 'ಕಾಂತಾರ ಚಾಪ್ಟರ್ 1' ಚಿತ್ರೀಕರಣವನ್ನು ರಿಷಬ್ ಶೆಟ್ಟಿ ಶುರು ಮಾಡಿದ್ದಾರೆ. ಪ್ಯಾನ್ ಇಂಡಿಯಾ ಸಿನಿಮಾ ಶೂಟಿಂಗ್‌ಗೆ ಮತ್ತೆ ಚಾಲನೆ ಸಿಕ್ಕಿದೆ.

'ಕಾಂತಾರ' ಸಿನಿಮಾ ಸಕ್ಸಸ್ ನಂತರ 'ಕಾಂತಾರ ಚಾಪ್ಟರ್ 1' ಕೂಡ ಉತ್ತಮ ಕಥೆಯೊಂದಿಗೆ ಅದ್ದೂರಿಯಾಗಿ ತರಲು ತೆರೆಮರೆಯಲ್ಲಿ ಕೆಲಸ ನಡೆಯುತ್ತಿದೆ. ಇತ್ತೀಚೆಗೆ ಮಳೆಯ ಅವಾಂತರದಿಂದ 'ಕಾಂತಾರ 1' ಸಿನಿಮಾದ ಚಿತ್ರೀಕರಣಕ್ಕೆ ಬ್ರೇಕ್ ಕೊಟ್ಟಿದ್ದರು. ಮಳೆ ಕಮ್ಮಿಯಾದ ಹಿನ್ನೆಲೆ ಮತ್ತೆ ಶೂಟಿಂಗ್ ಭರದಿಂದ ನಡೆಯುತ್ತಿದೆ.

ಅಂದಹಾಗೆ, 'ಕಾಂತಾರ ಚಾಪ್ಟರ್ 1' ಸಿನಿಮಾದ ರಿಷಬ್ ಫಸ್ಟ್ ಲುಕ್‌ಗೆ ಅಭಿಮಾನಿಗಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ವಿಭಿನ್ನ ಅವತಾರದಲ್ಲಿ ರಿಷಬ್ ಮಿಂಚಿದ್ದರು. ಹಾಗಾಗಿ ಈ ಸಿನಿಮಾದ ಮೇಲೆ ಫ್ಯಾನ್ಸ್‌ಗೆ ಭಾರೀ ನಿರೀಕ್ಷೆಯಿದೆ. ರಿಷಬ್ ನಟಿಸಿ, ನಿರ್ದೇಶನ ಮಾಡುತ್ತಿರುವ ಈ ಚಿತ್ರಕ್ಕೆ ಹೊಂಬಾಳೆ ಸಂಸ್ಥೆ ಬಂಡವಾಳ ಹೂಡುತ್ತಿದೆ. ಈ ವರ್ಷದ ಅಂತ್ಯದಲ್ಲಿ ಸಿನಿಮಾ ರಿಲೀಸ್ ಆಗಲಿದೆ.



# ರಿವೀಲ್ ಆಯ್ತು 'ಕೆಡಿ' ಲುಕ್

ಬಾಲಿವುಡ್ ನಟ ಸಂಜಯ್ ದತ್ 'ಕೆಜಿಎಫ್ 2' ಚಿತ್ರದ ಸಕ್ಸಸ್ ನಂತರ ಕನ್ನಡದ ಸಿನಿಮಾಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡ್ತಿದ್ದಾರೆ. ಹೀಗಿರುವಾಗ ಅವರ ಹುಟ್ಟುಹಬ್ಬದ ಪ್ರಯುಕ್ತ 'ಕೆಡಿ' ಸಿನಿಮಾದ ಲುಕ್ ರಿವೀಲ್ ಆಗಿದೆ. 'ಧಾಕ್ ದೇವ'ನಾಗಿ ಅಧೀರ ಖಡಕ್ ಆಗಿ ಕಾಣಿಸಿಕೊಂಡಿದ್ದಾರೆ.

ಧ್ರುವ ಸರ್ಜಾ ನಟನೆಯ ಪ್ಯಾನ್ ಇಂಡಿಯಾ 'ಕೆಡಿ' ಸಿನಿಮಾದಲ್ಲಿ ಸಂಜಯ್ ದತ್ ಕೂಡ ಪ್ರಮುಖ ಪಾತ್ರದಲ್ಲಿ ಬಣ್ಣ ಹಚ್ಚಿದ್ದಾರೆ. ತಲೆಗೆ ಪೊಲೀಸ್ ಹ್ಯಾಟ್ ಧರಿಸಿ ವಿಭಿನ್ನ ಲುಕ್‌ನಲ್ಲಿ ನಟ ಧಾಕ್ ದೇವನಾಗಿ ಮಿಂಚಿದ್ದಾರೆ. ನಟನ ಲುಕ್‌ಗೆ ಅಭಿಮಾನಿಗಳಿಂದ ಭಾರೀ ಮೆಚ್ಚುಗೆ ವ್ಯಕ್ತವಾಗಿದೆ.

ಅಂದಹಾಗೆ, 70ರ ದಶಕದ ಗ್ಯಾಂಗ್‌ಸ್ಟರ್ ಕುರಿತ ನೈಜ ಕಥೆಯನ್ನೇ ಸಿನಿಮಾ ರೂಪದಲ್ಲಿ ತಂದಿದ್ದಾರೆ ನಿರ್ದೇಶಕ ಜೋಗಿ ಪ್ರೇಮ್. ರೆಟ್ರೋ ಲುಕ್‌ನಲ್ಲಿ ಈ 'ಕೆಡಿ' ಚಿತ್ರ ಮೂಡಿ ಬಂದಿದೆ.ಮಲ್ಟಿ ಸ್ಟಾರ್‌ಗಳು ಇರುವ ಈ ಸಿನಿಮಾ ಭಿನ್ನವಾಗಿ ಮೂಡಿ ಬಂದಿದೆ.

ಧ್ರುವ ಸರ್ಜಾ, ಸಂಜಯ್ ದತ್ ಜೊತೆ ರೀಷ್ಮಾ ನಾಣಯ್ಯ, ರವಿಚಂದ್ರನ್, ಶಿಲ್ಪಾ ಶೆಟ್ಟಿ, ನೋರಾ ಫತೇಹಿ ಸೇರಿದಂತೆ ಅನೇಕರು ನಟಿಸಿದ್ದಾರೆ. ಬಹುಭಾಷೆಗಳಲ್ಲಿ ಚಿತ್ರ ಮೂಡಿ ಬಂದಿದ್ದು, ಡಿಸೆಂಬರ್‌ನಲ್ಲಿ ರಿಲೀಸ್ ಆಗಲಿದೆ.



ಧ್ರುವ ಸರ್ಜಾ ಮುಂದೆ 'ಧಾಕ್ ದೇವ'ನಾಗಿ ಬಂದ ಸಂಜಯ್ ದತ್





# ಒಲಂಪಿಕ್ಸ್‌ಗಾಗಿ ಪ್ಯಾರಿಸ್‌ನಲ್ಲಿ ಮೆಗಾ ಫ್ಯಾಮಿಲಿ

ಚಿರಂಜೀವಿ ಅವರು ಪಿವಿ ಸಿಂಧು ಜೊತೆ ಪೋಸ್ ಕೊಟ್ಟಿದ್ದಾರೆ. ಈ ಫೋಟೋಗಳು ಸೋಶಿಯಲ್ ಮೀಡಿಯಾದಲ್ಲಿ ಸಖತ್ ವೈರಲ್ ಆಗಿದೆ. ಪಿವಿ ಸಿಂಧುಗೆ ಚಿರು ಕುಟುಂಬ ಆಲ್ ದಿ ಬೆಸ್ಟ್ ಹೇಳಿದೆ. ಅಲ್ಲದೆ, ದಕ್ಷಿಣದ ಭಾರತದವರಿಗೆ ಉಪ್ಪಿನಕಾಯಿ ನೀಡಿದ್ದಾರೆ.

ಸದ್ಯ ಪ್ಯಾರಿಸ್ ನಲ್ಲಿ 2024ನೇ ಸಾಲಿನ ಒಲಂಪಿಕ್ಸ್ ನಡೆಯುತ್ತಿದೆ. ಈ ಒಲಂಪಿಕ್ ಕೂಟದಲ್ಲಿ ಅನೇಕ ಭಾರತೀಯರು ಭಾಗಿ ಆಗಿದ್ದಾರೆ. ಅವರಿಗೆ ಚಿರಂಜೀವಿ ಕುಟುಂಬದವರು ಶುಭಾಶಯ ತಿಳಿಸಿದ್ದಾರೆ.

ಚಿರಂಜೀವಿ ಅವರು ಪಿವಿ ಸಿಂಧು ಜೊತೆ ಪೋಸ್ ಕೊಟ್ಟಿದ್ದಾರೆ. ಈ ಫೋಟೋಗಳು ಸೋಶಿಯಲ್ ಮೀಡಿಯಾದಲ್ಲಿ ಸಖತ್ ವೈರಲ್ ಆಗಿದೆ. ಪಿವಿ ಸಿಂಧುಗೆ ಚಿರು ಕುಟುಂಬ ಆಲ್ ದಿ ಬೆಸ್ಟ್ ಹೇಳಿದೆ. ಸಿಂಧು ಅವರು ಹೈದರಾಬಾದ್ ನವರು. ಚಿರಂಜೀವಿ ಕುಟುಂಬ ಕೂಡ ಹೈದರಾಬಾದ್ ನಲ್ಲೇ ವಾಸವಾಗಿದೆ. ಹೀಗಾಗಿ, ಇವರ ಮಧ್ಯೆ ಸಹಜವಾಗಿಯೇ ಪರಿಚಯ ಬೆಳೆದಿದೆ. ಸಿಂಧು ಅವರು ಭಾರತವನ್ನು ಪ್ರತಿನಿಧಿಸುತ್ತಿದ್ದಾರೆ.

ಚಿರಂಜೀವಿ ಕುಟುಂಬದವರು ಇಲ್ಲಿಂದ ಉಪ್ಪಿನಕಾಯಿ, ಪುಳಿಯೋಗರೆ, ಉಪ್ಪಿಟ್ಟು, ರಸಂ ಮಿಕ್ಸ್ ಗಳನ್ನು ಪ್ಯಾರಿಸ್‌ಗೆ ಕೊಂಡೊಯ್ದಿದ್ದಾರೆ. ಅಲ್ಲಿನ ಭಾರತೀಯ ಅದರಲ್ಲೂ ದಕ್ಷಿಣ ಭಾರತದ ಆಟಗಾರರಿಗೆ ಅವುಗಳನ್ನೆಲ್ಲ ಉಚಿತವಾಗಿ ನೀಡಿದ್ದಾರೆ. ಪ್ಯಾರಿಸ್ ನ ಬೀದಿಗಳಲ್ಲಿ ಚಿರಂಜೀವಿ ಕುಟುಂಬ ಸಮಯ ಕಳೆದಿದೆ. ಆ ಸಂದರ್ಭದ ಫೋಟೋಗಳನ್ನು ಇವರು ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಳ್ಳುತ್ತಿದ್ದಾರೆ.



ಚಿರಂಜೀವಿ ಕುಟುಂಬದ ಜೊತೆ ಪೋಸ್ ಕೊಟ್ಟ ಪಿವಿ ಸಿಂಧು





## ಮೊದಲ ಪಂದ್ಯ ಗೆದ್ದ ಲಕ್ಷ್ಯಗೆ ಶಾಕ್

# ಗೆದ್ದರೂ ಪಂದ್ಯ ಡಿಲೀಟ್

ಒಲಿಂಪಿಕ್ಸ್‌ನ ಬ್ಯಾಡ್ಮಿಂಟನ್ ಸಿಂಗಲ್ಸ್‌ನ ಗುಂಪು ಹಂತದ ಪಂದ್ಯದಲ್ಲಿ ಲಕ್ಷ್ಯ ಸೇನ್ ಶುಭಾರಂಭ ಮಾಡಿದ್ದರೂ ಆ ಗೆಲುವನ್ನು 'ಡಿಲೀಟ್' ಮಾಡಲಾಗಿದೆ. ಶನಿವಾರ ಗ್ವಾಟೆಮಾಲಾದ ಆಟಗಾರ ಕಾರ್ಡನ್ ಕೆವಿನ್ ಅವರನ್ನು ಲಕ್ಷ್ಯ ಸೇನ್ ನೇರ ಸೆಟ್ ಗಳಿಂದ ಸೋಲಿಸಿದ್ದರು. ಮೊದಲ ಸೆಟ್ ಅನ್ನು 21-8 ರಿಂದ ಸುಲಭವಾಗಿ ಗೆದ್ದುಕೊಂಡ ಸೇನ್ ಎರಡನೇ ಸೆಟ್ ನಲ್ಲಿ ಕಠಿಣ ಹೋರಾಟ ಮಾಡಿ ಅಂತಿಮವಾಗಿ 22-20 ರಿಂದ ಗೆದ್ದು ಬೀಗಿದ್ದರು.

ಈ ಪಂದ್ಯವನ್ನು ಗೆದ್ದರೂ ಲಕ್ಷ್ಯ ಸೇನ್ ಗೆಲುವನ್ನು ಟೂರ್ನಿಯಿಂದ ಡಿಲೀಟ್ ಮಾಡಲಾಗಿದೆ. ಎಡ ಮೊಣಕೈ ಗಾಯದಿಂದಾಗಿ ಕಾರ್ಡನ್ ನಡೆಯುತ್ತಿರುವ ಪ್ಯಾರಿಸ್ ಒಲಿಂಪಿಕ್ಸ್ ನಿಂದ ಹಿಂದೆ ಸರಿದಿದ್ದರಿಂದ ಬಿಡಬ್ಲ್ಯುಎಫ್ ನಿಯಮಗಳಿಗೆ ಅನುಸಾರವಾಗಿ, ಲಕ್ಷ್ಯ ಮತ್ತು ಕಾರ್ಡನ್ ನಡುವಿನ ಪಂದ್ಯವನ್ನು ಡಿಲೀಟ್ ಮಾಡಲಾಗಿದೆ.

ಲಕ್ಷ್ಯ ಅವರ ಶ್ರೇಯಾಂಕವು ಗುಂಪು ಐ ಪಂದ್ಯಗಳ ಫಲಿತಾಂಶಗಳನ್ನು ಆಧರಿಸಿ ನಿರ್ಧಾರವಾಗಲಿದೆ. ಇಂದು ಜೂಲಿಯನ್ ಕಾರ್ರಾಗಿ ವಿರುದ್ಧ ಲಕ್ಷ್ಯ ಸೇನ್ ಆಡಲಿದ್ದಾರೆ.



**ಡಿಲೀಟ್ ಮಾಡಿದ್ದು ಯಾಕೆ :** ಬಿಡಬ್ಲ್ಯುಎಫ್ ನಿಯಮದ ಪ್ರಕಾರ ಲೀಗ್‌ನಲ್ಲಿದ್ದ ಓರ್ವ ಆಟಗಾರ ಮಧ್ಯದಲ್ಲೇ ಹಿಂದಕ್ಕೆ ಸರಿದರೆ ಆಟಗಾರ ಆಡಿದ ಮತ್ತು ಆಡಲಿರುವ ಎಲ್ಲಾ ಪಂದ್ಯಗಳನ್ನು ರದ್ದು ಮಾಡಲಾಗುತ್ತದೆ. ಲಕ್ಷ್ಯ ಸೇನ್ ಇರುವ ಎಲ್ ಗುಂಪಿನಲ್ಲಿ ನಾಲ್ವರು ಆಟಗಾರಿದ್ದರು. ಕಾರ್ಡನ್ ಕೆವಿನ್ ಆಟದಿಂದ ಹಿಂದೆ ಸರಿದ ಕಾರಣ ಈಗ ಲಕ್ಷ್ಯ ಸೇನ್ ಭವಿಷ್ಯ ಬೆಲ್ಜಿಯಂನ ಜೋಯಲ್ ಕ್ಯಾರಾಗಿ ಮತ್ತು ಇಂಡೋನೇಷ್ಯಾದ ಜೊನಾಟನ್ ಕ್ರಿಸ್ಟಿ ವಿರುದ್ಧ ನಡೆಯುವ ಪಂದ್ಯಗಳ ಮೇಲೆ ನಿಂತಿದೆ.

ಗುಂಪಿನಲ್ಲಿ ಅಗ್ರಸ್ಥಾನ ಪಡೆಯಲು ಉಳಿದ ಎಲ್ಲಾ 2 ಪಂದ್ಯಗಳನ್ನು ಗೆಲ್ಲಬೇಕು. ಇಂಡೋನೇಷ್ಯಾದ ಜೊನಾಟನ್ ಕ್ರಿಸ್ಟಿ ಅವರು ಮೂರನೇ ಶ್ರೇಯಾಂಕ ಹೊಂದಿದ್ದು ಚಿನ್ನದ ಪದಕ ಗೆಲ್ಲುವ ನೆಚ್ಚಿನವರಲ್ಲಿ ಒಬ್ಬರಾಗಿದ್ದಾರೆ.

22 ವರ್ಷದ ಲಕ್ಷ್ಯ ಸೇನ್ ಮೊದಲ ಬಾರಿಗೆ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದಾರೆ. ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಕಾಮನ್ ವೆಲ್ತ್ ಕ್ರೀಡಾಕೂಟದ ಚಿನ್ನದ ಪದಕ ಮತ್ತು ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಕಂಚಿನ ಪದಕ ಗೆದ್ದಿದ್ದಾರೆ. 2022 ರಲ್ಲಿ ಥಾಮಸ್ ಕಪ್ ಗೆದ್ದ ಐತಿಹಾಸಿಕ ಭಾರತೀಯ ತಂಡದ ಭಾಗವಾಗಿದ್ದರು ಮತ್ತು ಆಲ್-ಇಂಗ್ಲೆಂಡ್ ಓಪನ್‌ನ ಫೈನಲ್‌ಗೆ ಅರ್ಹತೆ ಪಡೆದ ನಾಲ್ಕು ಭಾರತೀಯ ಪುರುಷರಲ್ಲಿ ಒಬ್ಬರಾಗಿದ್ದಾರೆ.

## ರಾಮನಗರ ಜಿಲ್ಲೆ ಹೆಸರನ್ನು ಮರು ಸ್ಥಾಪನೆ ಮಾಡೇ ಮಾಡ್ತೀವಿ

# ಡಿಕೆಶಿಗೆ ನಿಖಿಲ್ ಸವಾಲ್

**ಬೆಂಗಳೂರು:** ರಾಮನಗರ ಜಿಲ್ಲೆ ಹೆಸರನ್ನ ಮರು ಸ್ಥಾಪನೆ ಮಾಡೇ ಮಾಡುತ್ತೇವೆ ಎಂದು ಡಿಸಿಎಂ ಡಿಕೆ ಶಿವಕುಮಾರ್‌ಗೆ ಜೆಡಿಎಸ್ ಯುವ ಘಟದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮರು ಸವಾಲು ಎಸೆದಿದ್ದಾರೆ.

ಬೆಂಗಳೂರು ದಕ್ಷಿಣ ಜಿಲ್ಲೆ ಹೆಸರು ಬದಲಾವಣೆ ಮಾಡಲು ಕುಮಾರಸ್ವಾಮಿ ಹಣೆಯಲ್ಲೂ ಬರೆದಿಲ್ಲ ಎಂಬ ಡಿಕೆ ಶಿವಕುಮಾರ್‌ಗೆ ಪ್ರತಿಕ್ರಿಯೆ ನೀಡಿದ ಅವರು, ಕುಮಾರಸ್ವಾಮಿ ಹಣೆಬರಹ ಬರೆಯೋದು ಭಗವಂತ ಮತ್ತು ಏಳೂವರೆ ಕೋಟಿ ಜನತೆ. ರಾಜ್ಯದ ಜನತೆ ಕುಮಾರಸ್ವಾಮಿ ಹಣೆಬರಹ ಬರೆಯುತ್ತಾರೆ. ಕಾದು ನೋಡೋಣ ಭಗವಂತ ಯಾರ್ ಯಾರ್ ಹಣೆಬರಹ ಏನು ಬರೆಯುತ್ತಾನೆ. ಈಗಾಗಲೇ ಏನೇನು ಬರೆದಿದ್ದಾನೆ ಅಂತ ಮುಂದೆ ಹೋಗ್ತಾ ಹೋಗ್ತಾ ಗೊತ್ತಾಗುತ್ತದೆ ಎಂದು ಹೇಳಿದರು.

ನಾವು ಯಾವತ್ತು ಡಿಕೆ ಶಿವಕುಮಾರ್ ಅವರನ್ನ ನೆನಪು ಮಾಡಿಕೊಳ್ಳೊಲ್ಲ. ಆದರೆ ಡಿಕೆ ಶಿವಕುಮಾರ್ ಹಾಗೆ ಹೇಳ್ತಾರೆ. ನೆನಪು ಮಾಡಿಕೊಂಡರೂ ನಾವು ಅವರಿಗೆ ಒಳ್ಳೆಯದಾಗಲಿ ಅಂತ ಹೇಳುತ್ತೇವೆ.



ರಾಜಕೀಯವಾಗಿ ಅವರು ತೆಗೆದುಕೊಳ್ತಿರೋ ನಡೆಗಳು ಸರಿಯಲ್ಲ ಎಂದರು.

ಬೆಂಗಳೂರು ದಕ್ಷಿಣ ಜಿಲ್ಲೆ ಅಂತ ಹೆಸರು ಬದಲಾವಣೆ ಮಾಡಿದರೆ ಅನೇಕ ತಾಂತ್ರಿಕ ಸಮಸ್ಯೆ ಆಗಲಿವೆ. ರೆವಿನ್ಯೂ ರೆಕಾರ್ಡ್, ಸರ್ಕಾರದ ದಾಖಲೆಗಳು 5 ತಾಲೂಕುಗಳಲ್ಲಿ ಬದಲಾವಣೆ ಆಗಬೇಕು.ಪ್ರತಿನಿತ್ಯ ಜನ ತಾಲೂಕು ಕಚೇರಿಗೆ ಓಡಾಬೇಕು. ಓಟರ್ ಐಡಿ, ಗ್ಯಾಸ್ ಬಿಲ್ ಅಡ್ರೆಸ್ ಇರಬಹುದು. ಇವೆಲ್ಲ ಸಮಸ್ಯೆಗಳಾಗುತ್ತವೆ. ಅಷ್ಟು ಸುಲಭವಾಗಿ ಹೆಸರು ಬದಲಾವಣೆ ಮಾಡೋದು ಸಾಧ್ಯವಿಲ್ಲ ಅಂತ ತಿಳಿಸಿದರು.

2006 ರಲ್ಲಿ ಕುಮಾರಸ್ವಾಮಿ ಚಿಕ್ಕಬಳ್ಳಾಪುರ, ರಾಮನಗರ ಅಂತ ಜಿಲ್ಲೆ ಮಾಡಿದ್ರು. ಅವತ್ತು ಯಾರೂ ವಿರೋಧ ಮಾಡದೇ ಎಲ್ಲರೂ ಸಹಮತ ವ್ಯಕ್ತಪಡಿಸಿದರು.ಇವತ್ತು ಈ ರಾಮನ ಹೆಸರು ಅಳಿಸುವ ಪ್ರಯತ್ನವನ್ನ ಕಾಂಗ್ರೆಸ್ ಸರ್ಕಾರ ಮಾಡ್ತಿದೆ. ಇವರನ್ನು ಅ ರಾಮನೇ ನೋಡಿಕೊಳ್ತಾನೆ. ಮುಂದಿನ ದಿನಗಳಲ್ಲಿ ರಾಮನಗರದ ಇತಿಹಾಸ, ರಾಮನ ಇತಿಹಾಸ ಯಾರಿಗೂ ಅಳಿಸುವ ಶಕ್ತಿ ಇಲ್ಲ ಎಂದು ತಿರುಗೇಟು ನೀಡಿದರು.

ಕಾಂಗ್ರೆಸ್ ಸರ್ಕಾರ ಇವತ್ತು ಏನು ಬೇಕಾದರೂ ತೀರ್ಮಾನ ತೆಗೆದುಕೊಳ್ಳಲಿ. ಸರ್ಕಾರ ಅವರ ಕೈಯಲ್ಲಿ ಇದ್ದು ಆಡಳಿತ ನಡೆಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಭಗವಂತ, ರಾಜ್ಯದ ಜನತೆ ಕುಮಾರಸ್ವಾಮಿಗೆ ಶಕ್ತಿ ಕೊಡ್ತಾರೆ. ಆಗ ಮತ್ತೊಮ್ಮೆ ರಾಮನಗರ ಜಿಲ್ಲೆ ಹೆಸರು ಪ್ರತಿಷ್ಠಾಪನೆ ಮಾಡುತ್ತೇವೆ ಎಂದು ಡಿಕೆ ಶಿವಕುಮಾರ್‌ಗೆ ಸವಾಲ್ ಹಾಕಿದರು.

# ಮುಂದಿನ ಐಪಿಎಲ್‌ನಲ್ಲೂ ಮಹಿ ಕಣಕ್ಕಿಳಿಯೋದು ಫಿಕ್ಸ್

18ನೇ ಆವೃತ್ತಿಯ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿ ಹಲವು ಮಹತ್ವದ ಬೆಳವಣಿಗೆ ಸಾಕ್ಷಿಯಾಗಲಿದೆ. ದಿಗ್ಗಜ ಆಟಗಾರರು ಹರಾಜಿನಲ್ಲಿ ಇರಲಿದ್ದು, ಯಾವ ತಂಡವನ್ನ ಯಾರು ಪ್ರತಿನಿಧಿಸುತ್ತಾರೆ ಎಂಬುದರತ್ತ ಎಲ್ಲರ ಚಿತ್ತವಿದೆ.

16ನೇ ಆವೃತ್ತಿಯ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಿಂದಲೂ ಲೆಜೆಂಡ್ ಎಂ.ಎಸ್ ಧೋನಿ ಅವರ ನಿವೃತ್ತಿಯ ಸುದ್ದಿ ಸದ್ದು ಮಾಡುತ್ತಲೇ ಇದೆ. ನಿರೀಕ್ಷೆಯಂತೆ 2024ರ ಐಪಿಎಲ್ ಟೂರ್ನಿಯಲ್ಲಿ ಸಿಎಸ್‌ಕೆ ಪರ ನಾಯಕತ್ವ ಬಿಟ್ಟು ಆಡಿದ ಧೋನಿ, ಇದೀಗ 2025ರ ಆವೃತ್ತಿಯಲ್ಲೂ ಚೈನ್ನೈ ಸೂಪರ್ ಕಿಂಗ್ಸ್ ತಂಡದಲ್ಲಿ ಆಡಲಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ. ಈ ಬಗ್ಗೆ ಅಧಿಕೃತ ಮಾಹಿತಿಗಳು ಹೊರಬಂದಿಲ್ಲ. ಮುಂದೆ ಬಿಸಿಸಿಐ ನಿರ್ಧರಿಸುವ ರಿಟೇನರ್‌ಶಿಪ್ ನಿಯಮದ ಮೇಲೆ ನಿರ್ಧಾರವಾಗಲಿದೆ ಎಂದು ಹೇಳಲಾಗಿದೆ.

ಹೌದು. 2025ರ ಐಪಿಎಲ್ ಆವೃತ್ತಿಗಾಗಿ ಪ್ರಸಕ್ತ ವರ್ಷದಲ್ಲೇ ನಡೆಯಲಿರುವ ಐಪಿಎಲ್ ಮೆಗಾ ಹರಾಜು ಪ್ರಕ್ರಿಯೆ ಕುರಿತು ನಿರ್ಧಾರ ಕೈಗೊಳ್ಳಲಿದೆ. ಬಿಸಿಸಿಐ ಶೀಘ್ರದಲ್ಲೇ ಮುಂಬೈನಲ್ಲಿರುವ ತನ್ನ ಪ್ರಧಾನ ಕಚೇರಿಯಲ್ಲಿ ಐಪಿಎಲ್ ಫ್ರಾಂಚೈಸಿ ಮಾಲೀಕರೊಟ್ಟಿಗೆ ಸಭೆ ನಡೆಸಲಿದೆ. ಪ್ರತೀ ತಂಡವು ಎಷ್ಟು ಆಟಗಾರರನ್ನು ಉಳಿಸಿಕೊಳ್ಳಬೇಕು ಎಂಬುದನ್ನು ಸಭೆಯಲ್ಲಿ ನಿರ್ಧರಿಸಲಾಗುತ್ತದೆ. ಸದ್ಯದ ಬಿಸಿಸಿಐ



ನಿಯಮದ ಪ್ರಕಾರ ಒಂದು ಫ್ರಾಂಚೈಸಿ 4 ಆಟಗಾರರನ್ನು ಮಾತ್ರ ಉಳಿಸಿಕೊಳ್ಳಬಹುದು. ಆದ್ರೆ ಫ್ರಾಂಚೈಸಿಗಳು 8 ಆಟಗಾರರಿಗೆ ಬೇಡಿಕೆಯಿಟ್ಟಿವೆ ಒಂದು ವೇಳೆ ಬಿಸಿಸಿಐ 8 ಆಟಗಾರರನ್ನು ರಿಟೇನ್ ಮಾಡಿಕೊಳ್ಳಲು ಅವಕಾಶ ನೀಡಿದ್ರೆ, ಮಹಿ ಸಿಎಸ್ ಕೆನಲ್ಲೇ ಮುಂದುವರಿಯುವ ಸಾಧ್ಯತೆಯಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಎರಡು ವರ್ಷ ಹೊರತುಪಡಿಸಿ ಉದ್ಘಾಟನಾ ಆವೃತ್ತಿಯಿಂದಲೂ ಧೋನಿ ಸಿಎಸ್‌ಕೆ ತಂಡದ ಉಸಿರಾಗಿದ್ದಾರೆ. ಅಲ್ಲದೇ ಧೋನಿ ನಾಯಕತ್ವದಲ್ಲೇ ಚೆನ್ನೈ ತಂಡ 5 ಬಾರಿ ಚಾಂಪಿಯನ್ ಪಟ್ಟ ಮುಡಿಗೇರಿಸಿಕೊಂಡಿದೆ. ಈ ಬಾರಿ ಬಿಸಿಸಿಐ ನಾಲ್ಕಕ್ಕಿಂತ ಹೆಚ್ಚು ಆಟಗಾರರನ್ನ ಉಳಿಸಿಕೊಳ್ಳಲು ಅನುಮತಿ ನೀಡಿದ್ರೆ, ಮಹಿ ಚೆನ್ನೈ ಸೂಪರ್ ಕಿಂಗ್ಸ್ ಪರ 2025ರ ಐಪಿಎಲ್ ಆವೃತ್ತಿಯಲ್ಲೂ ಕಣಕ್ಕಿಳಿಯಲಿದ್ದಾರೆ ಎಂದು ವರದಿಗಳು ಹೇಳಿವೆ.

# ಗೋಕರ್ಣ ಮಹಾಬಲೇಶ್ವರ ದೇವಸ್ಥಾನ ಸಮಿತಿ ರಚನೆಗೆ ಸುಪ್ರೀಂ ಗ್ರೀನ್ ಸಿಗ್ನಲ್

**ಬೆಂಗಳೂರು:** ನಿವೃತ್ತ ನ್ಯಾಯಮೂರ್ತಿ ಶ್ರೀಕೃಷ್ಣ ನೇತೃತ್ವದ ಸಮಿತಿಯ ವರದಿಯನ್ನು ಸುಪ್ರೀಂಕೋರ್ಟ್ ಒಪ್ಪಿಕೊಂಡಿದ್ದು, ವರದಿ ಆಧರಿಸಿ ಗೋಕರ್ಣ ಮಹಾಬಲೇಶ್ವರ ದೇವಸ್ಥಾನ ಸಮಿತಿ ರಚನೆ ಬಗ್ಗೆ ನಿರ್ದೇಶನ ನೀಡಿದೆ. ಜಿಲ್ಲಾ ನ್ಯಾಯಾಧೀಶರು ಸಮಿತಿಯ ಭಾಗವಾಗಿರತಕ್ಕದ್ದು ಅಥವಾ ಎಡಿಜೆ ಶ್ರೇಣಿಗಿಂತ ಕಡಿಮೆಯಿಲ್ಲದ ಯಾವುದೇ ಸದಸ್ಯರನ್ನು ನೇಮಿಸಬೇಕು ಎಂದು ಸುಪ್ರೀಂಕೋರ್ಟ್ ಆದೇಶ ಹೊರಡಿಸಿದೆ.



ಸಮಿತಿಗೆ ನೇಮಕಗೊಂಡವರು ನ್ಯಾಯಮೂರ್ತಿ ಶ್ರೀಕೃಷ್ಣರೊಂದಿಗೆ ಸಮಾಲೋಚಿಸಬಹುದು. ಸಮಾಲೋಚಿಸಿ ಸಮಿತಿಯ ನಿರ್ಧಾರಗಳನ್ನು ತೆಗೆದುಕೊಳ್ಳುವುದು. ಅಲ್ಲದೇ ಅಧ್ಯಕ್ಷರು ಆಯ್ಕೆಯ ಮತವನ್ನು ಹೊಂದಿರುತ್ತಾರೆ . ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನ ಹೊರತುಪಡಿಸಿ ಸದಸ್ಯರು ಸಲಹೆ ನೀಡಬಹುದು. ಅಧ್ಯಕ್ಷರ ನಿರ್ಧಾರದ ಮೇಲೆ ಇತರ ಸದಸ್ಯರು ವೀಟೋ ಅಧಿಕಾರ ಚಲಾಯಿಸುವಂತಿಲ್ಲ ಎಂದು ಸುಪ್ರೀಂಕೋರ್ಟ್ ತಿಳಿಸಿದೆ.

ಇನ್ನು ಸರ್ಕಾರ ನಾಲ್ವರು ಖಾಸಗಿ ಸದಸ್ಯರನ್ನು ನೇಮಕ ಮಾಡಬಹುದು. ಆದ್ರೆ, ನಾಲ್ವರು ಖಾಸಗಿ ಸದಸ್ಯರು ಉಪಧಿವಾಂತರಾಗಿರಬೇಕು ಎಂದು ಕಲೆ ಸಲಹೆ ಸೂಚನೆಗಳನ್ನು ನೀಡಿ ಮುಂದಿನ ವಿಚಾರಣೆಯನ್ನು ಸೆಪ್ಟಂಬರ್‌ಗೆ ಮುಂದೂಡಿದೆ.

ಗೋಕರ್ಣದ ಮಹಾಬಲೇಶ್ವರ ದೇವಸ್ಥಾನ ಗರ್ಭಗುಡಿಯ ನಂದಿ ಮಂಟಪ ಪೂಜೆ ಹಾಗೂ ತೀರ್ಥ-ಪ್ರಸಾದ ವಿತರಣೆ ವಿಷಯಕ್ಕೆ ಸಂಬಂಧಿಸಿ ಇದೇ 2024, ಮೇ ತಿಂಗಳಲ್ಲಿ ಉಪಾಧಿವಂತ ಎರಡು ಕುಟುಂಬಗಳ ನಡುವೆ ವಾದ-ವಿವಾದವಾಗಿತ್ತು. ಕೆಲ ವರ್ಷಗಳಿಂದ ಒಂದೇ ಕುಟುಂಬದವರು ವರ್ಷವಿಡೀ ಪೂಜೆ, ತೀರ್ಥ ಪ್ರಸಾದ ವಿತರಣೆ ಕರ್ತವ್ಯ ನಿರ್ವಹಿಸಿ ಇನ್ನೊಂದು ಮನೆತನಕ್ಕೆ ಅವಕಾಶ ನೀಡದಿರುವ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಉಪವಿಭಾಗಾಧಿಕಾರಿ ಕಲ್ಯಾಣಿ ಕಾಂಬ್ಳೆ ಸಮುಖದಲ್ಲೂ ಸಭೆ ನಡೆದಿತ್ತು, ಎರಡೂ ಕುಟುಂಬದವರು ವಾಗ್ವಾದ ನಡೆಸಿದ್ದರಿಂದ ದಾಖಲೆ ಒದಗಿಸುವಂತೆ ಸೂಚಿಸಿದ್ದರು. ಅಲ್ಲದೇ ಪ್ರಸಾದ ಮಾರಾಟ ಮಾಡುವ ಆರೋಪ ವ್ಯಕ್ತವಾದ ಹಿನ್ನೆಲೆಯಲ್ಲಿ ಅದನ್ನು ತಾತ್ಕಾಲಿಕವಾಗಿ ನಿಲ್ಲಿಸುವಂತೆ ನಿರ್ದೇಶಿಸಿದ್ದರು.

ಬಳಿಕ ಮಹಾಬಲೇಶ್ವರ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ಸುಪ್ರೀಂಕೋರ್ಟ್ ನೇಮಿಸಿದ ನಿವೃತ್ತ ನ್ಯಾಯಾಮೂರ್ತಿ ಬಿ.ಎನ್. ಶ್ರೀಕೃಷ್ಣ ನೇತೃತ್ವದ ಮೇಲುಸ್ತವಾರಿ ಸಮಿತಿಯ ಸಭೆ ನಡೆಸಲಾಗಿತ್ತು. ಅಂದಿನ ಸಭೆಯಲ್ಲಿ ಪೂಜಾ ವಿಷಯಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ಆದೇಶ ಪಡೆದವರ ಬಗ್ಗೆ ಸುದೀರ್ಘ ಚರ್ಚೆ ನಡೆದಿತ್ತು.

2021ರ ಏಪ್ರಿಲ್ 19ರಂದು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಧೀಶ ಎ.ಎಸ್. ಬೋಬಡೆ ನೇತೃತ್ವದ ತ್ರಿಸದಸ್ಯ ಪೀಠ ಗೋಕರ್ಣ ಮಹಾಬಲೇಶ್ವರ ದೇವಸ್ಥಾನ ಅಧಿಕಾರವನ್ನು ನಿವೃತ್ತ ನ್ಯಾಯಾಧೀಶ ಬಿ.ಎನ್ ಶ್ರೀಕೃಷ್ಣ ನೇತೃತ್ವದ ಸಮಿತಿಗೆ ಹಸ್ತಾಂತಿಸುವಂತೆ ಮಧ್ಯಂತರ ಆದೇಶ ನೀಡಿತ್ತು. ಈ ಸಮಿತಿಯಲ್ಲಿ ಒಟ್ಟು ಎಂಟು ಜನ ಸದಸ್ಯರಿದ್ದು, ಉತ್ತರ ಕನ್ನಡ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಕುಮಟಾ ಉಪ ಸಹಾಯಕ ಆಯುಕ್ತ, ಇಬ್ಬರು ಗಣ್ಯರು ಹಾಗೂ ಇಬ್ಬರು ಉಪಾಧಿವಂತರು ಇರುವಂತೆ ಆದೇಶದಲ್ಲಿ ತಿಳಿಸಲಾಗಿತ್ತು.

Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com